# ಯುಗರಶ್ಮಿ

- ಭುಟ್ಟೋ ಪತನ
- ಝೊರಾಸ್ಟರ್ ಮತ್ತು ಕನ್‌ಫ್ಯೂಸಿಯಸ್
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
- ಬಹುಪತ್ನಿತ್ವ
- ಶಿಲುಬೆಯಿಂದ ಯೇಸುವಿನ ವಿಮೋಚನೆ
- ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ
ಮಾರ್ಚ್ 1978
ಅಮಾನ್ 1357
ಬೆಲೆ: ರೂ. 1-00

"ಅಮಾನತು"ಗಳನ್ನು ಅತ್ಯಂತ ಅರ್ಹರಾದವರಿಗೆ ಒಪ್ಪಿಸಲು ಅಲ್ಲಾಹು ಆಜ್ಞಾಪಿಸುತ್ತಾನೆ; ನೀವು ಜನರಿಗೆ ನ್ಯಾಯ ವಿಧಿಸುವಾಗ ನೀತಿಯನ್ನು ಕೈಗೊಳ್ಳಿರಿ.

—ಪವಿತ್ರ ಖುರ್‌ಆನ್ (4:59)

# ಯು ಗ ರ ಶ್ಮಿ

## ತ್ರೈಮಾಸಿಕ

23/1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575 001.

ಸಂಪುಟ: 3 ಜನವರಿ–ಮಾರ್ಚ್ 1978/ಸುಲ್ಹ್–ಅಮಾನ್ 1357 ಸಂಚಿಕೆ: 4

ಸಂಪಾದಕ: **ಮುಹಮ್ಮದ್ ಯೂಸುಫ್**

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು


**ವಿಷಯ ಸೂಚಿಕೆ:**


* ಮತ ಸೌಹಾರ್ದ
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು
* ಭುಟ್ಟೋ ಪತನ
* ಝೊರಾಸ್ಟರ್ ಮತ್ತು ಕನ್‌ಫ್ಯೂಸಿಯಸ್
* ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ—2
* ಬಹುಪತ್ನಿತ್ವ
* ಶಿಲುಬೆಯಿಂದ ಯೇಸುವಿನ ವಿಮೋಚನೆ
* ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು
* ಸಂಪಾದಕರಿಗೆ ಪತ್ರ
* ಪುಸ್ತಕ ವಿಭಾಗ — ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?


**Statement about the ownership and other particulars about newspaper**

**YUGARASHMI**

Form IV (See Rule 8)

| | | | |
|---|---|---|---|
| 1. | Place of Publication | : | Mangalore |
| 2. | Periodity of Publication | : | Quarterly |
| 3. | Printer's Name | : | B Madhava Kulal |
| | Nationality | : | Indian |
| | Address | : | Lower Car Street, Mangalore-575001. |
| 4. | Publisher's Name | : | Muhammad Yusuf |
| | Nationality | : | Indian |
| | Address | : | 23/1008, Ansari Road, Bunder, M'lore-1. |
| 5. | Editor's Name | : | Muhammad Yusuf |
| | Nationality | : | Indian |
| | Address | : | 23/1008, Ansari Road, Bunder, M'lore-1 |
| 6. | Name and address of individuals who own the newspaper and partners or share-holders holding more than one per cent of the total capital | : | Jamath Ahmadiyya, 23/1008, Ansari Road, Bunder, Mangalore-575001. |

I Muhammad Yusuf, hereby declare that the particulars given above are true to the best of my knowledge and belief.

Date: 1-3-1978 (sd.) Muhammad Yusuf

بسم الله الرحمن الرحيم

نحمده ونصلي على رسوله الكريم

# ಯುಗ ರಶ್ಮಿ

| ಸಂಪುಟ: 3 | ಜನವರಿ–ಮಾರ್ಚ್ 1978/ ಸುಲ್ಹ್–ಅಮಾನ್ 1357 | ಸಂಚಿಕೆ: 4 |
|---|---|---|

## ಮತ ಸೌಹಾರ್ದ

ಧಾರ್ಮಿಕವಾದ ಭಿನ್ನಾಭಿಪ್ರಾಯ ಕಾರಣದಿಂದ ವಿವಿಧ ಸಮುದಾಯಗಳೆಡೆಯಲ್ಲಿ ಸೌಹಾರ್ದಕ್ಕೆ ಪ್ರತಿಬಂಧಕವಾಗಿರುವ ಭಿನ್ನತಾ ಬೀಜಗಳು ದಿನೇದಿನೇ ಬೆಳೆಯುತ್ತಾ ಹೋಗುವಾಗ ಪರಸ್ಪರ ಮೈತ್ರಿ ಹೇಗೆ ತಾನೇ ಸಾಧ್ಯವಾದೀತೆಂಬ ಶಂಕೆ ಯಾರಿಗಾದರೂ ಉಂಟಾದೀತು. ಅದಕ್ಕೆ ನಾನಿಲ್ಲಿ ಉತ್ತರ ಹೇಳಿಕೊಳ್ಳುತ್ತೇನೆ: ಯಥಾರ್ಥ ಮತಪರವಾದ ಭಿನ್ನತೆಯು ವಿವೇಕವನ್ನೂ ನೀತಿಯನ್ನೂ ಅನುಭವ ಜ್ಞಾನವನ್ನೂ ಆಧಾರವಾಗಿಟ್ಟುಕೊಂಡಿರುವ ಚಿಂತನೆಯ ಫಲದಿಂದಾಗಿರಬೇಕಾಗಿದೆ. ಮನುಷ್ಯನು ವಿವೇಕ ವಿಭೂಷಿತನಾಗಿರುವುದು, ಅವನು ವಿವೇಕಕ್ಕೂ ನೀತಿಗೂ ವಿರುದ್ಧವಾದುದನ್ನಾಗಲೀ, ಅನುಭವ ಜ್ಞಾನಕ್ಕೆ ವಿಪರೀತವಾದುದನ್ನಾಗಲೀ ಸ್ವೀಕರಿಸದಿರಲಿಕ್ಕಾಗಿಯೇ ಆಗಿದೆ. ಈ ವಾಸ್ತವಾಂಶವನ್ನು ಗ್ರಹಿಸುವುದಾದರೆ ಲಘುತರವಾದ ಅಭಿಪ್ರಾಯ ವ್ಯತ್ಯಾಸಗಳೊಂದು ಸಹ ಮೈತ್ರಿಗೆ ಅಡ್ಡಿಯಾಗಲಾರದೆಂದು ಮನದಟ್ಟಾಗಬಹುದು. ಒಂದು ಸಮುದಾಯವು ಮತ್ತೊಂದು ಸಮುದಾಯದ ಭಕ್ತ್ಯಾದರಗಳಿಗೆ ಪಾತ್ರರಾದ ಪ್ರವಾದಿಗಳನ್ನೋ ಮಹಾತ್ಮರನ್ನೋ ಅವರ ಪವಿತ್ರ ಗ್ರಂಥವನ್ನೋ ಅವಹೇಳನವನ್ನುಂಟುಮಾಡಲೋ ಅಪಮಾನಿಸಲೋ ಪ್ರೇರಿತರಾಗುವ ರೀತಿಯ ವಿಶ್ವಾಸ, ಅಭಿಪ್ರಾಯ ವ್ಯತ್ಯಾಸಗಳು ಪರಸ್ಪರ ಸೌಹಾರ್ದಕ್ಕೂ ಮೈತ್ರಿಗೂ ಪ್ರತಿಬಂಧಕಗಳಾಗುತ್ತವೆ......................

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನೂ ಮಹಾತ್ಮರನ್ನೂ ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟುಮಾಡಿ ಮತಪರವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯನ್ನುಂಟುಮಾಡುವ ಒಂದು ಭಯಂಕರ ವಿಷವೆಂದು ದೀರ್ಘಕಾಲದ ಅನುಭವಗಳೂ ವಿವಿಧ ಸಂದರ್ಭಗಳಲ್ಲಿ ನಡೆದ ಪರೀಕ್ಷಾ ಸಂಭವಗಳೂ ರುಜುಪಡಿಸಿರುತ್ತವೆ. ಯಾವ ರಾಜ್ಯನಿವಾಸಿಗಳು ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುತ್ತಾರೋ ಅವರಿಗೆ ಸಮಧಾನದ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಮತ್ತೊಂದು ಸಮುದಾಯದ ಪ್ರವಾದಿಗಳನ್ನು (ಅಥವಾ ಎರಡೂ ಸಮುದಾಯಗಳು ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ಅನ್ಯೋನ್ಯ ಯಥಾರ್ಥ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. (ಪೈಗಾಮೆ ಸುಲ್ಹ್—1908).

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

## ನೀತಿನ್ಯಾಯ

1. ನ್ಯಾಯಾಧಿಪತಿ ನೀತಿಯನ್ನು ತೋರಿಸುವಾಗ ಪರಮಾತ್ಮನ ಕೈ ಅವನಿಗೆ ಬೆಂಬಲ ನೀಡುತ್ತದೆ. ದಾನ ಮಾಡುವವನು ದಾನ ನೀಡುವಾಗಲೂ ಪರಮಾತ್ಮನ ಕೈ ಅವನಿಗೆ ಬೆಂಬಲ ನೀಡುತ್ತದೆ.

2. ಶಿಕ್ಷೆಗಳನ್ನು ವಿಧಿಸುವುದು ಸಾಧ್ಯವಿದ್ದಷ್ಟು ಕಡಿಮೆ ಮಾಡಬಹುದಾಗಿದೆ. ಆದರೆ ಶಿಕ್ಷೆಗಳನ್ನು ಸಂಪೂರ್ಣ ಇಲ್ಲದ ಹಾಗೆ ಮಾಡುವುದು ಆಡಳಿತಾಧಿಕಾರಿಗೆ ತಕ್ಕುದಲ್ಲ.

3. ಜನರನ್ನು ಸಾಧ್ಯವಿದ್ದಷ್ಟು ಶಿಕ್ಷೆಯಿಂದ ವಿಮುಕ್ತ ಮಾಡಲು ಪ್ರಯತ್ನಿಸಿರಿ. ಸಾಧ್ಯವಿರುವ ಎಲ್ಲಾ ಅಪೇಕ್ಷೆಗಳ ಅನುಕೂಲತೆಗಳನ್ನು ಅವರಿಗೆ ನೀಡಿರಿ. ಶಿಕ್ಷೆ ಕೊಡುವುದರಲ್ಲಿ ತಪ್ಪು ಸಂಭವಿಸುವುದಕ್ಕಿಂತ ದಯೆಯನ್ನು ತೋರಿಸುವುದರಲ್ಲಿ ತಪ್ಪು ಸಂಭವಿಸುವುದು ನ್ಯಾಯಾಧೀಶನಿಗೆ ಒಳ್ಳೆಯದು.

4. ಶ್ರದ್ಧೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸಿ ಸರಿಯಾದ ತೀರ್ಮಾನವನ್ನು ಕೈಗೊಳ್ಳುವ ನ್ಯಾಯಾಧೀಶನಿಗೆ ಇಮ್ಮಡಿ ಪ್ರತಿಫಲವಿದೆ. ಶ್ರದ್ಧೆಯಿಂದ ಕರ್ತವ್ಯ ವಹಿಸಿ ತಪ್ಪಾದ ತೀರ್ಮಾನಕ್ಕೆ ತಲಪುವ ನ್ಯಾಯಾಧೀಶನಿಗೆ ಒಂದು ಪ್ರತಿಫಲವಿದೆ.

5. ನಿಮ್ಮಲ್ಲಿ ಯಾರಾದರೂ ನ್ಯಾಯಾಧಿಪತಿಯಾಗಿ ನೇಮಿಸಲ್ಪಟ್ಟರೆ, ಕೋಪಗೊಂಡ ಸಮಯದಲ್ಲಿ ತೀರ್ಮಾನ ವಿಧಿಸದಿರಲು ಗಮನಿಸತಕ್ಕದ್ದು. ಕಕ್ಷಿಗಳೆಡೆಯಲ್ಲಿ ಸರಿಯಾದ ಸಮಭಾವನೆಯನ್ನು ಪಾಲಿಸಬೇಕು. ಕೂತುಗೊಳ್ಳುವುದರಲ್ಲಿಯೂ, ನೋಟದಲ್ಲಿಯೂ, ಹಾವಭಾವಗಳಲ್ಲಿಯೂ ಕೂಡ.

6. ಇಬ್ಬರು ತಮಗೆ ಒಂದು ತೀರ್ಪು ವಿಧಿಸಲು ಅಗತ್ಯಪಡಿಸಿ ನಿಮ್ಮನ್ನು ಸಮೀಪಿಸಿದರೆ, ಅವರಿಬ್ಬರ ಕೇಳಿಕೆಗಳನ್ನು ಆಲಿಸಿದ ನಂತರವಲ್ಲದೆ ನೀವು ಒಂದು ತೀರ್ಮಾನವನ್ನು ಕೈಗೊಳ್ಳಬಾರದು.

7. ಸಾಕ್ಷಿ ಹೇಳಲು ಕರೆಯಲ್ಪಟ್ಟರೆ ಸಾಕ್ಷ್ಯವನ್ನು ಬಹಿರಂಗಗೊಳಿಸದಿದ್ದರೆ ಅವನು ಸುಳ್ಳು ಸಾಕ್ಷಿ ಹೇಳಿದವನ ಹಾಗೆ ಆಗುತ್ತಾನೆ.

8. ಒಬ್ಬನ ವೈರಿಯ ಸಾಕ್ಷ್ಯಕ್ಕೆ ಬೆಲೆಯಿಲ್ಲ ಅವನ ಕುಟುಂಬದವರ ಮತ್ತು ಅವನ ಕೆಲಸಗಾರರ ಸಾಕ್ಷ್ಯಗಳಿಗೂ ಬೆಲೆಯಿಲ್ಲ.

9. ಒಂದು ಕೋರ್ಟಿನಲ್ಲಿ ವ್ಯವಹರಿಸುವಾಗ ಕಕ್ಷಿ-ಪ್ರತಿಕಕ್ಷಿಗಳನ್ನು ಸಮಾನವಾಗಿ ಪರಿಗಣಿಸತಕ್ಕದ್ದು.

10. ನಾನೋರ್ವ ಮನುಷ್ಯ ಮಾತ್ರವಾಗಿದ್ದೇನೆ. ನೀವು ನಿಮ್ಮ ವಿವಾದಗಳನ್ನು ನನ್ನ ಹತ್ತಿರ ತರುತ್ತೀರಿ. ಒಬ್ಬನ ನಿವೇದನ ಪ್ರತ್ಯಕ್ಷದಲ್ಲಿ ಸರಿಯೆಂದು ತೋರಿದರೆ ನಾನು ಕೇಳಿದುದರ ಆಧಾರದಲ್ಲಿ ಅವನಿಗೆ ಅನುಕೂಲವಾಗಿ ತೀರ್ಮಾನವನ್ನು ವಿಧಿಸಿಯೇನು. ಆದರೆ ಅವನು ತನ್ನ ಹಕ್ಕೆಂದು ವಾದಿಸುವುದು ಯಥಾರ್ಥದಲ್ಲಿ ತನ್ನ ಸಹೋದರನಿಗೆ ಸಿಗಬೇಕಾದುದಾಗಿದ್ದರೆ ನಾನು ಬೆಂಕಿಯ ಕೆಂಡವನ್ನಾಗಿದೆ ಅವನಿಗೆ ವಿಧಿಸಿದ್ದು.

(ಸರ್ ಮುಹಮ್ಮದ್ ಝಫ್ರುಲ್ಲಾ ಖಾನರು ಬರೆದ Wisdom of the Holy Prophetನಿಂದ ಆಯ್ದುದು).

# ಭುಟ್ಟೋ ಪತನ

—ಎಂ. ಪಿ. ಇಬ್ರಾಹಿಂ.

ಖಾಯಿದೆ ಆಝುಮ್ ಝುಲ್‌ಫಿಕರ್ ಅಲಿ ಭುಟ್ಟೋರ ಐತಿಹಾಸಿಕವಾದ ಈ ಕೆಲಸವು ಅವರ ಹೆಸರನ್ನು ಪಾಕಿಸ್ತಾನದ ಚರಿತ್ರೆಯಲ್ಲಿ ಬೆಳಗುವಂತೆ ಮಾಡಿದೆ. ಇಂದು ಸಮಸ್ತ ಮುಸ್ಲಿಂ ಲೋಕವು ಅವರನ್ನು ಗೌರವ ಭಾವದಿಂದ ಕಾಣುತ್ತದೆ. ಅವರ ವಿರೋಧ ಪಕ್ಷದವರು ಸಹ ಈ ಕಾರ್ಯಕ್ಕಾಗಿ ಅವರನ್ನು ಹೊಗಳುತ್ತಿದ್ದಾರೆ. ಪಾಕಿಸ್ತಾನದ ಅಹ್ಮದಿಯಾ ಮುಸ್ಲಿಮರನ್ನು ಮುಸ್ಲಿಮೇತರ ಅಲ್ಪ ಸಂಖ್ಯಾತರಾಗಿ ಘೋಷಿಸಿದ ಸರ್ವಾನುಮತದ ಆ ತೀರ್ಮಾನವು ಪಾಕಿಸ್ತಾನದ ಚರಿತ್ರೆಯಲ್ಲಿ ಮಾತ್ರವಲ್ಲ ಇಸ್ಲಾಂ ಧರ್ಮದ ಚರಿತ್ರೆಯಲ್ಲೇ ಅತಿ ಪ್ರಸಿದ್ಧವಾದ ಹಾಗೂ ಅಭಿಮಾನಕರವಾದ ಒಂದು ಕೆಲಸವಾಗಿದ್ದು ಈ ಸಾಧನೆಯ ಕೀರ್ತಿಯು ಪ್ರಧಾನ ಮಂತ್ರಿ ಝುಲ್‌ಫಿಕರ್ ಅಲಿ ಭುಟ್ಟೋರಿಗೆ ಸಲ್ಲುತ್ತದೆ. ಪ್ರಧಾನ ಮಂತ್ರಿಯವರು ಈ ವಿವಾದಕ್ಕೆ (ಅಹ್ಮದಿಯಾ ವಿವಾದಕ್ಕೆ) ಒಂದು ತೀರ್ಮಾನವನ್ನುಂಟುಮಾಡಿ ಸಮಸ್ತ ಮುಸ್ಲಿಂ ಜನಾಂಗದ ಅಂತಃಕರಣವನ್ನು ಜಯಿಸಿಕೊಂಡಿದ್ದಾರೆ; ಮಾತ್ರವಲ್ಲ ದೇವರ ಮತ್ತು ಪೈಗಂಬರರ ಅನುಗ್ರಹಗಳನ್ನೂ ಸಂಪಾದಿಸಿಕೊಂಡಿದ್ದಾರೆ. ಈ ನಿರ್ಣಯವು ರಾಷ್ಟ್ರವನ್ನೂ ಇಸ್ಲಾಂ ಧರ್ಮವನ್ನೂ ಸಂರಕ್ಷಿಸಿದೆ.

—DAWN, KARACHI, 8-9-1974

ಇವು, ನಮ್ಮ ದುರ್ದೈವಿ ನೆರೆ ರಾಷ್ಟ್ರವಾದ ಪಾಕಿಸ್ತಾನದಲ್ಲಿ 1974ನೇ ಸಪ್ಟಂಬರ್ 7ರಂದು ಅಲ್ಲಿಯ ಅಹ್ಮದಿಯಾ ಮುಸ್ಲಿಮರನ್ನು "ಮುಸ್ಲಿಮರಲ್ಲದ ಅಲ್ಪ ಸಂಖ್ಯಾತರು" ಎಂದು ಘೋಷಿಸಿದಾಗ ಪ್ರಧಾನ ಮಂತ್ರಿ ಝೆಡ್. ಎ. ಭುಟ್ಟೋರಿಗೆ ಧಾರಾಳವಾಗಿ ಲಭಿಸಿದ್ದ ಕೆಲವು ಬಣ್ಣನೆಯ ಅಭಿನಂದನೆಗಳು! ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯು ಅವರ ನೇತೃತ್ವದಲ್ಲಿ ಈ ರೀತಿಯ ಒಂದು ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಮೊದಲು, ರಾಷ್ಟ್ರದಾದ್ಯಂತ ಅಹ್ಮದಿಯರನ್ನು ಅತಿ ಭಯಾನಕವಾದ ಅತ್ಯಾಚಾರಕ್ಕೂ ಅಂಧಕಾರ ಯುಗವನ್ನು ನೆನಪಿಸುವಂತಹ ಪೀಡನೆಗಳಿಗೂ ಗುರಿಪಡಿಸಲಾಗಿತ್ತು. ಅತಿ ಕ್ರೂರವಾದ ಈ ಆಕ್ರಮಣಕ್ಕೆ ಸಜ್ಜಾದವರು ಅಲ್ಲಿನ ಮತ ಭ್ರಾಂತ "ಮುಲ್ಲಾ"ಗಳೂ ಅವರ ಗೂಂಡಾ ಸಹಚರರೂ ಆಗಿದ್ದರು. ಶಾಂತಿ ಸಮಾಧಾನದ ಸಂಕೇತವಾದ ಇಸ್ಲಾಂ ಧರ್ಮದ ಸುಂದರ ಪತಾಕೆಯನ್ನು ಎತ್ತಿ ಹಿಡಿಯಬೇಕಾದ ಈ ಮತಪಂಡಿತರು, ಮಾನವೀಯತೆಯು ಲಜ್ಜಿತವಾಗುವ ರೀತಿಯಲ್ಲಿ, ಒಂದು ದುರ್ಬಲ ಅಲ್ಪ ಸಂಖ್ಯಾತರ ಮೇಲೆ ಈ ರೀತಿಯ ಹೇಯ ದಾಳಿಯನ್ನು ನಡೆಸುವಷ್ಟು ಅಧಮ ಮಟ್ಟಕ್ಕೆ ಇಳಿದುಬಿಟ್ಟರು! ಅವರು ಅಹ್ಮದಿ ಪುರುಷರನ್ನೂ ಸ್ತ್ರೀಯರನ್ನೂ ಮಕ್ಕಳನ್ನೂ ಕೊಂದರು. ಅವರ ವಸತಿಗಳಿಗೆ ಬೆಂಕಿಯಿಟ್ಟರು. ಅವರ ವ್ಯಾಪಾರ ಸ್ಥಾಪನೆಗಳನ್ನು ಕೊಳ್ಳೆ ಹೊಡೆದರು. ಅವರ ಮಸೀದಿಗಳನ್ನೂ ಪುಸ್ತಕ ಭಂಡಾರಗಳನ್ನೂ ಆಸ್ಪತ್ರೆಗಳನ್ನೂ ನಾಶ ಮಾಡಿದರು. ಅಹ್ಮದಿಯಾ ಸಂಘಟನೆಯು ಮುದ್ರಿಸಿದ ಪವಿತ್ರ ಖುರ್‌ಆನಿನ ಸಾವಿರಾರು ಪ್ರತಿಗಳನ್ನು ಸುಟ್ಟು ಬೂದಿ ಮಾಡಿದರು. ಹೀಗೆ, ರಾಜ್ಯದಲ್ಲಿಡೀ ಅಹ್ಮದಿಯರಿಗೆ ಒಂದು ಯಥಾರ್ಥ ನರಕವೇ ಸೃಷ್ಟಿಸಲ್ಪಟ್ಟಾಗ ಪಾಕಿಸ್ತಾನದ ಪೋಲೀಸು ಅಧಿಕೃತರು ಇದನ್ನೆಲ್ಲಾ ಕಂಡೂ ಕಾಣದಂತೆ ನಿಷ್ಕ್ರಿಯರಾಗಿದ್ದರು! ಇದನ್ನು ಬೆನ್ನಟ್ಟಿಯೇ ಅಹ್ಮದೀಯರಿಗೆ ಹಲವೆಡೆಗಳಲ್ಲಿ ಆಹಾರ ಸಾಮಾಗ್ರಿಗಳನ್ನೂ ಕುಡಿಯಲು ನೀರನ್ನು ಸಹ ನೀಡದೆ ಕ್ರೂರವಾದ ಬಹಿಷ್ಕಾರ ಹೇರಲಾಯಿತು.

ಅಹ್ಮದಿಯಾ ಸಂಘಟನೆಯು ಉದ್ಭವದೊಂದಿಗೇನೇ ಅದರ ವಿರೋಧಿಗಳು ಅದನ್ನು ಎದುರಿಸುತ್ತಾ ಬಂದಿದ್ದಾರೆ. ಅಹ್ಮದೀಯರು ಮುಸ್ಲಿಮರಲ್ಲವೆಂದು ಸಾರುವ ಅನೇಕ "ಫತ್ವಾ" (ಧಾರ್ಮಿಕ ವಿಧಿ)ಗಳನ್ನೂ ಈ ಸಂಪ್ರ

ದಾಯವಾದಿ ಮುಸ್ಲಿಮರ ಮತ ಪಂಡಿತರು ನೀಡಿದ್ದರು. ಆದರೆ, ನಿಷೇಧಿಗಳ ವಿರೋಧವೂ ಮತ ಪಂಡಿತರ ಫತ್ವಾಗಳೂ ಗೂಂಡಾಗಳ ತೋಳ್ಬಲವೂ ಯಾವುದೂ ಸಹ ದೈವಿಕ ಸಂಘಟನೆಯಾದ ಅಹ್ಮದಿಯ ಜಮಾಅತಿನ ಪುರೋಗಮನವನ್ನು ತಡೆಯಲು ಪರ್ಯಾಪ್ತವಾಗಿಲ್ಲವೆಂದು ಕಾಲವು ತಿಳಿಸಿಕೊಟ್ಟಿದೆ. ಅಹ್ಮದಿಯಾ ಸಂಘಟನೆಯು ದೈವಿಕ ವಾಗ್ದಾನಗಳ ಪ್ರಕಾರ ದಿನೇ ದಿನೇ ವಿಜಯದಿಂದ ವಿಜಯಕ್ಕೆ ನೆಗೆಯಿತು. ಭೂಗೋಳದ ಆರು ಭೂಖಂಡಗಳಲ್ಲೂ ಅದು ತನ್ನ ಕೊಂಬೆಗಳನ್ನು ಚಾಚಿಕೊಂಡು ಒಂದು ಅಂತರ್ದೇಶೀಯ ಸಂಘಟನೆಯಾಗಿ ಬೆಳೆಯತೊಡಗಿತು. ಅಹ್ಮದೀಯರು ಮುಸ್ಲಿಮರಲ್ಲವೆಂದು ವಿಧಿಸುವ ಸಾವಿರಾರು ಫತ್ವಾಗಳನ್ನು ಮುಸ್ಲಿಂ ಮತಪಂಡಿತರು ನೀಡಿದ್ದರೂ ಅದರಿಂದ ಏನೂ ಪ್ರಯೋಜನವಾಗಲಿಲ್ಲವೆಂದು ಕಂಡು ಹತಾಶರಾದ ಎದುರಾಳಿಗಳು ಕೊನೆಗೆ, ಸರಕಾರವೇ ಅವರನ್ನು ಅಮುಸ್ಲಿಮರೆಂದು ಘೋಷಿಸಬೇಕೆಂದು ದೊಂಬಿಯೆದ್ದರು. ಪವಿತ್ರ ಇಸ್ಲಾಮಿನ ಅನುಯಾಯಿಗಳೆಂದು ಕರೆಯಿಸಿಕೊಳ್ಳುವ ಈ ಉಲೆಮಾ ವರ್ಗವು ಎಷ್ಟರ ಮಟ್ಟಿಗೆ ಅಧಃಪತನಕ್ಕಿಳಿಯಿತೆಂದರೆ, ಪಾಕ್ ಸರಕಾರವು ಅಹ್ಮದೀಯರನ್ನು ಮುಸ್ಲಿಮೇತರರಾಗಿ ಘೋಷಿಸಿದಲ್ಲಿ ಭುಟ್ಟೋರ ಬೂಟ್ಸನ್ನು ತಮ್ಮ ವಾಡಿ ರೋಮಗಳಿಂದ ಪಾಲಿಶ್ ಮಾಡಲು ತಯಾರೆಂದು ಸಹ ಅಲ್ಲಿನ ಮುಲ್ಲಾಗಳು ಹೇಳಿದರು! **(PAKISTAN TIMES).**

ಅಂತೂ, 1974ನೇ ಸಪ್ಟೆಂಬರ್ 7ರಂದು ಅಹ್ಮದೀಯರು ಮುಸ್ಲಿಮರಲ್ಲವೆಂದು ಘೋಷಿಸುವ ಒಂದು ಮಸೂದೆಯನ್ನು ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಯು ಮಂಜೂರು ಮಾಡಿತು! ಜತೆಯಲ್ಲೇ ಪಾಕ್‌ಪಿನೆಲ್ ಕೋಡಿನಲ್ಲೊಂದು ತಿದ್ದುಪಡಿ — ಮುಸ್ಲಿಮರೆಡೆಯಲ್ಲಿ ಪ್ರಚಲಿತ ನಂಬಿಕೆಯಾಗಿರುವ ಮುಹಮ್ಮದ್ ಪೈಗಂಬರ್ (ಸ)ರವರ "ಅಂತ್ಯ ಪ್ರವಾದಿತ್ವ"ಕ್ಕೆ ವಿರುದ್ಧವಾಗಿ ವರ್ತಿಸುವುದೂ ನುಡಿಯುವುದೂ ಪ್ರಚಾರ ಮಾಡುವುದೂ ಶಿಕ್ಷಾರ್ಹವೆಂದು!

ಅಹ್ಮದಿಯಾ ಸಂಘಟನೆಯ ಈಗಿನ ಖಲೀಫರಾಗಿರುವ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೆಬರು 1974ನೇ ಜೂನ್ 21ರಂದು ರಬ್‌ವಾದಲ್ಲಿ ಮಾಡಿದ ಒಂದು ಭಾಷಣದಲ್ಲಿ ಈ ರೀತಿ ಹೇಳಿದರು: "ಇಂದು, ಮತ ಸ್ವಾತಂತ್ರ್ಯವೆಂಬುದರ ಅರ್ಥವು, ಪ್ರತಿಯೊಬ್ಬ ವ್ಯಕ್ತಿಗೂ ತಾನು ಮುಸ್ಲಿಮನೋ ಅಲ್ಲವೋ ಎಂದು ತೀರ್ಮಾನಿಸುವ ಹಕ್ಕಿದೆ ಎಂಬುದಾಗಿದೆ. ಅವನು ಹಿಂದೂ ಆಗಿರುವನೋ ಇಲ್ಲವೋ ಎಂದೂ ಬೌದ್ಧನೋ ಅಲ್ಲವೋ ಎಂದೂ ಕ್ರೈಸ್ತನಾಗಿರುವನೋ ಇಲ್ಲವೋ ಎಂದೂ ಆತನು ಒಬ್ಬ ನಾಸ್ತಿಕನೋ ನಾಸ್ತಿಕನಲ್ಲವೋ ಎಂದೂ ತೀರ್ಮಾನಿಸುವ ಹಕ್ಕು ಪ್ರತಿಯೊಬ್ಬ ವ್ಯಕ್ತಿಗೂ ಇದೆ. ತಾನು ಯಾವ ಧರ್ಮಾವಲಂಬಿಯೆಂದು ತೀರ್ಮಾನಿಸಬೇಕಾದುದು ಆಯಾ ವ್ಯಕ್ತಿಯೇ ಹೊರತು ಇತರರಲ್ಲ. ಲೋಕದ ಯಾವ ಶಕ್ತಿಗೂ, ಎಲ್ಲಾ ಶಕ್ತಿಗಳೂ ಒಟ್ಟುಗೂಡಿದರೂ ಸಹ ಆತನಿಂದ ಈ ಹಕ್ಕನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ... ಆದುದರಿಂದ, ಮತ ಸ್ವಾತಂತ್ರ್ಯವೆಂದರೆ' ತನ್ನ ಮತ ಯಾವುದೆಂದು ಘೋಷಿಸುವ ಸ್ವಾತಂತ್ರ್ಯವಾಗಿದೆ. ಈ ಹಕ್ಕನ್ನು ನಿಭಾಯಿಸುವಲ್ಲಿ ಮಧ್ಯೆಪ್ರವೇಶಿಸಲು ಯಾವ ಶಕ್ತಿಗೂ ಯಾವ ಸರಕಾರಕ್ಕೂ ಅಧಿಕಾರವಿಲ್ಲ. ಸಾಂವಿಧಾನಾತ್ಮಕವಾಗಿಯೂ ಕಾನೂನಿನ ದೃಷ್ಟಿಯಿಂದಲೂ ಪ್ರತಿಯೊಬ್ಬ ವ್ಯಕ್ತಿಯೂ ತಾನು ಇಂತಹ ಧರ್ಮಕ್ಕೆ ಸೇರಿದವನೆಂದು ಘೋಷಿಸುವ ಹಾಗೂ ತನ್ನ ವಿಶ್ವಾಸ ಪ್ರಕಾರ ಆರಾಧನಾ ಕರ್ಮಗಳನ್ನೂ ಜೀವನ ರೀತಿಯನ್ನೂ ಕ್ರಮಪಡಿಸಿಕೊಳ್ಳುವ ಹಕ್ಕನ್ನೂ ಹೊಂದಿರುತ್ತಾನೆ. ಮಾತ್ರವಲ್ಲ, ತನ್ನ ಧರ್ಮವನ್ನು ತಾನು ನಂಬುತ್ತಿರುವ ವಿಶ್ವಾಸ ತತ್ವಗಳ ಪ್ರಕಾರವೇ ಇತರರೆಡೆಯಲ್ಲಿ ಪ್ರಚಾರ ಮಾಡುವ ಹಕ್ಕನ್ನೂ ಸಹ ಪ್ರತಿಯೊಬ್ಬ ವ್ಯಕ್ತಿಯೂ ಹೊಂದಿರುವನು. ಅಕ್ರಮ ರೀತಿಯಲ್ಲಿ ಮತಪ್ರಚಾರ ಮಾಡುವುದನ್ನು ತಡೆಯುವುದು ಮಾತ್ರವೇ ಕಾನೂನಿನ ಕಾರ್ಯಕ್ಷೇತ್ರದಲ್ಲಿ ಒಳಪಡುತ್ತದೆ. ಒಬ್ಬ ವ್ಯಕ್ತಿಯು ನಂಬದಿರುವ ಒಂದು ತತ್ವವು ಆತನ ಮೇಲೆ ಆರೋಪಿಸಲ್ಪಡುವುದಾದರೆ ಅದನ್ನು ತಡೆಯಬೇಕಾದುದು ಸಹ ಕಾನೂನಿನ ಕರ್ತವ್ಯವಾಗಿರುತ್ತದೆ. ಮತಪ್ರಚಾರ ರಂಗದಲ್ಲಿ ಅಸಭ್ಯ ಭಾಷೆಯನ್ನು ಪ್ರಯೋಗಿಸದಂತೆಯೂ ಕಾನೂನು ಒಬ್ಬನೊಡನೆ ಆಜ್ಞಾಪಿಸಬಹುದು. ಮತಪ್ರಚಾರವೆಂದರೆ, ತಾನು ನಂಬುತ್ತಿರುವ ವಿಶ್ವಾಸ ಸಂಹಿತೆಗೆ ಸಹಾಯಕವಾದ ಆಧಾರಗಳನ್ನೂ ಸಾಕ್ಷ್ಯಗಳನ್ನೂ ನೀಡಿ ಅದನ್ನು ಸ್ಪಷ್ಟಪಡಿಸುವುದಾಗಿದೆ... ಧರ್ಮವೆಂಬುದು ಮನುಷ್ಯನ ಅಂತರಾತ್ಮಕ್ಕೂ ಮನಃಸ್ಸಾಕ್ಷಿಗೂ ಸಂಬಂಧಪಟ್ಟುದಾಗಿರುವ ಕಾರಣ ವಿಶ್ವಾಸಿ ಯಾರು? ಅವಿಶ್ವಾಸಿ ಯಾರು? ಎಂದು ತೀರ್ಮಾನಿಸಲು ದೇವರಿಂದ ಮಾತ್ರವೇ ಸಾಧ್ಯ. ಸರ್ವಶಕ್ತನಾದ ಪರಮಾತ್ಮನು ತನ್ನ ದಿವ್ಯ ದೃಷ್ಟಾಂತಗಳ ಮೂಲಕ ಸತ್ಯ

ವಿಶ್ವಾಸಿ ಯಾರೆಂದೂ ಸತ್ಯನಿಷೇಧಿ ಯಾರೆಂದೂ ತೋರಿಸಿ ಕೊಡುವನು!" (We are Muslims, page 12, 13)

ಎಲ್ಲರಿಗೂ ತಿಳಿದಿರುವಂತೆ, ಅಹ್ಮದೀಯರನ್ನು ಮುಸ್ಲಿಮೇತರರನ್ನಾಗಿ ಘೋಷಿಸಬೇಕೆಂಬ ಅಭಿಪ್ರಾಯವು ಅಂದಿನ ಸೌದಿ ಅರೇಬಿಯದ ರಾಜನಾಗಿದ್ದ ಫೈಝುಲ್ ರಿಂದ ಪ್ರೇರೇಪಿಸಲ್ಪಟ್ಟದ್ದಾಗಿದೆ. ಅಹ್ಮದಿಯಾ ಸಂಘಟನೆಯನ್ನು ನಿರ್ನಾಮ ಮಾಡಲು ಬೇಕಾಗಿ ಅವರು ಭುಟ್ಟೋ ಸರಕಾರಕ್ಕೆ ಅಪಾರ ಧನವನ್ನು ನೀಡಿದರೆಂದೂ ಹೇಳಲ್ಪಡುತ್ತದೆ. (The Economist, London 15-6-74). 1974ನೇ ಮಾರ್ಚ್ ತಿಂಗಳಲ್ಲಿ ಸೌದಿ ಅರೇಬಿಯದ ಜಿದ್ದಾದಲ್ಲಿಸೇರಿದ ಒಂದು ಮುಸ್ಲಿಂ ಜಾಗತಿಕ ಸಮ್ಮೇಳನವು ಅಹ್ಮದಿಯರನ್ನು ಮುಸ್ಲಿರಲ್ಲವೆಂದು ಘೋಷಿಸಿದುದೂ ಒಡನೆಯೇ ಅಹ್ಮದೀಯರು ಹಜ್ ಯಾತ್ರೆಗೆ ಬರಬಾರದೆಂಬ ಒಂದು ನಿಷೇಧಾಜ್ಞೆಯನ್ನು ಸೌದಿ ಅರೇಬಿಯಾವು ಹೊರಡಿಸಿದುದೂ ಈ ಗೂಢಾಲೋಚನೆಯ ಮೊದಲ ಹೆಜ್ಜೆಗಳಾಗಿವೆ. ಅದನ್ನು ಹಿಂಬಾಲಿಸಿಯೇ ಪಾಕಿಸ್ತಾನದಲ್ಲಿ ಅಹ್ಮದೀಯರಿಗೆದುರಾಗಿ ವ್ಯವಸ್ಥಾಪಿತವಾದ ರೀತಿಯ ಈ ಆಕ್ರಮಣವು ಆರಂಭವಾಯಿತು. ಅದರ ಪರಾಕಾಷ್ಠೆಯೆಂಬಂತೆ, ವಿರೋಧ ಪಕ್ಷದ ಸಹಾಯದೊಂದಿಗೆ ಪಾಕ್ ಸರಕಾರವು ಕುಪ್ರಸಿದ್ಧವಾದ ಆ ತೀರ್ಮಾನವನ್ನೂ ಕೈಗೊಂಡಿತು. 90 ವರ್ಷಗಳಿಂದಲೂ ಸಂಕೀರ್ಣವಾಗಿದ್ದ ಅಹ್ಮದಿಯಾ ವಿವಾದವನ್ನು ಮಿಸ್ಟರ್ ಭುಟ್ಟೋ ಕೇವಲ 90 ದಿವಸಗಳಲ್ಲಿ ಪರಿಹರಿಸಿದರು! ಅಂದು, ಮುಸ್ಲಿಂ ಜಗತ್ತು ಅವರನ್ನು ಅಭಿನಂದಿಸಿತು; ಮುಸ್ಲಿಂ ಪತ್ರಿಕೆಗಳು ಅವರನ್ನು ಹೊಗಳಿತು!

ಪಾಕಿಸ್ತಾನದಲ್ಲಿ ಅಹ್ಮದಿಯರಿಗೆದುರಾದ ಅತ್ಯಾಚಾರವು ಅತಿ ಕ್ರೂರವಾದ ರೂಪವನ್ನು ತಾಳಿದಾಗ, ಸಂಘಟನೆಯ ಗೌರವಾನ್ವಿತ ನಾಯಕರಾದ ಖಲೀಫತುಲ್ ಮಸೀಹ್ III, 1974ನೇ ಜೂನ್ 6ರಂದು ಜಗತ್ತಿನ ಸರ್ವ ಅಹ್ಮದೀಯರಿಗೂ ನೀಡಿದ ಒಂದು ಸಂದೇಶದಲ್ಲಿ ಈ ರೀತಿ ಹೇಳಿದ್ದಾರೆ:

"ದೃಢಚಿತ್ತರೂ ಪ್ರಾರ್ಥನಾ ನಿರತರೂ ಆಗಿರಿ; ಸಹನೆಯುಳ್ಳವರೂ ಪ್ರಾರ್ಥನಾ ನಿರತರೂ ಆಗಿರಿ; ಸಹನೆಯುಳ್ಳವರೂ ಸದಾ ಪ್ರಾರ್ಥಿಸುವವರೂ ಆಗಿರಿ. ನೀವು ಸಾಷ್ಟಾಂಗ (ಸುಜೂದ್) ಮಾಡಿದ ಸ್ಥಳವು ನಿಮ್ಮ ಕಣ್ಣೀರಿನಿಂದ ಒದ್ದೆಯಾಗಲಿ. ಪ್ರತಿ ಕ್ಷಣದಲ್ಲೂ ಪ್ರಾರ್ಥನೆಯಲ್ಲಿ ಮಗ್ನರಾಗಿರಿ. ಇದೇ ನಿಮ್ಮ ವೈಶಿಷ್ಟ್ಯವನ್ನು ತೋರಿಸುವ ಚಿಹ್ನೆಯಾಗಿದೆ. ನಿಮ್ಮ ವಿಜಯಕ್ಕೂ ಇಹಪರ ಮೋಕ್ಷಕ್ಕೂ ಇದೇ ಕೀಲಿಗೈಯಾಗಿದೆ. ನೀವು ಅಲ್ಲಾಹುವನ್ನು ಕಣ್ಣೀರಿನಿಂದಲೂ ದುಃಖದಿಂದಲೂ ಕರೆದು, ಅವನು ನಿಮ್ಮ ಸಹಾಯಕ್ಕಾಗಿ ಬಂದಿರದ ಉದಾಹರಣೆಯು ಎಂದಾದರೂ ಉಂಟಾಗಿದೆಯೇ? ಅವನು ಪ್ರಾಮಾಣಿಕರಲ್ಲಿ ಪ್ರಾಮಾಣಿಕನಾಗಿದ್ದಾನೆ. ಎಲ್ಲರಿಗಿಂತಲೂ ತಾಳ್ಮೆಯುಳ್ಳವನೂ ಅತಿ ಹೆಚ್ಚು ಪ್ರೇಮಿಸುವವನೂ ಆಗಿದ್ದಾನೆ. ಕಷ್ಟದಲ್ಲಿ ಸಿಲುಕಿಕೊಂಡ ಒಂದು ಮಗುವಿನ ಗೋಳಾಟವು ಅದರ ತಾಯಿಯ ಮನಸ್ಸನ್ನು ಸೆಳೆಯುವುದಕ್ಕಿಂತಲೂ ಹೆಚ್ಚಾಗಿ, ಪರಮಾತ್ಮನ ಪ್ರಾಮಾಣಿಕ ಸೇವಕರ ನಮ್ರತೆಯ ಮೊರೆಯೂ ಪ್ರಾರ್ಥನೆಯೂ ಅವನನ್ನು ಆಕರ್ಷಿಸುತ್ತದೆ. ಆದುದರಿಂದ ರಾತ್ರಿ ವೇಳೆಗಳಲ್ಲಿ ಎಚ್ಚೆತ್ತು ನಿಮ್ಮ ಶೋಕ ವಿಲಾಪಗಳನ್ನು ಅವನ ಮುಂದಿಡಿರಿ. ನಿಮ್ಮ ಹಗಲುಗಳನ್ನು ಪ್ರಾರ್ಥನೆಯಲ್ಲೂ ಐಚ್ಛಿಕ ನಮಾಜುಗಳಲ್ಲೂ ಕಳೆಯಿರಿ. ಒಟ್ಟಿನಲ್ಲಿ, ನೀವು ಪ್ರಾರ್ಥನೆಯ ಮೂರ್ತಿಮತ್‌ಭಾವಗಳಾಗಿದ್ದುಕೊಂಡು ಪ್ರತಿ ಕ್ಷಣದಲ್ಲೂ ದೈವಿಕ ಸಹಾಯವನ್ನು ಪ್ರತೀಕ್ಷಿಸುತ್ತಾ ಇರಿ".

ಆಧ್ಯಾತ್ಮಿಕ ಮಂಡಲವನ್ನು ಮಾತ್ರ ಕಾರ್ಯಕ್ಷೇತ್ರವಾಗಿರಿಸಿದ ಇಂತಹ ಒಂದು ಪ್ರಾರ್ಥನಾ ನಿರತ ಸಂಘಟನೆಗೆದುರಾಗಿ ತಮ್ಮಿಂದ ಸಾಧ್ಯವಾದುದನ್ನೆಲ್ಲಾ ಅದರ ಎದುರಾಳಿಗಳು ಮಾಡಿದರು. ಈ ಆಕ್ರಮಣಗಳ ಪರಿಣಾಮಗಳೇನೆಂಬುದನ್ನು ಒಮ್ಮೆ ಅಳೆದು ನೋಡುವ.

ಪಾಕಿಸ್ತಾನದಲ್ಲಿ ಅಹ್ಮದೀಯರನ್ನು ಮುಸ್ಲಿಮೇತರರೆಂದು ಘೋಷಿಸಿದ ಅದೇ ವರ್ಷದಲ್ಲಿ, 1974ನೇ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ, ಅಹ್ಮದೀಯರನ್ನು ಅತಿ ಕ್ರೂರವಾದ ಮರ್ದನೆಗೆ ಗುರಿಪಡಿಸಿದ ಉತ್ತರ ಪಾಕಿಸ್ತಾನದಲ್ಲಿಯೇ ಅತಿ ಭಯಾನಕವಾದೊಂದು ಭೂಕಂಪನ ಉಂಟಾಯಿತು. ಅದರ ಫಲವಾಗಿ 5,000 ಜನರು ಮೃತಪಟ್ಟು 20 ಸಾವಿರಕ್ಕಿಂತಲೂ ಹೆಚ್ಚು ಮಂದಿ ಗಾಯಗೊಂಡರು; ಲಕ್ಷಗಟ್ಟಲೆ ಜನರಿಗೆ ವಸತಿಯಿಲ್ಲದಾಯಿತು. 90 ವರ್ಷಗಳ ಅಹ್ಮದಿಯಾ ವಿವಾದವನ್ನು 90 ದಿವಸಗಳಲ್ಲಿ ಬಗೆಹರಿಸಿದ ಭುಟ್ಟೋರ ರಾಜ್ಯದಲ್ಲಿ ಪರಮಾತ್ಮನು ಕೇವಲ 90 ನಿಮಿಷಗಳೊಳಗೆ ಅತಿ ಭಯಂಕರವಾದ ನಾಶ ನಷ್ಟಗಳನ್ನು ತಂದೊಡ್ಡಿದ!

ಒಂದು ವರ್ಷ ಕಳೆದಾಗ, 1975ರ ಏಪ್ರಿಲ್ ತಿಂಗಳಲ್ಲಿ ಸೌದಿ ಅರೇಬಿಯಾದ ಫೈಝಲ್‌ರಾಜ ತನ್ನ ಸೋದರಳಿಯನ ಗುಂಡಿಗೆ ಆಹುತಿಯಾದ ಅಚ್ಚರಿಯ ವಾರ್ತೆಯನ್ನು ನಾವು ಕೇಳಿದೆವು. ಯಾರ ಸಹಾಯದಿಂದ ಪಾಕಿಸ್ತಾನದ ಬಹುಸಂಖ್ಯಾತ ಮುಸ್ಲಿಮರು ಅಹ್ಮದೀಯರನ್ನು ನರಬೇಟೆ ನಡೆಸಿದ್ದರೋ ಆ ಫೈಝಲ್ ರಾಜ, ಪೈಗಂಬರರ ಜನ್ಮದಿನಾಚರಣೆಯಂದು ತನ್ನ ನಿಕಟ ಸಂಬಂಧಿಕನ ಕೈಯಿಂದ ಕೊಲ್ಲಲ್ಪಟ್ಟಿದ್ದರು.

ಅತ್ತ ಪಾಕಿಸ್ತಾನದಲ್ಲಿ ಮಿ. ಬುಟ್ಟೋ ಅಹ್ಮದಿಯಾ ವಿವಾದವನ್ನು ಪರಿಹರಿಸಿ "ದೇವರ ಮತ್ತು ಪೈಗಂಬರರ ಅನುಗ್ರಹಾಶೀರ್ವಾದಗಳನ್ನು ಜಯಿಸಿಕೊಂಡ" ನಂತರವೂ ಸಹ ಅಲ್ಲಿನ ರಾಜಕೀಯ ಸ್ಥಿತಿಯು ಶಾಂತವಾಗಿರಲಿಲ್ಲ. ಅಲ್ಲಿ ರಾಜಕೀಯ ದೊಂಬಿಯು ಬೆಳೆಯುತ್ತಲೇ ಬಂತು. "ನೇಶನಲ್ ಅಲಯನ್ಸ್" ಎಂಬ 9 ವಿರೋಧ ಪಕ್ಷಗಳ ಒಂದು ಮೈತ್ರಿ ಕೂಟವು ಪಾಕಿಸ್ತಾನದ ಆಡಳಿತ ಪಾರ್ಟಿಗೆ ದುರಾಗಿ ಹಿಂಸಾತ್ಮಕ ಚಳವಳಿಗೆ ತೊಡಗಿತು. ನೂರಾರು ಪ್ರಜೆಗಳ ಪ್ರಾಣಗಳನ್ನು ಬಲಿ ತೆಗೆದುಕೊಂಡ ಅನೇಕ ನಾಟಕೀಯ ಘಟನೆಗಳ ಬಳಿಕವೂ ಅಲ್ಲಿನ ರಾಜಕೀಯ ಗೊಂದಲವು ನಿರ್ಣಯಾತೀತವಾಗಿಯೇ ಉಳಿಯಿತು.

ಈಗ, ಮೂರು ವರ್ಷಗಳು ಪೂರ್ತಿಯಾಗಿಲ್ಲ; 1977ರ ಜುಲೈ 5ರಂದು ಪಾಕಿಸ್ತಾನದ ಆಡಳಿತವನ್ನು ಸೇನೆಯು ಕೈಗೆತ್ತಿಕೊಂಡು ಅಲ್ಲಿ ಮಾರ್ಷಲ್‌ಲಾ ಜಾರಿಯಾಗಿದೆ. ಪಾಕಿಸ್ತಾನದಲ್ಲಿ 5½ ವರ್ಷಗಳ ಕಾಲ ಆಳ್ವಿಕೆ ನಡೆಸಿದ, "ದೇವರ ಮತ್ತು ಪೈಗಂಬರರ ಅನುಗ್ರಹಗಳನ್ನು ಸಂಪಾದಿಸಿಕೊಂಡ" ಶಕ್ತಿಶಾಲಿಯಾದ ಪ್ರಧಾನ ಮಂತ್ರಿ ಮಿಸ್ಟರ್ ಭುಟ್ಟೋರನ್ನು ಮಿಲಿಟರಿಯು ಕಸ್ಟಡಿಗೆ ತೆಗೆದುಕೊಂಡಿತು. ನಂತರ ಅವರು ಎರಡು ಸಲ ಬಿಡುಗಡೆಗೊಂಡರೂ ಕ್ರಿಮಿನಲ್ ಮೊಕದ್ದಮೆಗಳ ಮೇರೆಗೆ ಪುನಃ ಬಂಧಿಸಲ್ಪಟ್ಟು ಜೈಲಿಗೆ ತಳ್ಳಲ್ಪಟ್ಟಿದ್ದಾರೆ. ಅವರ ಮೇಲೆ ಹೊರಿಸಲ್ಪಟ್ಟ ಮೊಕದ್ದಮೆಗಳು ಎಷ್ಟರಮಟ್ಟಿಗಿವೆ ಎಂದರೆ, ಅವು ಸಾಬೀತಾದಲ್ಲಿ ಅವರನ್ನು ಗಲ್ಲಿಗೇರಿಸಲು ಸಹ ಸಾಧ್ಯವಿದೆಯೆಂದು ಹೇಳಲ್ಪಡುತ್ತದೆ!

ಈ ದಿವ್ಯ ಸಂಘಟನೆಯ 90 ವರ್ಷಗಳ ಚರಿತ್ರೆಯನ್ನು ಪರಿಶೀಲಿಸುವುದಾದರೆ, ಇದಕ್ಕೆದುರಾಗಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪ್ರಯೋಗಿಸಿದ ಪ್ರತಿಯೊಬ್ಬ ಆಡಳಿತಾಧಿಕಾರಿಯೂ ಶೋಚನೀಯ ದುರವಸ್ಥೆಗೆ ತಳ್ಳಲ್ಪಟ್ಟಿರುವುದಾಗಿ ನಮಗೆ ತಿಳಿದುಕೊಳ್ಳಲು ಸಾಧ್ಯವಿದೆ. ಅಫಘಾನಿಸ್ತಾನದ ರಾಜನಾಗಿದ್ದ ಅಮೀರ್ ಅಮಾನುಲ್ಲಾ ಖಾನ್ ಸಿಂಹಾಸನದಿಂದ ಕೆಳಗಿಳಿಸಲ್ಪಟ್ಟು ದೇಶ ಭ್ರಷ್ಟನಾಗಿ ಪಲಾಯನ ಮಾಡಿದುದೂ ಅಪಮಾನಿತನಾಗಿ ಪರದೇಶದಲ್ಲಿ ಮೃತನಾದುದೂ ಇನ್ನೂ ಮಾಗದ ಒಂದು ಉದಾಹರಣೆಯಾಗಿದೆ.

ಅದಕ್ಕೂ ಮೊದಲು ಹಬೀಬುಲ್ಲಾ ಖಾನನ ಆಳ್ವಿಕೆಯ ಕಾಲದಲ್ಲಿ ಅಫಘಾನಿಸ್ಥಾನದ ಒಬ್ಬ ಮಹನೀಯ ಧರ್ಮ ಜ್ಞಾನಿಯಾಗಿದ್ದ ಅಬ್ದುಲ್ ಲತೀಫ್ ಸಾಹೇಬರು ತನ್ನ ಅಹ್ಮದಿಯಾ ವಿಶ್ವಾಸಕ್ಕಾಗಿ ಕಲ್ಲೆಸೆದು ಕೊಲ್ಲಲ್ಪಟ್ಟರು. ಅಫಘಾನಿಸ್ತಾನದಲ್ಲಿ ಅಲ್ಲಿನ ಮತ ಪಂಡಿತರ ನಿರ್ದೇಶದ ಮೇರೆಗೆ ಅವರನ್ನು ಒಂದು ತೆರೆದ ಸ್ಥಳದಲ್ಲಿ ಕಲ್ಲೆಸೆದು ಕೊಲ್ಲಲು ನಿಶ್ಚಯಿಸಲ್ಪಟ್ಟಾಗ, ಮೊತ್ತಮೊದಲಿನ ಕಲ್ಲು ಹಬೀಬುಲ್ಲಾ ರಾಜನ ದುರ್ದೈವಿ ಕೈಯಿಂದ ಎಸೆಯಲ್ಪಟ್ಟಿತು. ಮತ ವಿಶ್ವಾಸದ ಹೆಸರಿನಲ್ಲಿ ನಡೆಸಿದ ಈ ಅತಿ ಕ್ರೂರ ಘಟನೆಯೂ ಅದರ ನಂತರ ಅಹ್ಮದಿಯ್ಯತ್ತನ್ನು ತೊಡೆದು ನೀಗಿಸಲು ರಾಜನು ಕೈಗೊಂಡ ಸಾಹಸಿಕ ಹೆಜ್ಜೆಯೂ ಮುಸ್ಲಿಂ ಮತ ಪಂಡಿತರ ದೃಷ್ಟಿಯಲ್ಲಿ ಆ ರಾಜನಿಗೂ "ದೇವರ ಮತ್ತು ಪೈಗಂಬರರ ಅನುಗ್ರಹಗಳನ್ನು" ಸಂಪಾದಿಸಿ ಕೊಟ್ಟಿರಬೇಕು. ಆದರೆ, ನ್ಯಾಯಪಾಲಕನಾದ ಪರಮಾತ್ಮನ ಶಕ್ತವಾದ ಕೈಗಳು ಅಹ್ಮದೀಯರ ಸಹಾಯಕ್ಕಾಗಿ ಬಂತು. ಕ್ರೂರಿಯಾದ ಹಬೀಬುಲ್ಲಾ ಖಾನ್ ತನ್ನ ನಿಕಟ ಸಂಬಂಧಿಕನಾದ ಒಬ್ಬ ರಹಸ್ಯ ಘಾತಕನ ಗುಂಡಿಗೆ ತನ್ನ ಪ್ರಾಣವನ್ನು ಬಲಿ ತೆತ್ತನು!

ನಂತರ ರಂಗ ಪ್ರವೇಶ ಮಾಡಿದುದು ಅವನ ಮಗನಾದ ಅಮಾನುಲ್ಲಾ ಖಾನ್. ಆತನು ತನ್ನ ತಂದೆಯಷ್ಟು ಕ್ರೂರಿಯಲ್ಲವಾಗಿದ್ದರೂ ಮುಸ್ಲಿಂ ಮತ ಪಂಡಿತರ ದುರ್ಬೋಧನೆಗಳಿಗೆ ವಿಧೇಯನಾಗಿ ಅಲ್ಲಿನ ಇನ್ನೂ ಕೆಲವು ಅಹ್ಮದೀಯರೊಡನೆ ಅದೇ ರೀತಿ ವರ್ತಿಸಿದನು. ಪರಿಣಾಮವೇನಾಯಿತು? ಒಬ್ಬ ನೀರು ಹೊರುವವನ ಮಗನಾದ "ಬಚ್ಚಾ-ಯಿ-ಸಕ್ಕಾ" ಎಂದು ಕರೆಯಲ್ಪಡುವ ವ್ಯಕ್ತಿಯು 300 ಸಂಗಾತಿಗಳೊಡನೆ ಕಾಬೂಲನ್ನು ಆಕ್ರಮಿಸಿದಾಗ ಅಮೀರ್ ಅಮಾನುಲ್ಲಾ ಖಾನನು ಅವನ ಕೈಯಲ್ಲಿ ಅಪಮಾನಕರವಾದ ಸೋಲನ್ನನುಭವಿಸಿ ಗದ್ದುಗೆಯನ್ನು ಕಳಕೊಂಡ. ಬಲಿಷ್ಠನಾದ ರಾಜನಾಗಿದ್ದೂ ಸಹ, ನಿರಾಯುಧರೂ ನಿರ್ಬಲರೂ ಆಗಿದ್ದ ಒಂದು ಸಣ್ಣ

ಗುಂಪಿನಿಂದ ತನ್ನ ಸಿಂಹಾಸನವನ್ನು ರಕ್ಷಿಸಿಕೊಳ್ಳಲು ಆತನಿಂದ ಸಾಧ್ಯವಾಗಲಿಲ್ಲ. ನಂತರ ಆತನು ತನ್ನ ರಾಜ್ಯವನ್ನು ತ್ಯಜಿಸಿ ಜೀವನದ ಅಂಧಕಾರಮಯವಾದ ಕೊನೆಯ ದಿನಗಳನ್ನು ಇಟಲಿಯಲ್ಲಿ ಕಳೆದನು.

ಹಬೀಬುಲ್ಲಾ ಖಾನನ ಕೈಯಲ್ಲಿ ಸಾಹಿಬ್‌ಝಾದಾ ಅಬ್ದುಲ್ ಲತೀಫ್ ಸಾಹೆಬರು ರಕ್ತಸಾಕ್ಷಿಯಾದ ದುಃಖದ ವಾರ್ತೆಯನ್ನು ಕೇಳುತ್ತಲೇ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ಒಂದು ಪುಸ್ತಕದಲ್ಲಿ ಪವಿತ್ರ ಖುರಾನಿನ ಒಂದು ವಚನವನ್ನು ಉದ್ಧರಿಸುತ್ತಾ ಈ ರೀತಿ ಬರೆದರು:

"ಸಾಹಿಬ್‌ಝಾದಾ ಅಬ್ದುಲ್ ಲತೀಫ್ ಸಾಹೆಬರಿಗೆ ವಿಧಿಸಲ್ಪಟ್ಟ ರಕ್ತಸಾಕ್ಷಿತ್ವದ ಘಟನೆಯು ಸಂಭವಿಸಿ ಮುಗಿಯಿತು; ಆದರೆ, ಕ್ರೂರ ಶಾಸನದ ಕರ್ಮಫಲವು ಸಂಭವಿಸಲು ಬಾಕಿಯಿದೆ— "ಯಾವನು ದೇವರ ಸನ್ನಿಧಿಯಲ್ಲಿ ಅಪರಾಧಿಯಾಗಿ ಹಾಜರಾಗುವನೋ ಅವನಿಗೆ ನರಕ ಶಿಕ್ಷೆಯಿದೆ. ಅದರಲ್ಲಿ ಆತನು ಸಾಯುವುದಿಲ್ಲ; ಬದುಕುವುದೂ ಇಲ್ಲ" (20:75).

ಅರಬಿ ಭಾಷೆಯಲ್ಲಿ 'ಆತನು ಸಾಯುವುದಿಲ್ಲ; ಬದುಕುವುದೂ ಇಲ್ಲ' ಎಂಬ ಪ್ರಯೋಗವು ಒಬ್ಬ ಮನುಷ್ಯನು ತನ್ನ ಎಲ್ಲಾ ಪ್ರಭಾವವನ್ನೂ ಶಕ್ತಿ ಸಾಮರ್ಥ್ಯಗಳನ್ನೂ ಕಳಕೊಂಡು ಅಪಮಾನಿತನಾಗಿರುವ ಕಾರಣ ಜೀವಿಸಿರುವವನೆಂದು ಹೇಳಿಸಿಕೊಳ್ಳದೆಯೂ ಆದರೆ, ಉಸಿರಾಡುತ್ತಲೂ ಅತ್ತಿತ್ತ ಚಲಿಸುತ್ತಲೂ ಇರುವ ಕಾರಣ ಸತ್ತನೆಂದು ಗಣಿಸಲ್ಪಡದೆಯೂ ಇರುವ ಅವಸ್ಥೆಯನ್ನು ಸೂಚಿಸುವ ಒಂದು ಸಾಹಿತ್ಯ ಶೈಲಿಯಾಗಿದೆ, ಅಕ್ರಮಿಗಳಾದ ಅಪರಾಧಿಗಳು ಈ ರೀತಿಯ ಜೀವಚ್ಛವದಂತಿರುವ ಅವಸ್ಥೆಗೆ ತಳ್ಳಲ್ಪಟ್ಟರೆ ಮಾತ್ರವೇ ಅವರಿಗೆ ಕಾದಿರಿಸಿದ ಪ್ರತೀಕಾರ ಶಿಕ್ಷೆಯು ಪೂರ್ತಿಯಾಯಿತೆಂದು ತಿಳಿದುಕೊಳ್ಳಲು ಸಾಧ್ಯ.

ಈಗ, ಝಡ್. ಎ. ಭುಟ್ಟೋರಿಗೆ ಅದೃಷ್ಟವು ತಂದೊಡ್ಡಿದ ಅಪಮಾನದೊಂದಿಗೆ ಹೋಲಿಸಬಹುದಾದ ಘಟನೆ ಈ ಉಪ ಭೂಖಂಡದಲ್ಲಿ ಇತ್ತೀಚೆಗೆ ಎಂದೂ ಉಂಟಾಗಿಲ್ಲವೆಂದು ಪತ್ರಿಕಾ ವರದಿಗಳು ಸೂಚಿಸುತ್ತವೆ. "ಅವರು ಇನ್ನು ಎಂದೂ ರಾಜಕೀಯಕ್ಕೆ ಮರಳಿ ಬರಲಾರರು ಎಂದು ಇಡಿಯ ರಾಷ್ಟ್ರವೇ ನಿಶ್ಚಯಿಸಿ ಕೊಂಡಂತೆ ತೋರುತ್ತದೆ. ಹೆಚ್ಚಿನ ಅವರ ಮಿತ್ರರೆಲ್ಲರೂ ಒಂದೋ ಅವರ ಕುರಿತು ಏನನ್ನೂ ಹೇಳಲು ಭಯ ಪಡುತ್ತಾರೆ; ಅಥವಾ ಅವರ ಜತೆಯಲ್ಲಿದ್ದು ಮಾಡಿದ ಕೆಲಸಕ್ಕಾಗಿ ಪೇಚಿನಲ್ಲಿ ಸಿಲುಕಿಕೊಂಡಂತಿದ್ದಾರೆ. ರಾಜಕೀಯದ ಎಲ್ಲಾ ದೃಷ್ಟಿಯಿಂದಲೂ ಅವರು ಈಗ ಒಬ್ಬಂಟಿಗ. ಮಿಸ್ಟರ್ ಭುಟ್ಟೋ ಈಗ ಅಧಿಕ ಬಲಹೀನರಾಗಿ ತೋರುತ್ತಿದ್ದಾರೆ. ಅವರ ಭಂಗಿಯೂ ಠೀವಿಯೂ ಎಲ್ಲಾ ಮಾಯವಾಗಿದ್ದು ಅವರು ಭಾರತ ಉಪ ಭೂಖಂಡದ ಒಬ್ಬ ರಾಜಕೀಯ ಸನ್ಯಾಸಿಯಂತೆ ತೋರುತ್ತಿದ್ದಾರೆ" (Hindu 18-9-77).

ತನ್ನ ಕೈಯಲ್ಲಿ ಅಧಿಕಾರವಿದೆ ಎಂಬ ಗರ್ವದಿಂದ ಆ ಅಧಿಕಾರವನ್ನು ದುರುಪಯೋಗ ಪಡಿಸುತ್ತಾ ಒಂದು ದುರ್ಬಲ ಅಲ್ಪ ಸಂಖ್ಯಾತರೊಡನೆ ನಿರ್ದಯವಾಗಿ ವರ್ತಿಸಿದುದರ ಪರಿಣಾಮದಿಂದಲೇ ಹೀಗೆಲ್ಲಾ ಸಂಭವಿಸಿತು. ಲೋಕದಲ್ಲಿ ಅವತೀರ್ಣರಾದ ಸರ್ವ ಪ್ರವಾದಿಗಳನ್ನೂ ಅವರ ಅನುಯಾಯಿಗಳನ್ನೂ ಆಯಾ ಕಾಲದ ಬಹುಸಂಖ್ಯಾತರು ಮತ್ತು ಅವರ ಮುಂದಾಳುಗಳು ವಿರೋಧಿಸಿದ ರೀತಿಯಲ್ಲಿಯೇ ತಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನುಪಯೋಗಿಸಿಕೊಂಡು ಈ ಕಾಲದ ಪ್ರವಾದಿಯಾಗಿ ಜನ್ಮ ತಾಳಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರ ಅನುಯಾಯಿಗಳೊಡನೆ ಇಂದು ಸಹ ಅವರ ಎದುರಾಳಿಗಳು ವರ್ತಿಸುತ್ತಿದ್ದಾರೆ. ಆದರೆ, ದೈವಿಕ ಸಂಘಟನೆಗಳೊಡನೆ ಹೋರಾಡಿದ ಬಲಶಾಲಿಗಳಾದ ರಾಜ ಮಹಾರಾಜರುಗಳನ್ನು ಬುಡ ಮೇಲಾಗಿಸಿ ನಿರ್ನಾಮ ಮಾಡಿದ ಆ ಪರಮಾತ್ಮನು ತನ್ನ ಅದ್ಭುತ ದೃಷ್ಟಾಂತಗಳನ್ನು ಇಂದು ಅಹ್ಮದಿಯಾ ಸಂಘಟನೆಯ ಮೂಲಕ ಪ್ರಕಟಿಸಲಿಚ್ಛಿಸಿದ್ದಾನೆ. ಇವು ಪರಮೋನ್ನತನಾದ ಆ ದೇವರ ಅಸ್ತಿತ್ವವನ್ನು ತಿಳಿಸಿಕೊಡುವ ಪ್ರಬಲವಾದೊಂದು ಸಾಕ್ಷ್ಯವಾಗಿರುವಂತೆಯೇ ಅಹ್ಮದಿಯಾ ಸಂಘಟನೆಯ ಸತ್ಯತೆಯನ್ನು ನಿರೂಪಿಸಲು ಸಹ ಪರ್ಯಾಪ್ತವಾದ ನಿದರ್ಶನಗಳಾಗಿವೆ.

ಅದಾಗ್ಯೂ, ಪಾಕಿಸ್ತಾನದ ರಾಷ್ಟ್ರೀಯ ನಾಯಕರು ತಮ್ಮ ಅನ್ಯಾಯ ಮತ್ತು ಅನೀತಿಯ ಮಾರ್ಗಗಳನ್ನು ತ್ಯಜಿಸಿ ನಿಜವಾದ ಪಶ್ಚಾತ್ತಾಪದೊಂದಿಗೆ ಪರಮಾತ್ಮನ ಕಡೆ ತಿರುಗುವರಾದರೆ, ಪರಮ ದಯಾಮಯನೂ ಕರುಣಾಮೂರ್ತಿಯೂ ಆದ ಆ ಸರ್ವ ವಲ್ಲಭನು ಪವಿತ್ರ ಖುರ್‌ಆನಿನಲ್ಲಿ ವಾಗ್ದಾನ ಮಾಡಿರುವ ಪ್ರಕಾರ ಅವನ ಕಾರುಣ್ಯಕ್ಕೆ ಪಾತ್ರರಾಗುವರು. ಇಲ್ಲವೆಂದಾದರೆ, ಖುರ್‌ಆನ್

# ಝೊರಾಸ್ಟರ್ ಮತ್ತು ಕನ್‌ಫ್ಯೂಸಿಯಸ್

—ಎಂ. ಮುಹಮ್ಮದ್, ಎಂ. ಎ.

ಪ್ರವಾದಿ ಶ್ರೇಷ್ಠರಾದ ಮುಹಮ್ಮದ್ ಪೈಗಂಬರರ ಅನುಯಾಯಿಗಳು ಕಾಲಕ್ರಮೇಣ ಆ ಪುಣ್ಯಾತ್ಮರ ಆದರ್ಶದಿಂದ ಬಹಳ ದೂರವಾದಾಗ, ಅವರು ಯಾವ ಸತ್ಯವನ್ನು ಪ್ರಬೋಧಿಸಿದರೋ, ಆ ಶಾಶ್ವತ ಸತ್ಯದೆಡೆಗೆಯೇ ಲೋಕವನ್ನು ಆಮಂತ್ರಿಸುವುದಕ್ಕಾಗಿ ಈ ಕಾಲದಲ್ಲಿ ದೇವರಿಂದ ನಿಯುಕ್ತನಾಗಿ ಓರ್ವ ಮಹಾಪುರುಷ ಆಗಮಿಸಿದರು. ಅವರೇ ಇಸ್ಲಾಮಿನ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಂ ಅಹ್ಮದ್.

ವಿವಿಧ ಮತಸ್ಥರೆಡೆಯಲ್ಲಿ ಪರಸ್ಪರ ಮತ ಸೌಹಾರ್ದದ ಪ್ರಾಧಾನ್ಯವನ್ನೂ ಆವಶ್ಯಕತೆಯನ್ನೂ ಆಧುನಿಕ ಲೋಕಕ್ಕೆ ಬೋಧಿಸಲು ಆ ಪುಣ್ಯಾತ್ಮರು ಶ್ರಮವಹಿಸಿದರು. ತನಗುಂಟಾದ ದೈವಿಕ ಪ್ರಕಟನೆಯನ್ನನುಸರಿಸಿ, ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ ಭಾರತದಲ್ಲಿ ಅವತೀರ್ಣರಾದ ಸತ್ಯಪ್ರವಾದಿಗಳಾಗಿದ್ದರೆಂದು ಅವರು ಹೇಳಿದರು. ಹಾಗೆಯೇ ಝೊರಾಸ್ಟರ್ ಪುರಾತನ ಪರ್ಶಿಯಾದಲ್ಲೂ ಕನ್‌ಫ್ಯೂಸಿಯಸ್ ಪುರಾತನ ಚೀನಾದಲ್ಲೂ ಪರಮಾತ್ಮನ ಸಂದೇಶವಾಹಕರಾಗಿ ಪ್ರತ್ಯಕ್ಷರಾದ ಮಹಾತ್ಮರಾಗಿದ್ದರೆಂದು ಹಝ್‌ರತ್ ಅಹ್ಮದರ ಅಧ್ಯಾಪನಗಳನ್ನನುಸರಿಸಿ ಅಹ್ಮದೀ ಮುಸ್ಲಿಮರು ನಂಬುತ್ತಾರೆ.

ಸ್ವಜೀವಿತ ಕಾಲದಲ್ಲಿ ಸ್ವಂತ ಊರಿನಲ್ಲಿ ಅಂಗೀಕಾರವೂ ಆದರಣೆಯೂ ಲಭಿಸಿದ್ದ ಪ್ರವಾದಿಗಳು ಬಹಳ ವಿರಳ. ಅವರನ್ನು ಮಿಥ್ಯಾವಾದಿಗಳೆಂದು ಸಾಧಿಸಲಿಕ್ಕೂ ಅವರ ಪ್ರವರ್ತನೆಗಳಿಗೆ ಅಡ್ಡಿ ಆತಂಕಗಳನ್ನು ಒಡ್ಡಲಿಕ್ಕೂ ಹೊರಟ ಶತ್ರುಗಣಗಳನ್ನು ಧೈರ್ಯದಿಂದ ಎದುರಿಸಿ ಸಮರಾವೇಶದಿಂದ ಮುಂದುಮುಂದಕ್ಕೆ ಸಾಗಿದ ಕಥೆಗಳಾಗಿವೆ ಅವರದ್ದು. ಆದರೆ ಅವರ ಮರಣಾನಂತರ ಅಂಧವಾದ ಆವೇಶದಿಂದ ಕೂಡಿ ಅವರಲ್ಲಿ ಹಲವರ ಅನುಯಾಯಿಗಳು ಅವರ ಸಂಬಂಧಿಸಿ ಅತಿಶಯೋಕ್ತಿಯಿಂದ ಕೂಡಿದ ಕಥೆಗಳನ್ನು ಪ್ರಚುರಪಡಿಸಿದರು. ಚರಿತ್ರಾತೀತ ಕಾಲದಲ್ಲಿ ಅವತೀರ್ಣರಾದ ಹಲವು ಪ್ರವಾದಿಗಳ ಸಂಗತಿ ಹೀಗಾಗಿದೆ. ಕೇವಲ ಮನುಷ್ಯರಾಗಿ ಜನಿಸಿ ಮನುಷ್ಯರಾಗಿಯೇ ಜೀವನ ನಡೆಸಿದ ಹಲವು ದೈವನಿಯುಕ್ತರು ದೇವರ ಪುತ್ರರೆಂದೋ ಸ್ವತಃ ದೇವರೆಂದೋ ಪರಿಗಣಿಸಲ್ಪಟ್ಟರು. ಹಾಗೆ ಕಾಲನ ದಾರಿಯಲ್ಲಿ ಮಾಸಿಹೋಗದ ವ್ಯಕ್ತಿಮುದ್ರೆಯನ್ನು ಒತ್ತಿದ ಹಲವು ಮಹಾತ್ಮರ ಜೀವನಚರಿತ್ರೆಗಳು ಅವುಗಳ ನಿಜರೂಪದಲ್ಲಿ ನಮಗೆ ಲಭಿಸದೆ ಹೋದುವು.

ಪುರಾತನ ಪರ್ಶಿಯಾದಲ್ಲಿ ಅವತರಿಸಿದ್ದ ಝೊರಾಸ್ಟರ್ ಎಂಬ ಪ್ರವಾದಿಯ ಕುರಿತು ಸಹ ಇದು ಬಹಳ ಸ್ಪಷ್ಟವಾಗಿದೆ. ಮಹಾತ್ಮ ಝೊರಾಸ್ಟರನ್ನು ಸಂಬಂಧಿಸಿ ವಸ್ತುಸ್ಥಿತಿಯ ಆಧಾರಗಳು ನಮ್ಮೊಡನೆ ಇಲ್ಲ. ಮಿತಿಮೀರಿದ ಆರಾಧನಾ ಮನೋಭಾವದಿಂದ ಹುಟ್ಟಿಬಂದ ಕೆಲವು ಐತಿಹ್ಯಗಳು ಮಾತ್ರವೇ ಅವರ ಸಂಭವ ಬಹುಲವಾದ ಜೀವಿತದ ಕುರಿತು ನಮಗೆ ಲಭಿಸಿದ್ದು. ಝೆಂದ್ ಅವೆಸ್ತ (Zend-Avesta) ಮತ್ತು ಪಹ್ಲವಿ (Pahlavi) ಲಿಖಿತಗಳು ಝೊರಾಸ್ಟ್ರಿಯನ್ ಮತ ವಿಶ್ವಾಸಿಗಳ ಮೌಲಿಕ ಗ್ರಂಥಗಳಾಗಿವೆ. ಈ ಪವಿತ್ರ ಗ್ರಂಥಗಳು ಸಹ ಪುರೋಹಿತರ ಕೈಯಾಡಿಸುವಿಕೆಗೆ ಗುರಿಯಾಗಿದ್ದರೂ ಅವು ಮಾತ್ರವೇ ಮಹಾತ್ಮ ಝೊರಾಸ್ಟರ್ ಮತ್ತು ಅವರ ಅಧ್ಯಾಪನಗಳ ಕುರಿತು ಅಧಿಕೃತ ಅರಿವನ್ನು ನಮಗೆ ನೀಡುತ್ತವೆ. ಝೊರಾಸ್ಟರನ್ನು ಸಂಬಂಧಿಸಿದ ಇತರ ಗ್ರಂಥಗಳಲ್ಲಿ ಹೆಚ್ಚಿನವು ಕವಿಭಾವನೆಯ ಸೃಷ್ಟಿಗಳಾಗಿ

---

(7ನೇ ಪುಟದಿಂದ)

ನೀಡಿರುವ ಎಚ್ಚರಿಕೆಯು ಕಾರ್ಯದಲ್ಲಿ ಕಾಣುವುದು:

“ನಿಶ್ಚಯವಾಗಿಯೂ ನಿನ್ನ ಒಡೆಯನು ಮನುಷ್ಯರಿಗೆ, ಅವರ ಅಪರಾಧಗಳನ್ನು ಕಡೆಗಣಿಸಿ ಬಹಳಷ್ಟು ಅನುಗ್ರಹ ಬೀರುವವನಾಗಿದ್ದಾನೆ: ಅಂತೆಯೇ ಅವನು ಉಗ್ರ ಶಿಕ್ಷೆಯನ್ನು ನೀಡುವವನೂ ಆಗಿದ್ದಾನೆ” (13:7)

ದೇವರ ವಚನಗಳ ಕಡೆಗೆ ಗಮನ ಹರಿಸುವವರೇ ಭಾಗ್ಯವಂತರು!

[ಸಾಧಾರ]

ನೆಲೆಗೊಂಡಿವೆ. ಝೊರಾಸ್ಟರ್ ಎಲ್ಲಿ ಜನಿಸಿದ್ದು, ಎಲ್ಲಿ ಬೆಳೆದು ಬಂದದ್ದು ಎಂಬ ಸಂಗತಿಗಳ ಕುರಿತು 'ಝೆಂದ್ ಅವೆಸ್ತ' ಏನನ್ನೂ ಹೇಳುವುದಿಲ್ಲ. ಹೀಗೆಯೇ ಅವರ ಜೀವಿತಕಾಲವನ್ನು ತೀರ್ಮಾನಿಸುವುದರಲ್ಲಿಯೂ ವಿವಾದ ವಿದೆ. ಕೆಲವರು ಅವರನ್ನು ಹಝ್‌ರತ್ ಮೂಸಾ ಪ್ರವಾದಿಯ ಸಮಕಾಲೀನರೆಂದು ಅನುಮಾನಿಸುವಾಗ ಬೇರೆ ಕೆಲವರು ಟ್ರೋಜನ್ ಯುದ್ಧಕ್ಕಿಂತಲೂ 5000 ವರ್ಷ ಮೊದಲು ಅವರು ಜೀವಿಸಿದ್ದರೆಂದು ಊಹಿಸುತ್ತಾರೆ. ಜೋನ್ ಲಾರ್ಡ್ **Old Pagan Civilization** ಎಂಬ ತನ್ನ ಗ್ರಂಥದಲ್ಲಿ ಕ್ರಿ. ಪೂ. 1500 ಮತ್ತು 1000 ವರ್ಷಗಳ ಮಧ್ಯೆ ಝೊರಾಸ್ಟರರ ಜೀವಿತ ಕಾಲವೆಂದು ಹೇಳುತ್ತಾರೆ. ಆದರೆ ಅವರು ಕ್ರಿ. ಪೂ. ಏಳನೇ ಮತ್ತು ಆರನೇ ಶತಮಾನಗಳ ಮಧ್ಯೆ ಜೀವಿಸಿದ್ದರೆಂಬ ಊಹೆಗೆ ಇಂದು ಪ್ರಾಬಲ್ಯವಿದೆ. ಅವರ ಜನನವನ್ನು ಮತ್ತು ಪ್ರವರ್ತನೆಗಳನ್ನು ಸಂಬಂಧಿಸಿ ಹಲವಾರು ಕಥೆಗಳೂ ಐತಿಹ್ಯಗಳೂ ಇವೆ. ಆದರೆ ಅವೆಲ್ಲಾ ಯಥಾರ್ಥವೆಂದು ಭಾವಿಸಲು ತಕ್ಕುದಲ್ಲ.

ಝೊರಾಸ್ಟರರ ಜನ್ಮದಿನದಂದು ಪ್ರಪಂಚವಿಡೀ ಕಂಪಿಸಿತ್ತೆಂದೂ ಪಿಶಾಚಿಗಳು ಓಡಿಹೋಗಿ ಅಡಗಿಕೊಂಡರೆಂದೂ ಪ್ರಸವಿಸಿದಾಗ ಶಿಶು ಅಳುವುದರ ಬದಲು ಘೊಳ್ಳನೆ, ನಕ್ಕಿತೆಂದೂ ಐತಿಹ್ಯವಿದೆ. ದುರಾಸ್ರೋಬೊ ಎಂಬ ತುರಾನಿಯನ್ (**Turanian**) ರಾಜ ಹೆರೋದ, ಫರೋಹ ಮತ್ತು ಕಂಸನ ಹಾಗೆಯೇ ಈ ಅಸಾಮಾನ್ಯ ಶಿಶುವನ್ನು ಕೊಲೆಮಾಡಲು ಮಾರ್ಗಗಳನ್ನು ಹುಡುಕಿದನು. ಅಲ್ಲಾಹು ಅವನ ಪ್ರವಾದಿಗಳನ್ನೂ ಸತ್ಯವಿಶ್ವಾಸಿಗಳನ್ನೂ ಶತ್ರುಗಳಿಗೆದುರಾಗಿ ವಿಜಯಿಗಳನ್ನಾಗಿ ಮಾಡುವನೆಂದೂ ಸಂರಕ್ಷಿಸುವನೆಂದೂ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾದ ದಿವ್ಯ ನಿಯಮವನ್ನನುಸರಿಸಿ ಮಹಾತ್ಮ ಝೊರಾಸ್ಟರನ್ನೂ ಅವರ ಅನುಯಾಯಿಗಳನ್ನೂ ಶತ್ರುಗಳ ಕುತಂತ್ರದಿಂದ ಅಲ್ಲಾಹು ರಕ್ಷಿಸಿದನು.

ಝೊರಾಸ್ಟರ್ ಮೂರು ವಿವಾಹಗಳನ್ನು ಮಾಡಿಕೊಂಡಿದ್ದರೆಂದೂ ಅವರಿಗೆ ಪುತ್ರರೂ ಪುತ್ರಿಯಂದಿರೂ ಇದ್ದರೆಂದೂ ಪ್ರಸ್ತಾವಿಸಲಾಗಿದೆ. ಇತರ ಪ್ರವಾದಿಗಳಂತೆ ಮಹಾತ್ಮ ಝೊರಾಸ್ಟರ್ ಸಹ ದಿವ್ಯದೌತ್ಯಕ್ಕೆ ಮೊದಲು ತೀವ್ರವಾದ ಒಂದು ಆಧ್ಯಾತ್ಮಿಕ ಪರಿಶೀಲನಕ್ಕೆ ಒಳಗಾಗಿದ್ದರು. ಧ್ಯಾನ ಮತ್ತು ಪ್ರಾರ್ಥನೆಗಳಲ್ಲಿ ತಲ್ಲೀನರಾಗಿ ಅವರು ಒಂದು ಕ್ಲಪ್ತ ಕಾಲ ಏಕಾಂತವಾಸ ಕೈಗೊಂಡಿದ್ದರು. ತದನಂತರ ಅವರು ತನ್ನ ದೈವಿಕ ದೌತ್ಯವನ್ನು ಘೋಷಿಸಿದರು. ಆ ಸಂದರ್ಭದಲ್ಲಿ ಅವರಿಗೆ ಮೂವತ್ತೋ ನಲ್ವತ್ತೋ ವರ್ಷ ಪ್ರಾಯವಾಗಿರಬಹುದೆಂದು ಗಣಿಸಲಾಗಿದೆ. ಅವರ ಪ್ರಬೋಧನ ರಂಗ ಇರಾನ್ ಆಗಿತ್ತು. ಎಲ್ಲಾ ಪ್ರವಾದಿಗಳಂತೆಯೇ ವಿರೋಧದ ಬಿರುಗಾಳಿಯನ್ನು ಅವರು ಸಹ ಎದುರಿಸಿದರು. ಹಝ್‌ರತ್ ಮುಹಮ್ಮದ್ ಪೈಗಂಬರರಂತೆಯೇ ಮಹಾತ್ಮ ಝೊರಾಸ್ಟರ್ ಸಹ ಊರುಬಿಟ್ಟು ಪಲಾಯನ ಮಾಡಿದರು. ಮರ್ದನಗಳ ಮತ್ತು ಅಪಪ್ರಚಾರಗಳ ಮಧ್ಯೆ ದೈವಿಕಹಸ್ತ ಅವರಿಗೆ ಸಹಾಯವನ್ನು ನೀಡುತ್ತಿತ್ತು.

ಇರಾನಿನ ರಾಜ ಝೊರಾಸ್ಟರ್ ಪ್ರವಾದಿಯ ಅನುಯಾಯಿ ಆಗಿ ಮಾರ್ಪಟ್ಟಾಗ ಆ ದಿವ್ಯ ಸಂಘಟನೆ ಭೌತಿಕ ವಿಜಯವನ್ನು ಸಂಪಾದಿಸಿತು. ವಿರೋಧದ ಜ್ವಾಲೆಗಳು ನಂದಿಹೋದವು. ಜನರು ಗುಂಪುಗುಂಪಾಗಿ ಈ ಹೊಸ ಪಂಥಕ್ಕೆ ಸೇರಿದರು. ಹೆಚ್ಚಾಗಿ ಇರಾನಿನ ಗಡಿಗಳೊಳಗೆಯೇ ಝೊರಾಸ್ಟರರ ಪ್ರಬೋಧನೆ ಸೀಮಿತವಾಗಿತ್ತು. ಬೇರೆ ರಾಜ್ಯಗಳಿಂದಲೂ ಕೆಲವರು ಅವರನ್ನು ನಂಬಿದರೆಂದು ಹೇಳಲ್ಪಡುತ್ತದೆ. ಇಂಡಿಯಾದಿಂದಲೂ ಇಬ್ಬರು ಬ್ರಾಹ್ಮಣ ಪಂಡಿತರು ಹೋಗಿ ಅವರನ್ನು ಭೇಟಿಯಾಗಿ ವಿವಾದಮಾಡಿದರೆಂದೂ ಕಡೆಗೆ ಅವರ ಆಧ್ಯಾತ್ಮಿಕ ಪ್ರಭಾವದ ಮುಂದೆ ಶರಣಾದರೆಂದೂ ಐತಿಹ್ಯಗಳಿವೆ. ಮಹಾತ್ಮ ಝೊರಾಸ್ಟರ್ ಒಂದು ಯುದ್ಧದಲ್ಲಿ ಕೊಲ್ಲಲ್ಪಟ್ಟರೆಂದು ನಂಬಲಾಗಿದೆ.

ಪ್ರವಾದಿಗಳು ಕೇವಲ ಮನುಷ್ಯರಾಗಿದ್ದಾರೆ. ಅವರು ಮರಣಹೊಂದುತ್ತಾರೆ ಅಥವಾ ಕೊಲ್ಲಲ್ಪಡುತ್ತಾರೆ. ಆದರೆ ಅದರಿಂದಾಗಿ ಅವರು ತಂದ ಸನಾತನ ಸತ್ಯ ನಾಶ ಹೊಂದುವುದಿಲ್ಲ. ಅದು ಜಯಗಳಿಸಿಯೇ ತೀರುವುದೆಂದು ಖುರ್‌ಆನಿನ ಪಾಠವಾಗಿದೆ. ಇದಕ್ಕನುಸಾರವಾಗಿ ಮಹಾತ್ಮ ಝೊರಾಸ್ಟರ್ ಮತ್ತು ಅವರ ಯಥಾರ್ಥ ಅನುಯಾಯಿಗಳು ವಿಜಯಿಗಳಾದರು. ಕಾಲಾಂತರದಲ್ಲಿ ಆ ದಿವ್ಯ ಸಂಘಟನೆಗೆ ಸಂಭವಿಸಿದ ಅಧಃಪತನದ ಚರಿತ್ರೆ ಬೇರೊಂದಾಗಿದೆ.

ಪುರಾತನ ಪರ್ಶಿಯಾದಿಂದ ನಾವು ಪುರಾತನ ಚೀನಾದೆಡೆಗೆ ಕಣ್ಣೋಡಿಸುವಾಗ ಪವಿತ್ರ ಖುರ್‌ಆನಿನ ಅಧ್ಯಾಪ

ನೆಯ ಪ್ರಕಾರ ಅಲ್ಲಿಯೂ ನಾವು ಅಲ್ಲಾಹುವಿನ ಓರ್ವ ಪ್ರವಾದಿಯನ್ನು ಕಾಣುತ್ತೇವೆ. ಅವರೇ ಲೋಕಪ್ರಸಿದ್ಧ ಕನ್‌ಫ್ಯೂಸಿಯಸ್. ಕ್ರಿ. ಪೂ. 6ನೇ ಮತ್ತು 5ನೇ ಶತಮಾನಗಳ ಮಧ್ಯೆ ಜೀವಿಸಿದ್ದರೆಂದು ನಂಬಲಾದ ಮಹಾತ್ಮ ಕನ್‌ಫ್ಯೂಸಿಯಸ್‌ರ ಕುರಿತು ಬಹಳ ಪರಿಮಿತವಾದ ವಿವರ ಮಾತ್ರವೇ ನಮಗೆ ಲಭಿಸಿದ್ದು. ಓರ್ವ ಪ್ರವಾದಿ ಎಂದಲ್ಲ; ಅವರು ಓರ್ವ ದಾರ್ಶನಿಕನೂ ತತ್ವಜ್ಞಾನಿಯೂ ಆಗಿದ್ದರೆಂದು ಲೋಕವು ಇಂದು ಅವರನ್ನು ತಿಳಿದುಕೊಂಡಿದೆ. ಆದರೆ ಅವರು ಚೀನಾದಲ್ಲಿ ಅವತರಿಸಿದ್ದ ಒಬ್ಬ ಪ್ರವಾದಿಯಾಗಿದ್ದರೆಂದು ಅಹ್ಮದಿಯರು ನಂಬುತ್ತಾರೆ. ನಮಗೆ ಅವರ ಕುರಿತು ಸಿಕ್ಕಿರುವ ಪರಿಮಿತವಾದ ವಿಚಾರ ಆ ಪುಣ್ಯಾತ್ಮರ ಶಿಷ್ಯಗಣದಿಂದಾಗಿದೆ. ಅವರ ಉಪದೇಶಗಳೂ ಚರ್ಯೆಗಳೂ ಮಹಾತ್ಮ ಕನ್‌ಫ್ಯೂಸಿಯಸ್ ಪರಮಾತ್ಮನ ಪ್ರವಾದಿಯಾಗಿದ್ದರೆಂದು ಸ್ಪಷ್ಟಪಡಿಸುತ್ತವೆ.

ಎಲ್ಲಾ ಮತಗಳೂ ಸತ್ಯಾಧಿಷ್ಠಿತವೆಂದು ವ್ಯಕ್ತವಾಗಿ ಅದರ ಅನುಯಾಯಿಗಳಿಗೆ ಕಲಿಸುವ ಧರ್ಮ ಇಸ್ಲಾಮಾಗಿದೆ. "ವಲಿಕುಲ್ಲಿ ಉಮ್ಮತಿನ್ ರಸೂಲುನ್" (ಎಲ್ಲಾ ಜನಾಂಗದಲ್ಲೂ ಪ್ರವಾದಿ ಆಗಮಿಸಿದ್ದರು — 10 : 48); "ವ ಇನ್‌ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್" (ಓರ್ವ ಮುನ್ನೆಚ್ಚರಿಕೆ ನೀಡುವವನು ನಿಯುಕ್ತನಾಗಿರದ ಒಂದು ಸಮುದಾಯವೂ ಬಾಕಿ ಇಲ್ಲ– 35:25) ಎಂಬೀ ಸೂಕ್ತಗಳು ದೈವವಚನವಾದ ಪವಿತ್ರ ಖುರ್‌ಆನಿನಲ್ಲಿವೆ. ಪರಮಾತ್ಮನು ತನ್ನ ಸೃಷ್ಟಿಗಳ ಸಂಬಂಧಿಸಿ ಉದಾಸೀನನಲ್ಲವೆಂದು ಆ ಪವಿತ್ರ ಗ್ರಂಥ ಕಲಿಸುತ್ತದೆ. ಮನುಷ್ಯಸೃಷ್ಟಿಯ ಆರಂಭ ದಶೆಯಿಂದಲೇ ಪರಮಾತ್ಮನು ಅವನ ಸಂದೇಶ ಮತ್ತು ಮಾರ್ಗದರ್ಶನವನ್ನು ನೀಡಿ ಮನುಷ್ಯರಿಂದಲೇ ಪ್ರವಾದಿಗಳನ್ನು ನಿಯೋಗಿಸುತ್ತಾ ಇದ್ದನೆಂದೂ ಅದು ಪ್ರಬೋಧಿಸುತ್ತದೆ.

ಈ ಪ್ರವಾದಿ ನಿಯೋಗವು ಅನುಸ್ಯೂತವಾದ ಒಂದು ದೈವನಿಯಮವೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. "ಯಾಬನೀ ಆದಮ, ಇಮ್ಮಾ ಯಅ್‌ತಿಯನ್ನಕುಂ ರುಸುಲುಮ್ಮಿನ್‌ಕುಂ ಯಖುಸ್ಸೂನ ಅಲೈಕುಂ ಆಯಾತಿ, ಫಮನಿತ್ತಖಾ ವಅಸ್‌ಲಹ ಫಲಾ ಖೌಫುನ್ ಅಲೈಹಿಂ ವಲಾಹುಂ ಯಹ್‌ಸನೂನ್" (ಎಲೈ ಆದಂ ಸಂತತಿಗಳೇ, ನನ್ನ ದೃಷ್ಟಾಂತಗಳನ್ನು ನಿಮಗೆ ವಿವರಿಸಿಕೊಡುವ ನಿಮ್ಮ ಪೈಕಿಯ ಪ್ರವಾದಿಗಳು ನಿಮ್ಮ ಹತ್ತಿರ ಬರುವವರಾದರೆ, ಯಾರು ಸೂಕ್ಷ್ಮತೆಯನ್ನು ಪಾಲಿಸುತ್ತಲೂ ಸತ್ಕರ್ಮಗಳನ್ನು ಗೈಯ್ಯುತ್ತಲೂ ಇರುವರೋ, ಅವರು ಭಯಪಡುವ ಪರಿಸ್ಥಿತಿ ಉಂಟಾಗಲಿಕ್ಕಿಲ್ಲ, ಅವರು ದುಃಖಿಗಳಾಗಲಿಕ್ಕಿಲ್ಲ, —7 : 36). ಈ ಪವಿತ್ರ ವಾಕ್ಯದಲ್ಲಿ ಪರಮಾತ್ಮನು ಎಲ್ಲಾ ಕಾಲಗಳಲ್ಲಿರುವ ಮನುಷ್ಯರನ್ನು ಎಚ್ಚರಿಸುತ್ತಾ ತನ್ನ ಬದಲಾವಣೆ ಇಲ್ಲದ ನಿಯಮವನ್ನು ತಿಳಿಸಿರುವನು. ಇದೇ ದಿವ್ಯನಿಯಮವು ಹೈಂದವ ಪವಿತ್ರ ಗ್ರಂಥವಾದ ಶ್ರೀ ಭಗವದ್ಗೀತೆಯಲ್ಲಿಯೂ ಉಲ್ಲೇಖಿಸಲ್ಪಟ್ಟಿರುತ್ತದೆ: "ಪರಿತ್ರಾಣಾಯ ಸಾಧೂನಾಂ। ವಿನಾಶಾಯ ದುಷ್ಕೃತಾಮ್ । ಧರ್ಮ ಸಂಸ್ಥಾಪನಾರ್ಥಾಯ । ಸಂಭವಾಮಿ ಯುಗೇಯುಗೇ।" (ಒಳ್ಳೆಯವರನ್ನು ಕಾಪಾಡುವುದಕ್ಕೂ ಕೆಟ್ಟವರನ್ನು ಹಾಳುಮಾಡುವುದಕ್ಕೂ ಧರ್ಮವನ್ನು ನೆಲೆಗೊಳಿಸುವುದಕ್ಕೂ ಪ್ರತಿಯುಗದಲ್ಲಿಯೂ ಹುಟ್ಟುತ್ತೇನೆ. ಅಧ್ಯಾಯ 4, ಶ್ಲೋಕ 8). ಭಾಷಾಶೈಲಿಯಲ್ಲಿರುವ ವ್ಯತ್ಯಾಸ ಹೊರತು ಖುರ್‌ಆನ್ ಮತ್ತು ಭಗವದ್ಗೀತೆ ಎರಡು ಸಹ ಇಲ್ಲಿ ಸನಾತನವಾದ ದೈವಿಕ ಸತ್ಯವನ್ನು ಪ್ರಬೋಧಿಸುತ್ತದೆ. ಈ ಸತ್ಯವನ್ನು ನಾವೆಲ್ಲರೂ ಅರಿತುಕೊಂಡರೆ ಮಾತ್ರ ಮತಮೈತ್ರಿ ನೆಲೆಗೊಳ್ಳುತ್ತದೆ.


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHI Kannada Quarterly,
23/1008, Ansari Road, Bunder, Mangalore-575001.

# ಹರ್ಝ್ರತ್ ಖದೀಜರೊಂದಿಗೆ ಪೈಗಂಬರರ ವಿವಾಹ

ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಪೈಗಂಬರರಿಗೆ 25 ವರ್ಷ ಪ್ರಾಯವಾಗುತ್ತಲೇ ಅವರ ಭಾವಶುದ್ಧಿ, ಸಹಾನುಭೂತಿ ಹಾಗೂ ಪವಿತ್ರತೆಯ ಕೀರ್ತಿಯು ನಗರದಲ್ಲಿಡೀ ಹಬ್ಬಿತು. ಜನರು ಅವರ ಕಡೆ ಬೆರಳು ತೋರಿಸಿ, ಆ ಮನುಷ್ಯನು ಧರ್ಮ ಪ್ರೇಮಿಯೂ ನ್ಯಾಯ ಸಂರಕ್ಷಕನೂ ಸದ್ಗುಣ ಸಂಪನ್ನನೂ ವಿಶ್ವಾಸ ಯೋಗ್ಯನೂ ಆಗಿರುವನೆಂದು ಹೇಳುತ್ತಿದ್ದರು. ಈ ಖ್ಯಾತಿಯು ಮಕ್ಕಾದ ಒಬ್ಬ ಧನಾಢ್ಯಳಾದ ವಿಧವೆಯ ಕಿವಿಗೂ ತಲಪಿತು. ಅವರು ಪೈಗಂಬರರ ಚಿಕ್ಕಪ್ಪ ಅಬೂ ತಾಲಿಬರ ಬಳಿ ಬಂದು, ಸಿರಿಯಾಕ್ಕೆ ತೆರಳಲಿರುವ ತನ್ನ ವ್ಯಾಪಾರ ತಂಡದ ನಾಯಕತ್ವವನ್ನು ವಹಿಸಲು ಮುಹಮ್ಮದ್‌ರನ್ನು ಕಳುಹಿಸಿ ಕೊಡಬೇಕೆಂದು ಕೇಳಿಕೊಂಡರು. ಅಬೂತಾಲಿಬ್ ಇದರ ಕುರಿತು ಪೈಗಂಬರರೊಡನೆ ಹೇಳಿದಾಗ ಅವರು ಅದಕ್ಕೆ ಸಮ್ಮತಿ ಸೂಚಿಸಿದರು. ಈ ಯಾತ್ರೆಯಲ್ಲಿ ಅವರಿಗೆ ಬಹಳ ಸಫಲತೆಯು ದೊರಕಿತು. ಅನಿರೀಕ್ಷತವಾದ ಲಾಭದೊಂದಿಗೆ ಅವರು ಹಿಂದಿರುಗಿದರು. ವ್ಯಾಪಾರದಲ್ಲಿ ಈ ರೀತಿಯ ಲಾಭವು ದೊರಕಲು ಸಿರಿಯಾದ ಪೇಟೆ ಧಾರಣೆಯಲ್ಲುಂಟಾದ ಹೆಚ್ಚಳವು ಮಾತ್ರ ಕಾರಣವಲ್ಲವೆಂದೂ ಅದು ತಂಡದ ನಾಯಕನ ಸಾಮರ್ಥ್ಯ ಮತ್ತು ನೀತಿ ನಿಷ್ಠೆಯ ಫಲಸ್ವರೂಪವೆಂದೂ ವಿಧವೆ ಖದೀಜ ಖಾತ್ರಿ ಮಾಡಿಕೊಂಡರು. ಆ ವ್ಯಾಪಾರ ತಂಡದಲ್ಲಿ ಪೈಗಂಬರರ ಜತೆ ಹೋಗಿದ್ದ ಮೈಸರ ಎಂಬ ಗುಲಾಮ್‌ನೊಡನೆ ಅವರು ಇದರ ಕುರಿತು ವಿಚಾರಿಸಿದಾಗ ಆತನು ಸಹ ಅವರ ಅಭಿಪ್ರಾಯವನ್ನು ಬೆಂಬಲಿಸುತ್ತಾ, ಈ ಯುವ ನಾಯಕ ಯಾವ ರೀತಿಯ ಶ್ರದ್ಧೆಯಿಂದಲೂ ಪ್ರಾಮಾಣಿಕತೆಯಿಂದಲೂ ತನ್ನ ಕರ್ತವ್ಯಗಳನ್ನು ನೆರವೇರಿಸಿದರೋ ಅದು ಅನೇಕರಿಂದ ಮಾಡಲು ಅಸಾಧ್ಯವಾದುದೆಂದು ತಿಳಿಸಿದನು.

ಈ ಅನುಭವದಿಂದ ಹರ್ಝ್ರತ್ ಖದೀಜ ಬಹಳವು ಪ್ರಭಾವಿತರಾದರು. ಆ ವೇಳೆಗೆ ಅವರು 40 ವರ್ಷ ಪ್ರಾಯವುಳ್ಳವರೂ ಎರಡು ಸಲ ವಿಧವೆಯಾದವರೂ ಆಗಿದ್ದರು. ಪೈಗಂಬರರು ತನ್ನನ್ನು ವಿವಾಹವಾಗುವರೇ ಎಂದು ವಿಚಾರಿಸಿ ತಿಳಿಯಲು ಅವರು ಒಬ್ಬ ಗೆಳತಿಯನು ಅವರ ಬಳಿ ಕಳುಹಿಸಿದರು. ಆ ಮಹಿಳೆಯು ಪೈಗಂಬರರ ಬಳಿ ಬಂದು ತಾವೇಕೆ ವಿವಾಹ ಮಾಡಿಕೊಂಡಿಲ್ಲವೆಂದು ವಿಚಾರಿಸಿದಳು. ತನ್ನಲ್ಲಿ ಸಾಕಷ್ಟು ಆರ್ಥಿಕ ಸಾಮರ್ಥ್ಯ ಇಲ್ಲದಿರುವುದೇ ಅದಕ್ಕೆ ಕಾರಣವೆಂದು ಅವರು ಉತ್ತರಿಸಿದರು. ಅದಕ್ಕೆ ಆ ಸ್ತ್ರೀ: ಈ ಅತಂಕವು ನೀಗಿದಲ್ಲಿ, ಕುಲಿನಳೂ ಧನಾಢ್ಯಳೂ ಸುಶೀಲಳೂ ಆದ ಒಬ್ಬ ಹೆಂಗಸಿನೊಡನೆಯಾದರೆ ತಾವು ವಿವಾಹವಾಗಲು ತಯಾರಿರುವಿರಾ? ಎಂದು ಕೇಳಲು ಅಂತಹ ಸ್ತ್ರೀ ಯಾರೆಂದು ಪೈಗಂಬರರು ವಿಚಾರಿಸಿದರು. ಅದು ಖದೀಜ ಎಂದು ಬಂದ ಆ ಮಹಿಳೆ ತಿಳಿಸಿದಳು. ಖದೀಜ ತನಗಿಂತ ಎಷ್ಟೋ ಉನ್ನತ ಮಟ್ಟದವಳೂ ಧನಾಢ್ಯಳೂ ಆಗಿರುವುದರಿಂದ ಆ ವಿವಾಹವು ಸಾಧ್ಯವಾಗಲಾರದೆಂದು ಪೈಗಂಬರರು ಹೇಳಿದರು. ಈ ವಿಷಮತೆಯನ್ನು ನೀಗಿಸಿ ಕೊಡುವ ಭಾರ ತನ್ನದೆಂದು ಆ ಮಹಿಳೆ ತಿಳಿಸಿದಳು. ಅಂತಾದರೆ, ವಿವಾಹಕ್ಕೆ ಒಪ್ಪುವುದರ ಹೊರತು ಪೈಗಂಬರರು ಬೇರೇನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ನಂತರ, ಖದೀಜ ತನ್ನ ಕಡೆಯಿಂದ ಪೈಗಂಬರರ ಚಿಕ್ಕಪ್ಪನ ಬಳಿಗೆ ವಿವಾಹ ಸಂಬಂಧವಾದ ಸಂದೇಶವನ್ನು ಕಳುಹಿಸಿದರು. ಪೈಗಂಬರರ ಮತ್ತು ಹರ್ಝ್ರತ್ ಖದೀಜರವರ ವಿವಾಹವು ಶಾಸ್ತ್ರೋಕ್ತವಾಗಿ ನೆರವೇರಿತು. ನಿರ್ಧನನೂ ಬಾಲ್ಯದಿಂದಲೇ ಅನಾಥನೂ ಆಗಿದ್ದ ಬಡ ಯುವಕನಿಗೆ ಮೊದಲ ಬಾರಿಗೆ

ಧನೈಶ್ವರ್ಯದ ಬಾಗಿಲು ತೆರೆಯಿತು. ಈಗ ಅವರು ಅಪಾರ ಸಂಪತ್ತಿನ ಯಜಮಾನನಾದರು. ಆದರೆ, ಅವರು ಆ ಸಂಪತ್ತನ್ನು ವಿನಿಯೋಗಿಸಿದ ರೀತಿಯು ಸಮಸ್ತ ಮಾನವ ಕುಲಕ್ಕೆ ಒಂದು ಉತ್ಕೃಷ್ಟವಾದ ನಿದರ್ಶನ ವಾಗಿದೆ.

ಹಝ್ರತ್ ಖದೀಜ ಅಪಾರ ಸಂಪತ್ತಿನ ಮಾಲಿಕ ಳಾಗಿದ್ದು ತನ್ನ ಪತಿಯು ನಿರ್ಧನನಾಗಿರುವ ಈ ಅಸಾಮಾ ನತೆಯ ಅವಸ್ಥೆಯು ಸುಖಜೀವನಕ್ಕೆ ಅಡ್ಡಿಯಾಗಬಹುದೆಂ ದು ಅವರು ತಿಳಿದುಕೊಂಡರು. ಆದುದರಿಂದ ಅವರು ತನ್ನ ಸಕಲ ಸಂಪತ್ತನ್ನೂ ಎಲ್ಲಾ ಗುಲಾಮರನ್ನೂ * ಪೈಗಂಬರರ ಪಾದಚರಣಗಳಲ್ಲಿ ಅರ್ಪಿಸಿದರು. ಖದೀಜಳ ಈ ತೀರ್ಮಾನವು ಮನಃಪೂರ್ವಕ ವಾದುದೆಂದು ಖಚಿತಪಡಿಸಿಕೊಂಡ ಪೈಗಂಬರರು, ತನ್ನ ಸ್ವಾಧೀನಕ್ಕೆ ಬರುವ ಎಲ್ಲಾ ಗುಲಾಮರನ್ನೂ ಸ್ವತಂತ್ರರ ನ್ನಾಗಿ ಮಾಡುವುದೇ ತನ್ನ ಆದ್ಯ ಕರ್ತವ್ಯವಾಗಿರುವುದೆಂದು ತಿಳಿಸಿದರು. ಅಂತೆಯೇ ಅವರು ಎಲ್ಲಾ ಗುಲಾಮ ದಾಸರನ್ನೂ ಬಳಿಗೆ ಕರೆದು ಇಂದಿನಿಂದ ನೀವೆಲ್ಲರೂ ಸ್ವತಂತ್ರರೆಂದು ಘೋಷಿಸಿದರು. ಮಾತ್ರವಲ್ಲ, ಖದೀಜ ಳಿಂದ ತನಗೆ ಲಭಿಸಿದ ಸಂಪತ್ತಿನ ಅಧಿಕಾಂಶವನ್ನೂ ಅವರು ಬಡ ಜನರಿಗೆ ದಾನ ಮಾಡಿದರು. ಪೈಗಂಬರರು ಸ್ವತಂತ್ರ ಗೊಳಿಸಿದ ಗುಲಾಮರಲ್ಲಿ "ಝೈದ್" ಎಂಬ ದಾಸನೂ ಒಬ್ಬ. ಅವನು ಇತರ ದಾಸರಿಗಿಂತಲೂ ಬುದ್ಧಿವಂತನೂ ಕುಶಾಗ್ರಮತಿಯೂ ಆಗಿದ್ದನು. ಅವನು ಒಂದು ಕುಲೀನ ಕುಟುಂಬಕ್ಕೆ ಸೇರಿದವನಾಗಿದ್ದ. ಚಿಕ್ಕವನಾಗಿದ್ದಾಗ ಅವ ನನ್ನು ಯಾರೋ ಅಪಹರಿಸಿ ತಂದು ಮಾರಿದ್ದರು. ನಂತರ ಕ್ರಯವಿಕ್ರಯವಾಗುತ್ತಾ ಬಂದು, ಕೊನೆಗೆ ಮಕ್ಕಾ ನಗರಕ್ಕೆ ತಲಪಿದ್ದನು. ಹೊಸದಾಗಿ ಬಿಡುಗಡೆಗೊಳಿಸಲ್ಪಟ್ಟ ಈ ಬಾಲಕನು, ಪೈಗಂಬರರ ಸದ್ಗುಣಗಳಿಂದ ಪ್ರಭಾವಿತನಾಗಿ ಇಂತಹ ಮಹಾಪುರುಷನ ಬಳಿ ಸೇವಕನಾಗಿರಲು ತನ್ನ ಸ್ವಾತಂತ್ರ್ಯವನ್ನು ತ್ಯಾಗಮಾಡುವುದೇ ಮೇಲೆಂದು ತೀರ್ಮಾನಿಸಿದನು. ಪೈಗಂಬರರು ಎಲ್ಲಾ ದಾಸರನ್ನೂ ಬಿಡುಗಡೆಗೊಳಿಸಿದಾಗ, ಝೈದ್ ಮಾತ್ರ ಬಿಡುಗಡೆಯನ್ನು ಇಚ್ಛಿಸದೆ ಪೈಗಂಬರರ ಬಳಿಯಲ್ಲೇ ಇರಲು ಅನುಮತಿ ನೀಡಬೇಕೆಂದು ಕೇಳಿಕೊಂಡನು. ಪೈಗಂಬರರು ಅದಕ್ಕೆ ಒಪ್ಪಿದರು. ಝೈದ್ ಪೈಗಂಬರರ ಸಂಗಡವೇ ಇದ್ದು ಅವರೊಳಗಿನ ಸ್ನೇಹ ಸಂಪರ್ಕವು ಉತ್ತರೋತ್ತರ ಬೆಳೆ ಯುತ್ತಲೇ ಇತ್ತು. ಇದೇ ವೇಳೆ ಝೈದನ ತಂದೆಯೂ ಚಿಕ್ಕಪ್ಪನೂ ಆತನನ್ನು ಹುಡುಕುತ್ತಲೇ ಇದ್ದರು. ಕೊನೆಗೆ ಆತನು ಮಕ್ಕಾದಲ್ಲಿರುವನೆಂದು ಅವರಿಗೆ ವಿವರ ಲಭಿಸಿತು. ಮಕ್ಕಾದ ಪೈಗಂಬರರ ಮನೆಯಲ್ಲಿ ಅವರು ತಮ್ಮ ಬಾಲಕ ನನ್ನು ಪತ್ತೆಹಚ್ಚಿದರು. ಅವರು ಪೈಗಂಬರರ ಬಳಿ ಬಂದು ತಮ್ಮ ಹುಡುಗನನ್ನು ಬಿಟ್ಟುಕೊಡಬೇಕೆಂದೂ ಅದರ ಪರಿಹಾರಾರ್ಥವಾಗಿ ಕೇಳಿದಷ್ಟು ಹಣವನ್ನು ಕೊಡಲು ತಾವು ಸಿದ್ಧರಿದ್ದೇವೆಂದೂ ಹೇಳಿದರು. ಪೈಗಂ ರರು, ಝೈದನನ್ನು ನಾನು ಮೊದಲೇ ಬಿಡುಗಡೆಗೊಳಿಸಿರು ವೆನು; ಆತನು ಈಗ ಸ್ವತಂತ್ರನಾಗಿದ್ದಾನೆ; ಆತನಿಗೆ ಇಷ್ಟ ವೆಂದಾದರೆ ನಿಮ್ಮೊಂದಿಗೆ ತೆರಳಬಹುದು ಎಂದು ಹೇಳಿ ದರು. ಝೈದನನ್ನು ಕರೆದು ಅವನ ತಂದೆಯನ್ನೂ ಚಿಕ್ಕಪ್ಪನನ್ನೂ ತೋರಿಸಿಕೊಟ್ಟರು. ತಂದೆಯೂ ಮಗನೂ ಪರಸ್ಪರ ಭೇಟಿಯಾದಾಗ ಅವರ ಕಣ್ಣುಗಳು ನೀರಿನಿಂದ ತುಂಬಿದವು. ಝೈದ್‌ನೊಡನೆ ತಂದೆಯು, ಕರುಣಾಳು ವಾದ ನಿನ್ನ ಈ ಯಜಮಾನ ನಿನ್ನನ್ನು ಬಿಡುಗಡೆಗೊಳಿಸಿ ದ್ದಾರೆ; ನಿನ್ನ ವಿಯೋಗದಿಂದ ತಾಯಿಯು ಅತ್ಯಂತ ವ್ಯಾಕುಲಳಾಗಿರುವಳು; ಈಗ ನೀನು ನಮ್ಮೊಂದಿಗೆ ಮನೆಗೆ ತೆರಳಿ ದುಃಖಿತರಾಗಿರುವ ನಮ್ಮ ಹೃದಯಗಳನ್ನು ಸಾಂತ್ವನ ಗೊಳಿಸು ಎಂದು ಹೇಳಿದನು. ಝೈದ್ ಈ ರೀತಿ ಉತ್ತ ರಿಸಿದ: "ತಂದೆಯೇ! ಮಾತಾ ಪಿತೃರನ್ನು ಪ್ರೀತಿಸದವರು ಯಾರು ತಾನೇ ಇರುವರು ? ನನ್ನ ಹೃದಯವೂ ಸಹ ನಿಮ್ಮ ಮತ್ತು ತಾಯಿಯೊಡನಿರುವ ಸ್ನೇಹದಿಂದ ನಿರ್ಭರಿತ ವಾಗಿದೆ. ಆದರೆ, ಮುಹಮ್ಮದರನ್ನು ನಾನು ಎಷ್ಟೊಂದು ಪ್ರೀತಿಸುವೆನೆಂದರೆ, ಅವರನ್ನಗಲಿ ಇನ್ನಾವುದೇ ಸ್ಥಳಕ್ಕೆ ಹೋಗುವುದು ನನಗೆ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ. ನಿಮ್ಮನ್ನು ಕಾಣಲು ಸಾಧ್ಯವಾದುದರಲ್ಲಿ ನನಗೆ ಅತಿಯಾದ ಆನಂದವಿದೆ. ಆದರೆ, ಮುಹಮ್ಮದರಿಂದ ಬೇರ್ಪಟ್ಟು ನಿಲ್ಲುವುದೆಂದರೆ, ಅದು ನನಗೆ ಅಸಾಧ್ಯ". ಝೈದ್‌ನ ಮನ ವೊಲಿಸಿ ಆತನನ್ನು ಕರಕೊಂಡು ಹೋಗಲು ತಂದೆ ಮತ್ತು ಚಿಕ್ಕಪ್ಪ ಬಹಳಷ್ಟು ಶ್ರಮಿಸಿದರಾದರೂ ಅವರ ಜತೆಯಲ್ಲಿ ಹೋಗಲು ಝೈದ್ ಒಪ್ಪಲಿಲ್ಲ. ಆತನ ಪ್ರೇಮವನ್ನೂ ಶ್ರದ್ಧಾದರಗಳನ್ನೂ ನೋಡಿ ಪೈಗಂಬರರು ಈ ರೀತಿ ಹೇಳಿ ದರು—"ಝೈದ್ ಮೊದಲೇ ಸ್ವತಂತ್ರನಾಗಿದ್ದನು; ಆದರೆ ಇಂದಿನಿಂದ ಅವನು ನನ್ನ ಮಗನಾಗಿರುವನು". ಝೈದನಿಗೂ ಪೈಗಂಬರರಿಗೂ ತಮ್ಮೊಳಗಿರುವ ಈ ಅಪಾರವಾದ ಸ್ನೇಹ

* ಅಂದಿನ ಅರಬ್ ದೇಶದಲ್ಲಿ ಗುಲಾಮರು ಒಂದು ಸೊತ್ತಾಗಿ ಗಣಿಸಲ್ಪಡುತ್ತಿದ್ದರು.

ಬಾಂಧವ್ಯವನ್ನು ಅರ್ಥಮಾಡಿಕೊಂಡು ಆತನ ತಂದೆಯೂ ಚಿಕ್ಕಪ್ಪನೂ ಊರಿಗೆ ಮರಳಿದರು. ಝೈದ್ ಪೈಗಂಬರರೊಂದಿಗೇ ಉಳಿದನು. (ಹಿಶಾಮ್).

## ಪ್ರಥಮ ಈಶ್ವರೀಯ ವಾಣಿ

ಪೈಗಂಬರರಿಗೆ 30 ವರ್ಷ ಪ್ರಾಯ ದಾಟಿದಾಗ ಪರಮಾತ್ಮನೊಡನಿರುವ ಅವರ ಸ್ನೇಹವೂ ದೈವಾರಾಧನೆಯ ಅಭಿರುಚಿಯೂ ಹೆಚ್ಚುತ್ತಲೇ ಬಂತು. ಮಕ್ಕಾದ ಜನರ ದೋಷಪೂರ್ಣವಾದ ದುರ್ಮಾರ್ಗ ಜೀವನವನ್ನು ಕಂಡು ಬೇಸತ್ತ ಪೈಗಂಬರರು ಅಲ್ಲಿಂದ ಎರಡು ಮೂರು ಮೈಲು ದೂರದಲ್ಲಿ ಪರಮಾತ್ಮನನ್ನು ಧ್ಯಾನಿಸಲು ಒಂದು ಸ್ಥಳವನ್ನು ಕಂಡುಕೊಂಡರು. ಅದು ಒಂದು ಪರ್ವತದ ಮೇಲೆ ಕಲ್ಲಿನಿಂದುಂಟಾದ ಗುಹೆಯಾಕಾರದ ಒಂದು ಸ್ಥಳವಾಗಿತ್ತು. ಅವರ ಪತ್ನಿ ಖದೀಜ ಕೆಲವು ದಿವಸಗಳಿಗೆ ಸಾಕಾಗುವಷ್ಟು ಆಹಾರ ಪದಾರ್ಥಗಳನ್ನು ತಯಾರಿಸಿ ಅವರಿಗೆ ಕೊಡುತ್ತಿದ್ದರು. ಈ ಆಹಾರ ಸಾಧನಗಳೊಂದಿಗೆ ಪೈಗಂಬರರು "ಹಿರಾ" ಎಂಬ ಗುಹೆಗೆ ಹೋಗಿ ದೇವರ ಧ್ಯಾನದಲ್ಲಿ ರಾತ್ರಿ-ಹಗಲು ಮಗ್ನರಾಗುತ್ತಿದ್ದರು.

ಅವರಿಗೆ 40 ವರ್ಷ ಪ್ರಾಯವಾದಾಗ ಅದೇ ಗುಹೆಯಲ್ಲಿ ಅವರು ಒಂದು ಅಲೌಕಿಕವಾದ ದೃಶ್ಯವನ್ನು ಕಂಡರು. ಅವರನ್ನು ಸಂಬೋಧಿಸುತ್ತಾ 'ಓದು' ಎಂಬ ಶಬ್ದ ಕೇಳುತ್ತಿದೆ. ಪೈಗಂಬರರು ಉತ್ತರಿಸಿದರು—'ನಾನು ಓದು ಬರಹ ಬಲ್ಲವನಲ್ಲ'. ಆ ಮನುಷ್ಯಾಕೃತಿಯು ಎರಡನೇ ಮತ್ತು ಮೂರನೇ ಬಾರಿಯೂ ಅದೇ ಶಬ್ದವನ್ನು ಉಚ್ಚರಿಸುತ್ತಾ ಕೊನೆಗೆ ಪೈಗಂಬರರು ಈ ವಚನಗಳನ್ನು ಹೇಳುವಂತೆ ಮಾಡಿತು:

> ಇಖ್‌ರಅ್ ಬಿಸ್‌ಮಿ ರಬ್ಬಿಕಲ್ಲದೀ ಖಲಖ್. ಖಲಖಲ್ ಇನ್‌ಸಾನ ಮಿನ್ ಅಲಖ್. ಇಖ್‌ರಅ್ ವ ರಬ್ಬುಕಲ್ ಅಕ್‌ರಮು. ಅಲ್ಲದೀ ಅಲ್ಲಮ ಬಿಲ್ ಖಲಮಿ. ಅಲ್ಲಮಲ್ ಇನ್ಸಾನ ಮಾಲಂ ಯಅ್‌ಲಂ.

ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಅವತೀರ್ಣವಾದ ಪ್ರಥಮ ಈಶ್ವರೀಯ ವಾಣಿಯು ಇದಾಗಿತ್ತು. ಇದರ ಅರ್ಥ ಈ ರೀತಿಯಾಗಿದೆ: ಸಮಸ್ತವನ್ನೂ ಸೃಷ್ಟಿಸಿರುವ ನಿನ್ನ ರಕ್ಷಕನ ನಾಮದೊಂದಿಗೆ ಓದು. ಅವನು ಮನುಷ್ಯರನ್ನು ಒಂದು ರಕ್ತಕರಣೆಯಿಂದ ಸೃಷ್ಟಿಸಿರುವನು. ಓದು! ನಿನ್ನ ರಕ್ಷಕನು ಪರಮ ದಯಾಮಯನಾಗಿರುವನು. ಅವನು ಲೇಖನಿಯ ಮೂಲಕ ಮನುಷ್ಯನಿಗೆ ಅಜ್ಞಾನವಾಗಿದ್ದುದನ್ನು ಕಲಿಸಿದನು'' (ಖುರ್‌ಆನ್ 96 : 2–6).

ಮೊತ್ತ ಮೊದಲಾಗಿ ಲಭಿಸಿದ ಈ ದೈವ ವಾಣಿಯು ಅದರ ನಂತರ ಲಭಿಸಿದ ದೈವ ವಾಣಿಗಳಂತೆಯೇ ಪವಿತ್ರ ಖುರ್‌ಆನಿನ ಒಂದು ಭಾಗವಾಗಿದೆ. ಈ ದಿವ್ಯವಾಣಿಯು ಪೈಗಂಬರರೊಡನೆ ಈ ರೀತಿ ಆಜ್ಞಾಪಿಸುತ್ತಿದೆ–ಎದ್ದೇಳು! ಒಬ್ಬನೇ ಪರಮಾತ್ಮನೂ ಏಕ ಸೃಷ್ಟಿಕರ್ತನೂ ಆದ ಭಗವಂತನ ನಾಮವನ್ನು ಘೋಷಿಸಲು ತಯಾರಾಗು; ಪರಮಾತ್ಮನನ್ನೂ ಇತರ ಮನುಷ್ಯರನ್ನೂ ಪ್ರೀತಿಸುವ ಸ್ವಭಾವಗುಣದೊಂದಿಗೆ ಅವನು ಮನುಷ್ಯನನ್ನು ಸೃಷ್ಟಿಸಿರುವನು. ಮೇಲಿನ ದೈವ ವಾಣಿಯಲ್ಲಿ ಪರಮಾತ್ಮನು ಈ ಸಂದೇಶವನ್ನು ಸರ್ವರಿಗೂ ತಿಳಿಸಲು ಆಜ್ಞಾಪಿಸಿರುವಂತೆ ಪೈಗಂಬರರಿಗೆ ಎಲ್ಲಾ ವಿಧದ ಸಂರಕ್ಷಣೆಯನ್ನೂ ಸಹಾಯವನ್ನೂ ವಾಗ್ದಾನ ಮಾಡಿರುವನು. ಲೋಕದಲ್ಲಿ ಎಲ್ಲಾ ವಿಧದ ಜ್ಞಾನವೂ ಲೇಖನಿಯ ಮೂಲಕ ಕಲಿಸಲ್ಪಡುವ ಒಂದು ಕಾಲವು ಬರಲಿಯೆಂದೂ ಮತ್ತು ಆ ಕಾಲದಲ್ಲಿ ಮನುಷ್ಯನಿಗೆ ಮೊದಲೆಂದೂ ಕೇಳಿರದ ಕಾರ್ಯಗಳು ಕಲಿಸಲ್ಪಡುವುದೆಂಬ ಭವಿಷ್ಯವಾಣಿಯೂ ಸಹ ಈ ವಚನಗಳಲ್ಲಡಕವಾಗಿದೆ. ಪವಿತ್ರ ಖುರ್‌ಆನಿನ ಸಂಕ್ಷಿಪ್ತವಾದೊಂದು ಸಾರಾಂಶವು ಈ ವಾಕ್ಯಗಳಲ್ಲಿ ಒಳಗೊಂಡಿದ್ದು ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಭವಿಷ್ಯದಲ್ಲಿ ಅವತೀರ್ಣಗೊಳ್ಳಲಿರುವ ಮಹತ್ವಪೂರ್ಣ ಜ್ಞಾನ ವಿಜ್ಞಾನದ ಸಂಕ್ಷಿಪ್ತ ರೂಪವೂ ಖುರ್‌ಆನಿನ ಈ ವಚನಗಳಲ್ಲಡಕವಾಗಿದೆ. ಈ ದಿವ್ಯ ವಚನಗಳಲ್ಲಿ, ಅದುವರೆಗೆ ಅಜ್ಞಾತವಾಗಿದ್ದ ಮಾನವನ ಆಧ್ಯಾತ್ಮಿಕ ಸುಧಾರಣೆಯ ಅತಿ ಮಹತ್ತಾದ ಅಸ್ತಿವಾರವು ಹಾಕಲ್ಪಟ್ಟಿದೆ. ಈ ವಚನಗಳ ಅರ್ಥ ವಿವರಣೆಯೂ ವ್ಯಾಖ್ಯಾನವೂ ಇಲ್ಲಿ ಉದ್ದೇಶಿಸಲ್ಪಟ್ಟಿಲ್ಲ. ಪವಿತ್ರ ಖುರ್‌ಆನಿನ ವ್ಯಾಖ್ಯಾನ ಗ್ರಂಥದಲ್ಲಿ ಅದರ ವಿವರಣೆಯನ್ನು ಕಾಣಬಹುದು. ಈ ಸಂದರ್ಭದಲ್ಲಿ ಇದರ ಕುರಿತು ಉಲ್ಲೇಖಿಸಲು ಕಾರಣ, ಅದು ಹಝ್ರತ್ ಮುಹಮ್ಮದ್ ಪೈಗಂಬರರ ಜೀವನದಲ್ಲಿ ಮಹತ್ವಪೂರ್ಣವಾದ ಒಂದು ಘಟನೆಯಾದುದರಿಂದಲೇ ಆಗಿದೆ. ಮುಹಮ್ಮದ್ ಪೈಗಂಬರರಿಗೆ ಈ ಪವಿತ್ರ ವಚನಗಳ ಅವತೀರ್ಣವಾದಾಗ ದೇವರು ತನ್ನ ಮೇಲೆ ಅರ್ಪಿಸಲು ನಿರ್ಧರಿಸಿದ ಬೃಹತ್ತಾದ ಜವಾಬ್ದಾರಿಕೆಯ ಕುರಿತು ಅವರು ಭಯಪಟ್ಟರು. ಬೇರಾವನೇ ವ್ಯಕ್ತಿಯೂ ಅವರ ಜಾಗದಲ್ಲಿರುತ್ತಿದ್ದರೆ, ಅತಿ

ಮಹತ್ತಾದ ಕಾರ್ಯ ನಿರ್ವಹಣಕ್ಕಾಗಿ ಪರಮಾತ್ಮನು ತನ್ನನ್ನೇ ಚುನಾಯಿಸಿರುವನೆಂದು ನೆನಸಿ ಆ ವ್ಯಕ್ತಿಯು ಗರ್ವೋನ್ಮತ್ತ ನಾಗುತ್ತಿದ್ದ. ಆದರೆ, ಪೈಗಂಬರರು ಆ ರೀತಿಯಿರಲಿಲ್ಲ. ತನ್ನ ಸಾಧನೆಗಳ ಕುರಿತು ಗರ್ವ ಪಡುವುದು ಅವರ ಸ್ವಭಾವಕ್ಕೆ ವಿಪರೀತವಾದ ಮಾತಾಗಿತ್ತು.

ಈ ಅಪೂರ್ವ ಅನುಭವದ ಬಳಿಕ ಅವರು ತನ್ನ ಮನೆಯ ಕಡೆ ಧಾವಿಸಿದರು. ಅವರ ಮುಖವು ಚಿಂತಾಕ್ರಾಂತವಾಗಿತ್ತು. ಅವರು ಕಳವಳ ಚಿತ್ತರಾಗಿದ್ದರು. ಹಝ್ರತ್ ಖದೀಜ, ಇದೇನೆಂದು ಕೇಳಲು ಅವರು ನಡೆದುದೆಲ್ಲವನ್ನೂ ಪತ್ನಿಗೆ ವಿವರಿಸಿಕೊಟ್ಟು, "ನನ್ನಂತಹ ದುರ್ಬಲ ವ್ಯಕ್ತಿಗೆ ಈ ಮಹತ್ತಾದ ಭಾರವನ್ನು ವಹಿಸಿಕೊಳ್ಳಲು ಹೇಗೆ ಸಾಧ್ಯ?" ಎಂದು ತನ್ನ ದುಃಖದ ಕಾರಣವನ್ನು ತಿಳಿಸಿದರು. ಒಡನೆಯೇ ಖದೀಜ ಈ ರೀತಿ ಉತ್ತರಿಸಿದರು: ''ದೇವರಾಣೆಗೂ, ನೀವು ಈ ಕಾರ್ಯದಲ್ಲಿ ಪರಾಜಿತರೂ ನಿರಾಶರೂ ಆಗಲಿಕ್ಕೂ ಪರಮಾತ್ಮನು ನಿಮ್ಮನ್ನು ಏಕಾಂಗಿಯಾಗಿ ಬಿಟ್ಟುಬಿಡಲಿಕ್ಕೂ ಬೇಕಾಗಿ ಅವನು ಈ ಸಂದೇಶವನ್ನು ನಿಮಗೆ ಕಳುಹಿಸಲಿಲ್ಲ. ಪರಮಾತ್ಮನು ಯಾವತ್ತೂ ಆ ರೀತಿ ಮಾಡಲಾರನು. ನೀವಾದರೋ ಬಂಧು ಬಾಂಧವರೊಡನೆ ಕರುಣೆಯುಳ್ಳವರೂ ಅನಾಥರಿಗೂ ನಿರ್ಧನರಿಗೂ ಸಹಾಯ ಮಾಡುವವರೂ ಅವರ ದುಃಖದಲ್ಲಿ ಪಾಲುಗೊಳ್ಳುವವರೂ ಆಗಿರುವಿರಿ. ಈ ರಾಜ್ಯದಲ್ಲಿ ಅಪ್ರತ್ಯಕ್ಷವಾಗಿರುವ ಸದಾಚಾರವೂ ಧಾರ್ಮಿಕತೆಯೂ ನಿಮ್ಮ ಮೂಲಕ ಪುನಃಸ್ಥಾಪಿತವಾಗುತ್ತಿದೆ. ತಾವು ಅತಿಥಿಗಳನ್ನು ಗೌರವದಿಂದ ಸತ್ಕರಿಸುತ್ತೀರಿ; ವಿಪತ್ತಿನಲ್ಲಿ ಜನರಿಗೆ ಸಹಾಯ ಮಾಡುತ್ತೀರಿ. ಏನು ಅಂತಹ ಒಬ್ಬ ಮಹಿಮಾವಂತ ವ್ಯಕ್ತಿಯನು ಪರಮಾತ್ಮನು ಪರೀಕ್ಷೆಗೊಳಪಡಿಸುವನೇ?'' (ಬುಖಾರಿ).

ಈ ರೀತಿ ಹೇಳಿ ಪೈಗಂಬರರನ್ನು ಖದೀಜ ತನ್ನ ಸೋದರ ಮಾವನ ಮಗನೂ ಕ್ರೈಸ್ತ ಧರ್ಮಾನುಯಾಯಿಯೂ ಆದ ವರಕ-ಬಿನ್-ನೌಫಲ್‌ರ ಬಳಿಗೆ ಕರೆತಂದರು. ನಡೆದ ಘಟನೆಯನ್ನು ಸಂಪೂರ್ಣ ಕೇಳಿ ತಿಳಿದ ಬಳಿಕ ವರಕ ನುಡಿದರು— "ಪ್ರವಾದಿ ಮೂಸ (ಅ)ರಿಗೆ ಅವತೀರ್ಣವಾದ ಅದೇ ದೈವ ದೂತ (ದೇವರ ಸಂದೇಶ ವಾಹಕ-ಮಲಕ್) ನಿಮ್ಮ ಮೇಲೂ ಅವತೀರ್ಣನಾಗಿದ್ದಾನೆಂಬುದು ನಿಶ್ಚಯ''. (ಬುಖಾರಿ)

ವರಕರವರ ಸಂಕೇತವು ಬೈಬಲ್ ಗ್ರಂಥದ ಧರ್ಮೋಪದೇಶ ಕಾಂಡದ (18 : 18) ಭವಿಷ್ಯವಾಣಿಯ ಕಡೆಗೆ ಸ್ಪಷ್ಟವಾದ ಸೂಚನೆಯಾಗಿತ್ತು.

## ಪ್ರಾರಂಭದ ಮುಸ್ಲಿಮರು

ಈ ವಿವರವು, ಪೈಗಂಬರರು ದಾಸ್ಯ ವಿಮೋಚಗೊಳಿಸಿದ ಝೈದ್‌ನಿಗೂ — ಅವರಿಗೆ ಆಗ 25-30 ವರ್ಷ ಪ್ರಾಯವಾಗಿತ್ತು — ಪೈಗಂಬರರ ಸೋದರಿಯ ಮಗ, 11 ವರ್ಷ ಪ್ರಾಯದ ಅಲಿ ಎಂಬವರಿಗೂ ತಲಪುತ್ತಲೇ ಅವರೀರ್ವರೂ ಪೈಗಂಬರರಲ್ಲಿ ವಿಶ್ವಾಸವನ್ನು ಪ್ರಕಟಿಸಿದರು. ಪೈಗಂಬರರ ಬಾಲ್ಯ ಸ್ನೇಹಿತರಾಗಿದ್ದ ಅಬೂಬಕರ್ ಆ ಸಮಯದಲ್ಲಿ ಪಟ್ಟಣದಲ್ಲಿರಲಿಲ್ಲ. ಅವರು ಹಿಂತಿರುಗಿ ಬರುತ್ತಲೇ ನಡೆದ ಸಂಭವವು ಅವರ ಕಿವಿಗೆ ಬಿತ್ತು. "ನಿನ್ನ ಮಿತ್ರನು ಹುಚ್ಚನಾಗಿದ್ದಾನೆ; ಪರಮಾತ್ಮನಿಂದ ತನಗೆ ದಿವ್ಯವಾಣಿ ಲಭಿಸುತ್ತಿದೆ ಎಂದು ಅವನು ಹೇಳುತ್ತಿರುವನು'' ಎಂಬುದಾಗಿ ಅವರೊಡನೆ ಹೇಳಲಾಯಿತು.

ಕೂಡಲೇ ಅಬೂಬಕರ್, ಪೈಗಂಬರರ ಮನೆಗೆ ಬಂದು ಬಾಗಿಲು ತಟ್ಟಿದರು. ಪೈಗಂಬರರನ್ನು ಕಾಣುತ್ತಲೇ ನಡೆದುದೇನೆಂದು ತಿಳಿಯ ಬಯಸಿದರು. ಹಝ್ರತ್ ಮುಹಮ್ಮದ್ ಪೈಗಂಬರರು, ತನ್ನ ಸ್ನೇಹಿತನು ಎಲ್ಲಿ ತಪ್ಪು ತಿಳಿದುಕೊಳ್ಳುವನೋ ಎಂಬ ಭಯದಿಂದ ಸ್ವಲ್ಪ ವಿಸ್ತಾರವಾದ ವಿವರಣೆಯನ್ನು ನೀಡತೊಡಗಿದರು. ಅಬೂಬಕರ್ ಅವರನ್ನು ತಡೆದು, "ನಿಮ್ಮ ಬಳಿಗೆ ಪರಮಾತ್ಮನ ಸಂದೇಶದೊಂದಿಗೆ ದೇವದೂತನ ಅವತೀರ್ಣವಾಗಿದೆ ಎಂಬುದಾಗಿ ನೀವು ಘೋಷಿಸಿರುವಿರೋ ಎಂದು ಮಾತ್ರ ನಾನು ತಿಳಿಯಬಯಸುತ್ತೇನೆ" ಎಂದು ಹೇಳಿದರು. ಮತ್ತೂ ಪೈಗಂಬರರು ಕೆಲವು ಸ್ಪಷ್ಟೀಕರಣಗಳನ್ನು ನೀಡಬಯಸಿದಾಗ ಅಬೂಬಕರ್ ಪುನಃ ಅವರನ್ನು ತಡೆದು, ನೀವು ಪರಮಾತ್ಮನಿಂದ ಸಂದೇಶವನ್ನು ಪಡೆದಿರುವಿರಾ ಎಂಬ ಪ್ರಶ್ನೆಗೆ ಮಾತ್ರ ಉತ್ತರವನ್ನು ಬಯಸುತ್ತೇನೆಂದು ತಿಳಿಸಿದರು. ಪೈಗಂಬರರು "ಹೌದು" ಎಂದು ಉತ್ತರಿಸಲು ಒಡನೆಯೇ ಅಬೂಬಕರ್ ತನ್ನ ವಿಶ್ವಾಸವನ್ನು ಪ್ರಕಟಿಸಿದರು. ಅವರು ಈ ರೀತಿ ಹೇಳಿದರು: ''ನಾನು ನಿಮ್ಮಲ್ಲಿ ಪೂರ್ಣ ವಿಶ್ವಾಸವನ್ನು ಕೈಗೊಂಡಿದ್ದೇನೆ. ವಿವರಣೆಯು ನನ್ನ ವಿಶ್ವಾಸದ ಮಹತ್ವವನ್ನು ಕೆಡಿಸುವುದು. ನಿಮ್ಮ ಕುರಿತು ಸಂಶಯ ತಾಳಲು ಎಂದಿಗೂ ಸಾಧ್ಯವಿಲ್ಲದ ರೀತಿಯಲ್ಲಿ ನಿಮ್ಮ ಪವಿತ್ರ ಜೀವನಕ್ಕೆ ನಾನು ಸಾಕ್ಷಿಯಾಗಿರು

ವೆನು. ನಿಮ್ಮ ವಾದದ ಸತ್ಯತೆಗೆ ನನಗೆ ಬೇರಾವ ನಿದರ್ಶನಗಳೂ ಬೇಕಾಗಿಲ್ಲ".

ವಿಶ್ವಾಸಿಗಳ ಈ ಸಣ್ಣ ಜಮಾಅತು (ಸಂಘ) ಇಸ್ಲಾಂ ಧರ್ಮದ ಪ್ರಥಮ ವಿಶ್ವಾಸಿಗಳಾಗಿದ್ದರು. ವೃದ್ಧಾಪ್ಯವನ್ನು ತಲಪಿದ ಒಬ್ಬ ಸ್ತ್ರೀ, ಓರ್ವ 11 ವರ್ಷ ಪ್ರಾಯದ ಬಾಲಕ, ದಾಸ್ಯ ವಿಮೋಚನೆಗೊಳಿಸಲ್ಪಟ್ಟ ಒಬ್ಬ ಪರದೇಶಿ ಯುವಕ, ಒಬ್ಬ ಬಾಲ್ಯ ಸ್ನೇಹಿತ ಮತ್ತು ಸ್ವಯಂ ಪೈಗಂಬರರು. ಈ ಕಿರು ಸಂಘವು ಅಂಧಕಾರಾಚ್ಛಾದಿತವಾಗಿದ್ದ ಜಗತ್ತಿನ ಮೂಲೆ ಮೂಲೆಗಳಿಗೂ ದೈವಿಕ ಸಂದೇಶದ ಪ್ರಕಾಶವನ್ನು ಪಸರಿಸಲು ದೃಢ ನಿಶ್ಚಯ ಮಾಡಿಕೊಂಡಿತು. ಮಕ್ಕಾದ ಜನ ಸಾಮಾನ್ಯರೂ ಅವರ ಮುಂದಾಳುಗಳೂ ಇದರ ಕುರಿತು ತಿಳಿದಾಗ ಪರಿಹಾಸ್ಯದಿಂದ ನಗಾಡುತ್ತಾ "ಇವರಿಗೆ ಹುಚ್ಚು ಹಿಡಿದಿದೆ" ಎಂದು ಹೇಳತೊಡಗಿದರು. ಇವರ ಕುರಿತು ಭಯಪಡಬೇಕಾಗಿಲ್ಲ; ಇವರ ಮಾತಿಗೆ ಹೆಚ್ಚಿನ ಮಹತ್ವವನ್ನೂ ಕೊಡಬೇಕಾಗಿಲ್ಲ ಎಂದು ಹೇಳಿದರು. ಆದರೆ, ಕಾಲ ಕಳೆದಂತೆ ಸತ್ಯವು ಅದರ ಪೂರ್ಣ ಪ್ರತಾಪದೊಂದಿಗೆ ಕ್ಷಿಪ್ರ ಗತಿಯಲ್ಲಿ ಬೆಳಗತೊಡಗಿತು. ಹಿಂದೆ ಯೆಶಾಯ ಪ್ರವಾದಿಯು ಭವಿಷ್ಯ ನುಡಿದಂತೆ "ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ" (ಯೆಶಾಯ 28 : 13) ಎಂಬಂತೆ ವಿಕಾಸವಾಗುತ್ತಾ ಬಂತು. ಪರಮಾತ್ಮನು ಪೈಗಂಬರರ ಬಾಯಿಯಿಂದ ತನ್ನ ಮಾತುಗಳನ್ನು ನುಡಿಸತೊಡಗಿದನು.* ಅದು ಯುವಕರ ಮನಸ್ಸಿನಲ್ಲಿ ಅಲ್ಲೋಲ ಕಲ್ಲೋಲವನ್ನುಂಟುಮಾಡಿತು. ಸತ್ಯಾಭಿಲಾಷಿಗಳ ಹೃದಯಗಳು ಉತ್ತೇಜನಗೊಂಡವು. ತತ್ಫಲವಾಗಿ ಮೆಲ್ಲ ಮೆಲ್ಲನೆ ಪರಿವರ್ತನೆಯು ಪ್ರಾರಂಭವಾಯಿತು. ಅವರ ನಿಂದಾತ್ಮಕವಾದ ವ್ಯಂಗ್ಯ ಮಾತುಗಳ ಸ್ಥಾನದಲ್ಲಿ ವಿಶ್ವಾಸನೀಯವೂ ಶ್ರದ್ಧಾತ್ಮಕವೂ ಪ್ರಶಂಸನೀಯವೂ ಆದ ಸ್ವರಗಳು ಮೊಳಗತೊಡಗಿದವು. ಗುಲಾಮರೂ ಯುವಕರೂ ನಿಸ್ಸಹಾಯಕ ಸ್ತ್ರೀಯರೂ ಪೈಗಂಬರರ ಸುತ್ತ ಸೇರತೊಡಗಿದರು. ಯಾಕೆಂದರೆ, ಅವರ ಸಂದೇಶ ಮತ್ತು ಪ್ರಬೋಧನೆಗಳಲ್ಲಿ ಅವರೆಲ್ಲರೂ ತಮ್ಮ ಜೀವನದ ಸಫಲತೆಯನ್ನು ಕಾಣುತ್ತಿದ್ದರು. ಸ್ತ್ರೀ ಸಮಾಜಕ್ಕೆ ತಮ್ಮ ಹಕ್ಕು ಸಂರಕ್ಷಣೆಯ ಮಾರ್ಗವು ಆ ಸಂದೇಶದಲ್ಲಿ ಗೋಚರವಾಗುತ್ತಿತ್ತು. ಗುಲಾಮ ವರ್ಗದವರು ತಮ್ಮ ಮುಕ್ತಿ ಮತ್ತು ಸ್ವಾಧೀನತೆಯ ಜಯ ಘೋಷಣೆಯನ್ನು ಆ ಸಂದೇಶದಲ್ಲಿ ಕೇಳುತ್ತಿದ್ದರು. ಯುವ ಸಮೂಹವು ತಮ್ಮ ಮಹತ್ತಾದ ಆಕಾಂಕ್ಷೆಗಳ ಸಫಲತೆಗೂ ಉನ್ನತಿಗೂ ಪ್ರಗತಿಗೂ ಮಾರ್ಗವು ತೆರೆದಿರುವುದಾಗಿ ಅನುಭವ ಪಡುತ್ತಿದ್ದರು. ●

---

*ಇದು ಬೈಬಲಿನ (ಹಳೆಯ ಒಡಂಬಡಿಕೆಯ) ಧರ್ಮೋಪದೇಶ ಕಾಂಡದ 18 : 18ರಲ್ಲಿ ಉಲ್ಲೇಖಿತವಾದ ಭವಿಷ್ಯನುಡಿಯ ಪೂರ್ತೀಕರಣವಾಗಿದೆ.

—ಸಂಪಾದಕ.


**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ**

# ಮೈತ್ರಿ ಸಂದೇಶ

"………ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"………ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARAMSHI Kannada Quarterly,
23/1008, Ansari Road, Bunder, Mangalore-575001.

# ಬಹುಪತ್ನಿತ್ವ

—ಎಸ್. ಅಬ್ದುರ್ರಹೀಂ.

ಇಸ್ಲಾಂ ನಿರ್ದೇಶಿಸಿದ ಬಹುಪತ್ನಿತ್ವ ಪದ್ಧತಿ ಒಂದು ಅನುಮತಿ ಮಾತ್ರವಾಗಿದೆ; ಎಲ್ಲರೂ ಕೈಗೊಳ್ಳಬೇಕಾದ ಒಂದು ಕಡ್ಡಾಯ ನಿಯಮವಲ್ಲವೆಂಬ ಸಂಗತಿಯನ್ನು ಅನೇಕರು ಮರೆತುಬಿಡುತ್ತಾರೆ. ಕುಟುಂಬಜೀವಿತದ ಭದ್ರತೆಗೂ ಧಾರ್ಮಿಕಜೀವಿತದ ರಕ್ಷಣೆಗೂ ಬೇಕಾಗಿ ಇಸ್ಲಾಂ ಈ ಒಪ್ಪಿಗೆಯನ್ನು ನೀಡಿದೆಯೆಂಬ ವಿಚಾರವನ್ನೂ ಅವರು ನೆನಪಿಸುವುದಿಲ್ಲ. ಸ್ತ್ರೀ ವರ್ಗದೊಡನೆ ತೋರಿಸುವ ಕಠಿಣವಾದ ಒಂದು ಅನೀತಿಯೆಂದು ಚಿತ್ರೀಕರಿಸಲ್ಪಡುವ ಈ ನಿಯಮಾನುಮತಿಯು ನಿಜವಾಗಿ ಸ್ತ್ರೀ ವರ್ಗದೊಡನೆ ತೋರಿಸುವ ಒಂದು ಅನುಕಂಪವಾಗಿದೆಯೆಂದು ಗಾಢವಾಗಿ ಚಿಂತಿಸುವವರಿಗೆ ತಿಳಿಯಲು ಕಷ್ಟವಿಲ್ಲ. ಮಾನವೀಯ ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡು, ಮನುಷ್ಯನ ಎಲ್ಲಾ ಸಮಸ್ಯೆಗಳಿಗೆ ಬೆಲೆಯಿರಿಸುವವನಿಗೆ ಬಹುಪತ್ನಿತ್ವವನ್ನು ಅಷ್ಟೊಂದು ಬೇಗನೆ ನಿಂದಿಸಿ ಹೇಳಲು ಸಾಧ್ಯವಿಲ್ಲ.

ಮನುಷ್ಯವಂಶದ ರಕ್ಷಕರಾಗಿ ಪ್ರವರ್ತಿಸಿದ್ದ ಪ್ರವಾದಿಗಳೂ ಆಚಾರ್ಯಪುರುಷರೂ ಆದ ಮಹದ್ವ್ಯಕ್ತಿಗಳ ಪೈಕಿ ಹಲವರು ಬಹುಪತ್ನಿತ್ವವನ್ನು ಸ್ವೀಕರಿಸಿದ್ದರೆಂದೂ ಲೋಕದಲ್ಲಿರುವ ಎಲ್ಲಾ ಮತಗಳೂ ಒಂದಲ್ಲವಾದರೆ ಇನ್ನೊಂದು ರೀತಿಯಲ್ಲಿ ಬಹುಪತ್ನಿತ್ವವನ್ನು ಅಂಗೀಕರಿಸುತ್ತವೆಯೆಂದೂ ಇರುವ ಪರಮಾರ್ಥವನ್ನು ಪರಿಗಣಿಸುವುದಾದರೆ, ಏಕಪತ್ನೀ ವ್ರತದ ಮತ್ತು ಬಹುಪತ್ನಿತ್ವ ವಿರೋಧದ ಹುಸಿ ಬಯಲಾದೀತು.

ಹಳೆಯ ಕಾಲದ್ದೆಂಬ ಕಾರಣವು ಒಂದು ನಿಯಮದ ಅಥವಾ ತತ್ವದ ಅಸ್ವೀಕಾರಕ್ಕೆ ದೃಷ್ಟಾಂತವಾಗುವುದಿಲ್ಲ. ಇಂದಿನ ಪರಿಸ್ಥಿತಿಗೆ ಪ್ರಾಯೋಗಿಕವೂ ಗುಣಕರವೂ ಎಂದು ತೋರುವ ಪಕ್ಷದಲ್ಲಿ ಎಷ್ಟು ಹಳೆಯದಾದ ತತ್ವವಾದರೂ ಎಷ್ಟು ಪೌರಾಣಿಕ ನಿಯಮವಾದರೂ ಸ್ವೀಕಾರಾರ್ಹವಾಗಿದೆ. ಯಾವುದೇ ಸಂದರ್ಭದಲ್ಲೂ ಸತ್ಯಸಂಧತೆ ಪಾಲಿಸಬೇಕೆಂಬ ಸಿದ್ಧಾಂತ ಬಹು ಪುರಾತನವಾದುದೆಂಬ ಕಾರಣದಿಂದ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸುಳ್ಳು ಹೇಳುವುದು ದೋಷಕರವಲ್ಲವೆಂದು ಸಮ್ಮತಿಸುವರೆ ಸಾಧ್ಯವಿಲ್ಲವಷ್ಟೇ. ಬಹುಪತ್ನಿತ್ವ ಹಿಂದಿನ ಕಾಲಗಳಲ್ಲಿ ಅಂಗೀಕಾರಾರ್ಹವಾಗಿದ್ದರೆ ಆಧುನಿಕ ಲೋಕದಲ್ಲಿ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಅದು ಪ್ರಾಯೋಗಿಕವೂ ಗುಣಕರವೂ ಆಗಿರುವುದರಲ್ಲಿ ಸಂದೇಹವಿಲ್ಲ. ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಸ್ವೀಕರಿಸಲು ಇಸ್ಲಾಂ ಪುರುಷನಿಗೆ ಅನುಮತಿಯನ್ನಿತ್ತದ್ದನ್ನು ದುರುಪಯೋಗಪಡಿಸಲು ಯಾರಾದರೂ ಪ್ರಯತ್ನಿಸುವವರಾದರೆ ಇಸ್ಲಾಂ ಅದಕ್ಕೆ ಹೊಣೆಯಲ್ಲ. ಮುಸ್ಲಿಂ ಸಮುದಾಯದಲ್ಲಿ ಇಂದು ಕಂಡುಬರುವ ವಿಕೃತಿಗಳನ್ನು ಎತ್ತಿತೋರಿಸಿ ಇಸ್ಲಾಮನ್ನು ವಿಮರ್ಶಿಸಲು ಹೊರಡುವವರೊಡನೆ, ಅವರು ಖುರ್‌ಆನಿನ ಅಧ್ಯಾಪನಗಳನ್ನು ಮುಂದೆ ಇರಿಸಿ ಮಾತನಾಡಬೇಕೆಂದು ನನ್ನ ಅಪೇಕ್ಷೆ.

### ಅನಾಗರಿಕ ಸಂಪ್ರದಾಯವಲ್ಲ

ಒಂದು ಸಂಗತಿಯನ್ನು ಮೊದಲೇ ಹೇಳಿಕೊಳ್ಳುತ್ತೇನೆ: ಬಹುಪತ್ನಿತ್ವವು ಬಹಳ ಅನಾಗರಿಕವೂ ನಿಂದನೀಯವೂ ಎಂಬ ಪೂರ್ವಗ್ರಹ ಪೀಡಿತ ತೀರ್ಮಾನವನ್ನು ಬದಿಗಿರಿಸಿ ಅದರ ಕುರಿತು ಚರ್ಚೆ ಮಾಡಬೇಕಾಗಿದೆ. ಮುಹಮ್ಮದ್ ಪೈಗಂಬರ್ ಪ್ರಬೋಧಿಸಿದ ಸಕಲ ತತ್ವಗಳೂ ಮನುಷ್ಯವಂಶದ ಪ್ರಯೋಜನಕ್ಕೂ ಸಂರಕ್ಷಣೆಗೂ ಇರುವಂತಹವೆಂದು ಮುಸ್ಲಿಮರು ನಂಬುತ್ತಾರೆ. ಸಾಮಾಜಿಕ ಸಮಸ್ಯೆಗಳ ಕುರಿತು ಅತ್ಯಧಿಕವಾಗಿ ತಿಳಿದುಕೊಂಡು ಅವಕ್ಕೆ ಪರಿಹಾರವನ್ನು ಹುಡುಕಲು ಶ್ರಮಿಸಿದ ಓರ್ವ ಲೋಕಗುರು ಮುಹಮ್ಮದ್ ಪೈಗಂಬರರಾಗಿದ್ದಾರೆ. ಈ ಸಂಗತಿ ಬರ್ಟ್ರಂಡ್ ರಸ್ಸೆಲ್‌ರಂತಹ ಮಹಾಪಂಡಿತರು ಎತ್ತಿತೋರಿಸಿದ್ದಾರೆ. ಅವರು ಈ ರೀತಿ ಹೇಳುತ್ತಾರೆ: Great religious leaders, with

the exception of Mahomet – and Confucius, if he can be called religious – have in general been very indifferent to social and political considerations, and have sought rather to perfect the soul by meditation, discipline and self-denial. "ಮುಹಮ್ಮದ್– ಮತ್ತು ಮತಾಚಾರ್ಯರ್ನೆಂದು ಪರಿಗಣಿಸಲ್ಪಡುವುದಾದರೆ, ಕನ್‌ಫ್ಯೂಸಿಯಸ್- ಹೊರತು ಮಹಾತ್ಮರಾದ ಮತಾಚಾರ್ಯರು ಸಾಮಾನ್ಯವಾಗಿ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಸಂಪೂರ್ಣವಾಗಿ ಅವಗಣಿಸಿದವರೂ ಧ್ಯಾನ, ಆಧ್ಯಾತ್ಮಿಕ ಶಿಕ್ಷಣ, ಆತ್ಮಪರಿತ್ಯಾಗ ಇತ್ಯಾದಿಗಳ ಮೂಲಕ ಮಾತ್ರ ಆತ್ಮಶಕ್ತಿಯನ್ನು ಪಡೆಯಲು ಶ್ರಮಿಸಿದವರೂ ಆಗಿದ್ದರು." (Marriage & Morals Russel-page 119). ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಕುರಿತು ಸಹ ಗಾಢವಾಗಿ ಚಿಂತಿಸಲು ಶ್ರಮಿಸಿದ ಓರ್ವ ಲೋಕೋದ್ಧಾರಕನೆಂಬ ನೆಲೆಯಲ್ಲಿ ಮುಹಮ್ಮದ್ ಪೈಗಂಬರರು ಕೆಲವು ನಗ್ನಸತ್ಯಗಳನ್ನು ಅಂಗೀಕರಿಸಿದರು ಎಂಬುದನ್ನು ನಿಷೇಧಿಸಲು ಸಾಧ್ಯವಿಲ್ಲ.

ಬಹುಪತ್ನಿತ್ವ ಅನಾಗರಿಕ ಸಂಪ್ರದಾಯವಲ್ಲ. ಅದು ಪರಿಷ್ಕೃತ ಸಮುದಾಯದಲ್ಲೂ ನಾಗರಿಕ ಜೀವಿತದಲ್ಲೂ ಅಂಗೀಕರಿಸಬೇಕಾದ ಒಂದು ಆವಶ್ಯಕತೆಯಾಗಿದೆ. ಲೈಂಗಿಕ ವಿಜ್ಞಾನಗಳ ಕುರಿತು ಮತ್ತು ಸಾಮಾಜಿಕ ಕೌಟುಂಬಿಕ ಸಮಸ್ಯೆಗಳ ಸಂಬಂಧಿಸಿ ಆಳವಾಗಿ ಚಿಂತಿಸಿದ ಓರ್ವ ಜರ್ಮನ್ ವಿಜ್ಞಾನಿ, ಪ್ರೊಫೆಸರ್ ವಾಂಡಿ ವೆಲ್ಡಿ ತನ್ನ ಸುಪ್ರಸಿದ್ಧವಾದ Fit or Unfit for Marriage ಎಂಬ ಗ್ರಂಥದಲ್ಲಿ ಈ ರೀತಿ ಹೇಳುತ್ತಾರೆ: One can safely admit that the polygamous impulse may perhaps be stronger in civilized than in primitive man. "ಆದಿಮ ಮನುಷ್ಯನಿಗಿಂತ ಬಹುಪತ್ನಿತ್ವಾಸಕ್ತಿ ಹೆಚ್ಚಾಗಿರುವುದು ನಾಗರಿಕ ಮನುಷ್ಯನಲ್ಲಾಗಿದೆ ಎಂದು ಸಮ್ಮತಿಸಲು ಪ್ರಯಾಸವಿಲ್ಲ". (Fit or Unfit for Marriage, H. Van De Veldi, M. D. page 207). ಏಕಪತ್ನೀವ್ರತರೆಲ್ಲಾ ಅನಾಗರಿಕರೆಂದೋ ಎಲ್ಲರೂ ಬಹುಪತ್ನಿತ್ವವನ್ನು ಸ್ವೀಕರಿಸಬೇಕೆಂದೋ ಇದರ ಅರ್ಥವಲ್ಲ; ಒಂದು ವಸ್ತುಸ್ಥಿತಿಯನ್ನು ಬಹಿರಂಗಗೊಳಿಸಿದುದು ಮಾತ್ರ.

ಸಂಕ್ಷಿಪ್ತವಾಗಿ, ಮನಃಶಾಸ್ತ್ರಪರವೂ ಜೀವಶಾಸ್ತ್ರಪರವೂ ಸಾಮೂಹಿಕವೂ ಸಾಂಸ್ಕಾರಿಕವೂ ಸದಾಚಾರಪರವೂ ಆದ ಹಲವು ಕಾರಣಗಳನ್ನು ಮುಂದಿರಿಸಿಕೊಂಡು ಇಸ್ಲಾಂ ಬಹುಪತ್ನಿತ್ವ ಪದ್ಧತಿಯನ್ನು ಕೆಲವು ಸಂದರ್ಭಗಳಲ್ಲಿ ಸ್ವೀಕರಿಸಲು ಅನುಮತಿಯನ್ನಿತ್ತಿದೆ. ಸಮಗ್ರವಾಗಿ ಚಿಂತಿಸುವವರಿಗೂ ಗಾಢವಾಗಿ ಆಲೋಚಿಸುವವರಿಗೂ ಇದು ತಿಳಿದುಕೊಳ್ಳಲು ಪ್ರಯಾಸಕರವಾದ ಸಂಗತಿಯಲ್ಲ.

### ವಿವಾಹ ಯಾತಕ್ಕಾಗಿ ?

ವಿವಾಹಕ್ಕೆ ನಮ್ಮನ್ನು ಪ್ರೇರೇಪಿಸುವ ಕಾರಣಗಳು ಯಾವುವು ? ಲೈಂಗಿಕ ಸಂಬಂಧ ಮನುಷ್ಯನಿಗೆ ಅನಿವಾರ್ಯವಾದುದರಿಂದ ಸಾಮೂಹಿಕ ಜೀವಿತದ ಭದ್ರತೆಗಾಗಿ ವಿವಾಹದ ಏರ್ಪಾಡು ಮಾಡಲಾಗಿದೆ. ಮನುಷ್ಯಜೀವಿತದ ಬಾಳ್ವಿಕೆಗೆ ವಿವಾಹ ಅನುಪೇಕ್ಷಣೀಯವಾಗಿದೆ. ವಿವಾಹದ ಉದ್ದೇಶಗಳು ಮುಖ್ಯವಾಗಿ ನಾಲ್ಕು

1. ಸಂತಾನೋತ್ಪಾದನೆ (Procreation)
2. ಲೈಂಗಿಕ ಸುಖ (Sexual Pleasure)
3. ಸಾಮಾಜಿಕ ಭದ್ರತೆ(Social Security)
4. ಧಾರ್ಮಿಕ ಪ್ರಗತಿ (Spiritual Progress)

ಈ ನಾಲ್ಕು ಉದ್ದೇಶಗಳು ಪೂರೈಸಲು ಸಾಧ್ಯವಾಗುವಂತೆ ನಮ್ಮ ವಿವಾಹಬಂಧವನ್ನು ನಿಯಂತ್ರಿಸಬೇಕಾಗಿದೆ. ಯಾವ ರೀತಿಯ ವಿವಾಹವು ಅದಕ್ಕೆ ಸಹಾಯಕವಾಗಿದೆ ಎಂಬುದು ಪ್ರತಿಯೊಬ್ಬನ ವ್ಯಕ್ತಿಪರವಾದ ಶಾರೀರಿಕ–ಆರ್ಥಿಕ–ಮಾನಸಿಕ ನೆಲೆಗಳನ್ನು ಆಶ್ರಯಿಸಿಕೊಂಡಿದೆ. ಇಸ್ಲಾಂಮತ ಮನುಷ್ಯನ ಈ ಸ್ಥಿತಿವ್ಯತ್ಯಾಸಗಳನ್ನು ಸಂಪೂರ್ಣ ಅಂಗೀಕರಿಸುತ್ತಾ ಮೌಲಿಕವಾದ ಜೀವಿತಲಕ್ಷ್ಯವನ್ನು ಮುಂದಿರಿಸಿ ನಿಯಂತ್ರಣಗಳನ್ನೂ ಸ್ವಾತಂತ್ರ್ಯಗಳನ್ನೂ ಏರ್ಪಡಿಸಿದೆ. ಮುಸ್ಲಿಂಮರೆಲ್ಲರೂ ಬಹುಪತ್ನಿತ್ವವನ್ನು ಕೈಗೊಂಡಿಲ್ಲ. ಸಮುದಾಯದಲ್ಲಿ ಬಹಳ ಅಲ್ಪಸಂಖ್ಯೆಯ, ಒಂದು ವೇಳೆ, ಕೈಬೆರಳೆಣಿಕೆಯಷ್ಟು ಜನರು ಮಾತ್ರ ಬಹುಪತ್ನಿತ್ವವನ್ನು ಸ್ವೀಕರಿಸಿದ್ದಾರೆ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಸ್ವೀಕರಿಸಲು ಮನುಷ್ಯರು ನಿರ್ಬಂಧಿತರಾಗುವುದರಿಂದ ಆ ಅನುಮತಿ ಇರಬೇಕಾಗಿದೆಯೆಂದೂ, ಬಹು

ಪತ್ನಿತ್ವವನ್ನು ಸಂಪೂರ್ಣ ನಿರೋಧಿಸುವುದು ನೀತೀಕರಿಸಲ್ಪಡುವುದಿಲ್ಲವೆಂದೂ ಮಾತ್ರವೇ ಇಸ್ಲಾಂ ಸಿದ್ಧಾಂತಿಸುತ್ತದೆ. ಹಲವು ನಿಯಮ ನಿರ್ಬಂಧಗಳಿಗೂ ಸಾಧ್ಯತೆ ಬಾಧ್ಯತೆಗಳಿಗೂ ವಿಧೇಯವಾದ ಸ್ಥಿತಿಯಲ್ಲಿ ನಾಲ್ಕರವರೆಗೆ ವಿವಾಹ ಆಗಬಹುದೆಂದು ಇಸ್ಲಾಂ ಅನುಮತಿಯನ್ನಿತ್ತಿದೆ. ಅಂದರೆ, ಎಷ್ಟು ದೊಡ್ಡ ರಾಜನಾಗಿದ್ದರೂ ನಾಲ್ಕು ಪತ್ನಿಯರನ್ನು ಮಾತ್ರ ವರಿಸಿ ತನ್ನ ವಿಕಾರಗಳನ್ನು ನಿಯಂತ್ರಿಸಬೇಕೆಂದು.

ಬಹುಪತ್ನಿತ್ವವನ್ನು ಕೈಗೊಳ್ಳಬೇಕಾದ ಸಂದರ್ಭಗಳ ಕುರಿತು ಪರ್ಯಾಲೋಚನೆ ಮಾಡುವ. ಬಂಜೆಯೋ, ನಿತ್ಯರೋಗಿಯೋ, ಸಾಂಕ್ರಮಿಕ ರೋಗಕ್ಕೆತುತ್ತಾದವಳೋ, ಅಸ್ಪೃಶ್ಯರೋಗಕ್ಕೆ ಗುರಿಯಾದವಳೋ, ಪತಿಸಂಗವನ್ನು ಇಷ್ಟಪಡದ ಮಾನಸಿಕ ರೋಗಿಯೋ, ಹುಚ್ಚಿಯೋ ಆದ ಪತ್ನಿಯಾಗಿದ್ದರೆ ಅವಳ ಗಂಡನ ಅವಸ್ಥೆ ಏನಾಗಿರಬಹುದೆಂದೂ ಅವನು ಯಾವ ರೀತಿಯಲ್ಲಿ ವರ್ತಿಸಬೇಕಾಗಿದೆಯೆಂದೂ ಬಹುಪತ್ನಿತ್ವವನ್ನು ವಿರೋಧಿಸುವವರು ಒಮ್ಮೆ ಹೇಳಿಕೊಡುವರೇ ? ಈ ಪರಿಸ್ಥಿತಿಯಲ್ಲಿ ಒಬ್ಬ ಪುರುಷನು ಅನುಭವಿಸಬಹುದಾದ ಸ್ಥಾಯಿಯಾದ ವಿಷಮತೆಗಳಿಗೆ ಯುಕ್ತ ಪರಿಹಾರವೇನು ? ಈ ಲೋಕದಲ್ಲಿರುವ ಸಕಲ ತತ್ವಶಾಸ್ತ್ರಗಳಲ್ಲಿ ಹುಡುಕಿದರೂ ವಿವಾಹದ ಮೇಲೆ ಹೇಳಿದ ನಾಲ್ಕು ಉದ್ದೇಶಗಳನ್ನು ಪೂರ್ತಿಗೊಳಿಸುವ ಪರಿಹಾರಮಾರ್ಗಗಳಾಗಿ ವಿವಾಹ ವಿಚ್ಛೇದನ ಅಥವಾ ಬಹುಪತ್ನಿತ್ವದ ಹೊರತು ಬೇರೇನನ್ನೂ ಕಂಡುಕೊಳ್ಳಲು ಸಾಧ್ಯವಿಲ್ಲ. ಇಸ್ಲಾಂ ಧರ್ಮ ಈ ಎರಡು ಪರಿಹಾರಗಳನ್ನೂ ನಿರ್ದೇಶಿಸಿದೆ. ಇಲ್ಲಿ ವಿವಾಹ ವಿಚ್ಛೇದನ ಮಾಡಿಕೊಂಡು ಪುರುಷ ಬಚಾವಾಗಬಹುದು. ಆದರೆ ಸ್ತ್ರೀಯ ಅವಸ್ಥೆಯೇನು? ವಿವಾಹದ ನಂತರ ಅವಳು ಮೇಲೆ ಹೇಳಿದಂತಹ ದೈನ್ಯಾವಸ್ಥೆಗೆ ತುತ್ತಾದರೆ, ಪತಿಯು ಅವಳನ್ನು ಉಪೇಕ್ಷಿಸುವುದಾದರೆ, ಆ ಸ್ತ್ರೀಗೆ ಆಶ್ರಯವೇನು? ಅಂತಹ ಓರ್ವ ರೋಗಿಷ್ಟ ಸ್ತ್ರೀಯನ್ನು ತನ್ನ ಮಡದಿಯಾಗಿರಿಸಿಕೊಂಡೇ ಸಾಕೆ ಸಲಹುವ ಹೊಣೆಯನ್ನು ಪುರುಷನ ಮೇಲೆ ಹೊರಿಸುವುದು ಕ್ರೂರವೆಂದು ಇಲ್ಲಿ ಹೇಳಲಿಕ್ಕಿರುವ ನ್ಯಾಯವೆಂದಾದರೆ, ಗಂಡ ಒಳ್ಳೆಯ ಸಾಮರ್ಥ್ಯವಿದ್ದವನಾಗಿದ್ದರೆ, ಆ ಪತ್ನಿಯೊಡನೆ ಸಹಾನುಭೂತಿಯನ್ನು ತೋರಿಸಿ ಅವಳನ್ನೂ ಪೋಷಿಸುತ್ತಾ ಇನ್ನೊಂದು ವಿವಾಹವನ್ನು ಸಹ ಮಾಡಿಕೊಂಡು ಒಂದು ಸಾಮಾಜಿಕ ತ್ಯಾಗಕ್ಕೆ ಸಿದ್ಧನಾಗಬೇಕೆಂದು ಇಸ್ಲಾಂ ಹೇಳುವುದು ಸ್ತ್ರೀಯೊಡನಿರುವ ಸಹತಾಪ ಮತ್ತು ಅನುಕಂಪದಿಂದ ಮಾತ್ರವೆಂಬ ವಸ್ತುತವನ್ನು ಅಂಗೀಕರಿಸಬೇಕಾಗಿದೆ.

### ಸ್ತ್ರೀಯರು ಹೆಚ್ಚಾಗುವಾಗ

ವ್ಯಭಿಚಾರವನ್ನು ತಡೆಯಲಿಕ್ಕೂ ವಿವಾಹ ವಿಚ್ಛೇದನಗಳನ್ನು ಕಡಿಮೆಮಾಡಲಿಕ್ಕೂ ಬೇಕಾಗಿ ಇಸ್ಲಾಂ ಧರ್ಮ ಬಹುಪತ್ನಿತ್ವಕ್ಕೆ ಒಪ್ಪಿಗೆಯನ್ನಿತ್ತದ್ದೆಂದು ಮೇಲಿನ ವಿವರಣೆಗಳಿಂದ ತಿಳಿಯಬಹುದು. ಇತರ ಕೆಲವು ಸಂದರ್ಭಗಳಲ್ಲಿ ಬಹುಪತ್ನಿತ್ವವನ್ನು ಅನಿವಾರ್ಯವನ್ನಾಗಿ ಮಾಡುವ ಸಮಸ್ಯೆಗಳು ಉಂಟಾಗುತ್ತವೆ–ಸಾಮಾಜಿಕವೂ, ಸಾಂಪತ್ತಿಕವೂ ಧಾರ್ಮಿಕವೂ ರಾಷ್ಟ್ರೀಯವೂ ಆದ ಸಮಸ್ಯೆಗಳು.

ಉದಾಹರಣೆಗಾಗಿ, ಸ್ತ್ರೀಯರು ಪುರುಷರಿಗಿಂತ ಅಧಿಕವಿರುವ ರಾಜ್ಯಗಳಲ್ಲಿ, ಯುದ್ಧ ಮೊದಲಾದ ಕಾರಣಗಳಿಂದ ಪುರುಷರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುವ ಘಟ್ಟಗಳಲ್ಲಿ ಬಹುಪತ್ನಿತ್ವ ಸಂಪ್ರದಾಯವು ಒಂದು ದೇಶೀಯ ಅವಶ್ಯಕತೆಯಾಗುತ್ತದೆ. ಮಾತ್ರವಲ್ಲ, ರಾಷ್ಟ್ರವನ್ನು ಧಾರ್ಮಿಕಾಧಃಪತನದಿಂದ ರಕ್ಷಿಸಲು ಅಂತಹ ಸಂದರ್ಭಗಳಲ್ಲಿ ಬಹುಪತ್ನಿತ್ವಕ್ಕೆ ಪ್ರೋತ್ಸಾಹಕೊಡಬೇಕಾದುದು ಆಡಳಿತಾಧಿಕಾರಿಗಳ ಕರ್ತವ್ಯವಾಗಿದೆ. ಸ್ತ್ರೀವರ್ಗದ ಪ್ರಶ್ನೆಗಳನ್ನು ಸಮಗ್ರವಾಗಿ ವೀಕ್ಷಿಸುವಾಗ, ವ್ಯಭಿಚಾರದಿಂದ ಮತ್ತು ಅಪಮಾನಕರ ಜೀವಿತದಿಂದ ಅವರನ್ನು ರಕ್ಷಿಸಲು ಬಹುಪತ್ನಿತ್ವವಲ್ಲದೆ ಬೇರೆ ದಾರಿಯಿಲ್ಲವೆಂದು ಮನವರಿಕೆಯಾಗಬಹುದು. ವಿವಾಹದ ಒಂದು ಉದ್ದೇಶವೆಂದು ಗಣಿಸಲ್ಪಡುವ ಲೈಂಗಿಕ ಸುಖವನ್ನು ಸಂಬಂಧಿಸಿ ಹೇಳುವುದಾದರೆ ಈ ಘಟ್ಟದಲ್ಲಿ ಬಹುಪತ್ನಿತ್ವವನ್ನು ಸ್ವೀಕರಿಸಲು ಪುರುಷನಿಗೆ ಸಂದರ್ಭವನ್ನು ಕೊಡುವುದಿಲ್ಲವಾದರೆ, ಸ್ತ್ರೀಯರನ್ನು ವ್ಯಭಿಚಾರಮಾಡಲು ಬಿಡುವುದೆಂಬ ನೆಲೆಯನ್ನು ಸ್ವೀಕರಿಸದೆ ಅವರೊಡನೆ ನೀತಿತೋರಿಸಲ್ಪಡಲಾಗದು. ಬರ್ಟ್ರೆಂಡ್ ರಸ್ಸೆಲ್‌ರಂತಹ ಭೌತಿಕ ವಾದಿಗಳು ಸಮರ್ಪಿಸುವ ಪರಿಹಾರಮಾರ್ಗ ಇದೇ ಆಗಿದೆ.

ರಸ್ಸೆಲ್ ಈ ರೀತಿ ಹೇಳುತ್ತಾರೆ: If men are allowed prenuptial intercourse (as in fact they are) women must be allowed it also. And in all countries where there is an excess of women it is obvious injustice that those women who by arithmetical necessity must remain unmarried should be wholly

(20ನೇ ಪುಟಕ್ಕೆ)

# ಶಿಲುಬೆಯಿಂದ ಯೇಸುವಿನ ವಿಮೋಚನೆ

## ಲಂಡನಿನಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ

—ಬಿ. ಎ. ರಫೀಕ್, ಲಂಡನ್ ಮಸೀದಿ ಇಮಾಂ.

1978ನೇ ಇಸವಿ ಜೂನ್ 2, 3 ಮತ್ತು 4ನೇ ತಾರೀಕುಗಳಲ್ಲಿ ಇಂಗ್ಲೆಂಡಿನ ಅಹ್ಮದಿಯಾ ಸಂಘಟನೆಯ ವತಿಯಿಂದ "ಶಿಲುಬೆಯಿಂದ ಯೇಸುವಿನ ವಿಮೋಚನೆ" ಎಂಬ ವಿಷಯದ ಕುರಿತು ವಿಚಾರ ವಿಮರ್ಶೆ ಮಾಡಲು ಒಂದು ಅಂತಾರಾಷ್ಟ್ರೀಯ ಸಮ್ಮೇಳನ ಜರಗಲಿದೆ. ಮೂರು ದಿನಗಳ ಸಿಂಪೋಸಿಯಮ್ ಅಲ್ಲದೆ ಈ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳ, ಪತ್ರಿಕೆಗಳ ಮತ್ತು ಸ್ಲೈಡುಗಳ ಪ್ರದರ್ಶನವನ್ನು ಸಹ ಏರ್ಪಡಿಸಲಾಗುವುದು. ರೇಡಿಯೋ, ಟೆಲಿವಿಷನ್. ಪತ್ರಿಕಾಗೋಷ್ಠಿ, ಸಂದರ್ಶನ ಮುಂತಾದ ಕಾರ್ಯಕ್ರಮಗಳಿಗೆ ಪ್ರತ್ಯೇಕ ಏರ್ಪಾಡುಗಳಿವೆ.

ಇತ್ತೀಚೆಗಿನ ಕೆಲವು ವರ್ಷಗಳಿಂದ ಹಲವಾರು ಪೌರ್ವಾತ್ಯ ಭಾಷಾತಜ್ಞರೂ ಇತಿಹಾಸಕಾರರೂ ವಿಜ್ಞಾನಿಗಳೂ ಯೇಸುವಿನ ಜೀವಿತ, ಶಿಲುಬಾ ಪ್ರಕರಣ, ಪೂರ್ವ ದೇಶ ಯಾತ್ರೆ ಮತ್ತು ಕಾಶ್ಮೀರದಲ್ಲಿ ಯೇಸುವಿನ ಕುರುಹುಗಳ ಕುರಿತು ಪದೇಪದೇ ಬರೆಯುತ್ತಿದ್ದಾರೆ. ಇಟಲಿಯ ಟ್ಯೂರಿನ್ ಎಂಬಲ್ಲಿ ಭದ್ರವಾಗಿರಿಸಿದ, ಯೇಸುವಿನ ಶವ ರೂಪೀ ಶರೀರಕ್ಕೆ ಹೊದಿಸಿದ ಪವಿತ್ರ ವಸ್ತ್ರ (Holy Shroud) ಚರಿತ್ರ ಪ್ರಧಾನ್ಯವಾಗಿದ್ದು, ಅದರ ಕುರಿತು ವಿಜ್ಞಾನಿಗಳು ನಡೆಸಿದ ಸಂಶೋಧನೆಗಳ ಫಲಿತಾಂಶಗಳು ವಿವಾದ ವಿಷಯವಾಗಿದೆ. ಪವಿತ್ರ ವಸ್ತ್ರದ ಕುರಿತು ಲಂಡನಿನಲ್ಲಿ ಇತ್ತೀಚೆಗೆ ಕ್ರೈಸ್ತರ ಒಂದು ಅಂತಾರಾಷ್ಟ್ರೀಯ ಸಮ್ಮೇಳನ ಸಹ ಜರಗಿತು. 1978ನೇ ಇಸವಿ ಮೇ ತಿಂಗಳಲ್ಲಿ ಈ ವಸ್ತ್ರದ ಪ್ರದರ್ಶನವನ್ನೂ ಇದರ ಸಂಬಂಧಿಸಿ ವಿಜ್ಞಾನಿಗಳ ಮತ್ತು ಇತಿಹಾಸಕಾರರ ಒಂದು ಸಮ್ಮೇಳನವನ್ನೂ ಸಂಘಟಿಸುವರೆ ಏರ್ಪಾಡುಗಳು ಆರಂಭಿಸಿವೆ.

ಯೇಸುವಿನ ಮರಣ ಶಿಲುಬೆಯ ಮೇಲೆ ಸಂಭವಿಸಲಿಲ್ಲವೆಂದು ಅನೇಕ ಮುಸ್ಲಿಮೇತರ ಚಿಂತನಾಶೀಲರೂ ನಂಬುತ್ತಿದ್ದಾರೆ. ಶವಕುಟೀರದಲ್ಲಿದ್ದಾಗ ಅವರಿಗೆ ಜೀವವಿತ್ತೆಂದೂ, ಅಲ್ಲಿಂದ ಅವರು ಚೇತರಿಸಿದ ನಂತರ ಆಗ್ನೇಯ ದಿಕ್ಕಿನತ್ತ ಪ್ರಯಾಣಿಸುತ್ತಾ ಅಫ್ಘಾನಿಸ್ಥಾನಕ್ಕೂ ಕಾಶ್ಮೀರಕ್ಕೂ ಬಂದರೆಂದೂ ಅವರು ನಂಬುತ್ತಾರೆ. ಪವಿತ್ರ ವಸ್ತ್ರಕ್ಕೆ ಸಂಬಂಧಿಸಿದ ಸಂಶೋಧನೆಗಳಿಂದಲೂ ಹೊಸ ಕ್ರೈಸ್ತ ಪುಸ್ತಕಗಳಿಂದಲೂ ಈ ವಿಷಯವು ಇನ್ನೂ ದೃಢೀಕರಿಸಲ್ಪಡಲಿಕ್ಕೂ ಒಂದು ಇತಿಹಾಸ ಸತ್ಯವೆಂದು ಅಂಗೀಕರಿಸಲ್ಪಡಲಿಕ್ಕೂ ಸಾಧ್ಯತೆ ಇದೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರು ತನಗೆ ಲಭಿಸಿದ ದಿವ್ಯಜ್ಞಾನದ ಸಹಾಯದಿಂದ ಯೇಸು ಶಿಲುಬೆಯಿಂದ ರಕ್ಷಿಸಲ್ಪಟ್ಟಿದ್ದರೆಂದು ಸ್ಪಷ್ಟಪಡಿಸುತ್ತಾ ಆಕಾಶಾರೋಹಣಮಾಡಿದ್ದರೆಂಬ ನಂಬಿಕೆಯನ್ನು ಖಂಡಿಸುತ್ತಾ ಈ ಹೊಸ ವಾದವನ್ನು ಮೊತ್ತಮೊದಲಿಗೆ ಸಾದರಪಡಿಸಿದರು. ಪವಿತ್ರ ವಸ್ತ್ರಕ್ಕೆ ಸಂಬಂಧಿಸಿದ ಸಾಕ್ಷ್ಯಗಳೂ ಹೊಸ ಶೋಧಗಳೂ ಈ ವಿಷಯದಲ್ಲಿ ಹೊಸತಾಗಿ ಕಂಡುಬರುವ ಆಸಕ್ತಿಯೂ ಅಹ್ಮದಿಯರಿಗೆ ಪ್ರಧಾನ್ಯವುಳ್ಳ ಸಂಗತಿಗಳಾಗಿವೆ.

ಬ್ರಿಟನಿನ ಅಹ್ಮದಿಯಾ ಶಾಖೆಗಳು ಈ ವಿಷಯದಲ್ಲಿ ಊರ್ಜಿತವಾದ ಪ್ರಚಾರ ಕಾರ್ಯಕ್ರಮವನ್ನು ಕೈಗೊಂಡಿವೆ. ಅದರ ಮೊದಲಿನ ಹೆಜ್ಜೆಯಾಗಿ 1978 ಜೂನ್ ಮೊದಲನೇ ವಾರದಲ್ಲಿ ಶಿಲುಬೆಯಿಂದ ಯೇಸುವಿನ ವಿಮೋಚನೆ (Deliverance of Jesus from the Cross) ಎಂಬ ಹೆಸರಿನಲ್ಲಿ ಒಂದು ಸಮ್ಮೇಳನವನ್ನು ಲಂಡನಿನಲ್ಲಿ ಏರ್ಪಡಿಸಲು ತೀರ್ಮಾನಿಸಲಾಗಿದೆ. ಈ ಹೊಸ ತತ್ವವನ್ನು ಮೊತ್ತಮೊದಲಿಗೆ ಘೋಷಿಸಿದ ವಾಗ್ದತ್ತ ಮಸೀಹಾ ಹಝ್ರತ್ ಅಹ್ಮದರ ನಂತರ ಈ ರಂಗದಲ್ಲಿ ನಡೆಸಲಾದ ಸಂಶೋಧನೆಗಳನ್ನೂ ಲಭಿಸಿದ ಪುರಾವೆಗಳನ್ನೂ ಶೇಖರಿಸಿ ಸಮ್ಮೇಳನದಲ್ಲಿ ಪ್ರದರ್ಶಿಸಲಾಗುವುದು.

ಈ ಸಮ್ಮೇಳನದಲ್ಲಿ ಇದರ ಸಂಬಂಧಿಸಿ ವಿಜ್ಞಾನಿಗಳಿಂದಲೂ ಇತಿಹಾಸಕಾರರಿಂದಲೂ ಪ್ರಬಂಧಗಳನ್ನು ಸಮರ್ಪಿಸಲಾಗುವುದು.

ವಿವಿಧ ಗ್ರಂಥಗಳನ್ನೂ ಪುರಾವೆಗಳನ್ನೂ ಪ್ರದರ್ಶಿಸಲಾಗುವುದು.

❀ ಸಂಘಟನೆಯ ಪುಸ್ತಕಗಳು— ಈ ವಿಷಯದಲ್ಲಿ "ಭಾರತದಲ್ಲಿ ಯೇಸು" (Jesus in India) ಮೊದಲ್ಗೊಂಡು ನಂತರ ಪ್ರಕಟವಾದ ಎಲ್ಲಾ ಪುಸ್ತಕಗಳನ್ನು ಪುನಃರ್ಮುದ್ರಿಸಿ ವಿತರಣೆ ಹಾಗೂ ವಿಕ್ರಯ ಮಾಡಲಾಗುವುದು.

❀ ಪೌರ್ವಾತ್ಯ ವಿದ್ವಾಂಸರನ್ನೂ ಕ್ರೈಸ್ತ ಮಿಷನರಿಗಳನ್ನೂ ಪ್ರಮುಖ ಪಂಡಿತರನ್ನೂ ಆಮಂತ್ರಿಸಿ ಚರ್ಚಾಗೋಷ್ಠಿಗಳನ್ನು ನಡೆಸಲಾಗುವುದು.

❀ ಸಮ್ಮೇಳನಕ್ಕೆ ಸಂಬಂಧಿಸಿದ ಪತ್ರಿಕಾ ವರದಿಗಳನ್ನೂ ವಿವರಣೆಗಳನ್ನೂ, ರೇಡಿಯೋ ಮತ್ತು ಟೆಲಿವಿಷನ್ ಚಿತ್ರಣಗಳನ್ನೂ ಸಂಗ್ರಹಿಸಿ ಲೋಕದಲ್ಲೆಲ್ಲೂ ವಿತರಣೆ ಮಾಡಲಾಗುವುದು.

❀ ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ (ಅಂತಾರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷರು) ಪ್ರಸ್ತುತ ವಿಷಯದಲ್ಲಿ ಬರೆದ ಹೊಸ ಒಂದು ಪುಸ್ತಕವನ್ನು ಸಹ ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಗುವುದು.

ಅಹ್ಮದಿಯಾ ಸಂಘಟನೆಯ ಗೌರವಾನ್ವಿತ ಇಮಾಂ ಹಝ್ರತ್ ಖಲೀಫತುಲ್ ಮಸೀಹ್ III ಈ ಸಮ್ಮೇಳನವನ್ನು ಉದ್ಘಾಟನೆಮಾಡಲು ಸಮ್ಮತಿಸಿರುವರೆಂಬುದು ಅತ್ಯಂತ ಹರ್ಷದಾಯಕವಾಗಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಯಾರೊಡನೆಯಾದರೂ ಅಪೂರ್ವ ದಾಖಲೆ, ಫೋಟೋ ಅಥವಾ ವಿಷಯಸಂಗ್ರಹವಿದ್ದರೆ, ಈ ಸಂದರ್ಭದಲ್ಲಿ ಪ್ರದರ್ಶಿಸಲಿಕ್ಕಾಗಿ ಕಳುಹಿಸಿಕೊಟ್ಟಲ್ಲಿ ಹಿಂತಿರುಗಿಸುವ ಭರವಸೆಯೊಂದಿಗೆ ಸ್ವೀಕರಿಸಲಾಗುವುದು. ಅವರು ಈ ಸಮ್ಮೇಳನದ ಕಾರ್ಯದರ್ಶಿಯೊಂದಿಗೆ ಸಂಪರ್ಕಿಸಬಹುದು.

(ವಿಳಾಸವನ್ನು ಇದೇ ಸಂಚಿಕೆಯ ಬೇರೆಡೆಯಲ್ಲಿ ಕೊಡಲಾಗಿದೆ —ಸಂ.)

---

(18ನೇ ಪುಟದಿಂದ)

debarred from sexual experience. Doubtless the pioneers of the women's movement had no such consequences in view, but their modern followers perceive them clearly, and who ever opposes these deductions must face the fact that he or she is not in favour of justice to the female sex. "ವಿವಾಹಕ್ಕೆ ಮೊದಲು ಇಷ್ಟಬಂದಂತೆ ಲೈಂಗಿಕ ಸಂಬಂಧವನ್ನು ನಡೆಸಲು ಪುರುಷರಿಗೆ ಸ್ವಾತಂತ್ರ್ಯವಿದ್ದರೆ (ನಿಜವಾಗಿಯೂ ಅವರಿಗೆ ಸ್ವಾತಂತ್ರ್ಯವಿದೆ) ಸ್ತ್ರೀಯರಿಗೂ ಆ ಹಕ್ಕು ಸಿಗಬೇಕು. ಸ್ತ್ರೀಯರು ಅಧಿಕವಿರುವ ರಾಜ್ಯಗಳಲ್ಲೆಲ್ಲಾ, ಸಂಖ್ಯೆಯಲ್ಲಿ ಹೆಚ್ಚಿರುವರೆಂಬ ಕಾರಣದಿಂದ ಅವಿವಾಹಿತರಾಗಿ ಕಳೆಯಬೇಕಾದ ಅಂಗನೆಯರು ಲೈಂಗಿಕ ಸುಖದಿಂದ ಸಂಪೂರ್ಣ ವಿವಂಚಿತರಾಗಿರುವುದು ಸ್ಪಷ್ಟವಾಗಿ ಗೋಚರಿಸುವ ಒಂದು ಅನೀತಿಯಾಗಿದೆ. ಸ್ತ್ರೀಯರ ಹಕ್ಕುಗಳಿಗಾಗಿ ಹೋರಾಡುವ ಸಂಘಟನೆಗಳ ಮೊದಲಿಗರಿಗೆ ಇದರ ಪರಿಣಾಮವನ್ನು ಮೊದಲೇ ಕಾಣಲು ಸಾಧ್ಯವಾಗಲಿಲ್ಲವೆಂಬುದು ಸರಿಯಾದರೂ, ಅವರ ಆಧುನಿಕ ಅನುಯಾಯಿಗಳು ಅದನ್ನು ವ್ಯಕ್ತವಾಗಿ ತಿಳಿದುಕೊಂಡಿರುವರು. ಈ ಅಧ್ಯಾಹಾರವನ್ನು ಎದುರಿಸುವವರು ಯಾರಾದರೂ, ಅವನಾಗಲಿ ಅವಳಾಗಲಿ ಸ್ತ್ರೀವರ್ಗದೊಡನೆ ನೀತಿತೋರಿಸುವುದನ್ನು ನ್ಯಾಯೀಕರಿಸುವ ವ್ಯಕ್ತಿಯಲ್ಲ, ಖಂಡಿತ. (Marriage & Morals—Russel, P. 60).

ಇಂತಹ ಸಂದರ್ಭಗಳಲ್ಲಿ ಒಬ್ಬ ಭೌತಿಕವಾದಿ ಸಮರ್ಪಿಸುವ ಪರಿಹಾರಮಾರ್ಗ ಇದಾಗಿದೆ! ಹೌದು ವ್ಯಭಿಚಾರ! ಆದರೆ ಮುಸ್ಲಿಮರಿಗೆ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲ. ಮುಸ್ಲಿಮರ ದೃಷ್ಟಿಯಲ್ಲಿ ಇದು ನಿಂದ್ಯವೂ ದೋಷಕರವೂ ಆಗಿದೆ.

(ಸಶೇಷ)

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ರಬ್‌ವಾದಲ್ಲಿ ಅಹ್ಮದಿಯಾ ವಾರ್ಷಿಕ ಸಮ್ಮೇಳನ

ಅಹ್ಮದಿಯಾ ಸಂಘಟನೆಯ 85ನೇ ವಾರ್ಷಿಕ ಸಮ್ಮೇಳನವು ಪಾಕಿಸ್ತಾನದ ರಬ್‌ವಾದಲ್ಲಿ 1977ನೇ ಇಸವಿ ಡಿಸೆಂಬರ್ 26, 27 ಮತ್ತು 28ನೇ ತಾರೀಕುಗಳಲ್ಲಿ ಜರಗಿತು. ಸುಮಾರು ಒಂದೂವರೆ ಲಕ್ಷ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. 35 ರಾಷ್ಟ್ರಗಳಿಂದ ಸಾವಿರಾರು ಪ್ರತಿನಿಧಿಗಳು ಸಮ್ಮೇಳನಕ್ಕೆ ಆಗಮಿಸಿದ್ದರು.

ಲಂಡನಿನ "ಡೈಲಿ ಟೆಲೆಗ್ರಾಫ್" ಪತ್ರಿಕೆಯ ಈರ್ವ ಪ್ರತಿನಿಧಿಗಳು ಮತ್ತು "ಸಂಡೇಸ ಟೆಲೆಗ್ರಾಫ್" ಪತ್ರಿಕೆಯ ಓರ್ವ ಛಾಯಾಚಿತ್ರಗ್ರಾಹಕ ಸಹ ಸಮ್ಮೇಳನಕ್ಕೆ ಬಂದಿದ್ದರು. ಅವರು ಭಾರತದಲ್ಲಿ ಖಾದಿಯಾನಕ್ಕೂ ಶ್ರೀನಗರಕ್ಕೂ ಭೇಟಿಯಿತ್ತರು. ಆ ಸಂದರ್ಭದಲ್ಲಿ ತೆಗೆದ ಫೋಟೋಗಳ ಸ್ಲೈಡ್‌ಗಳನ್ನು "ಸಂಡೇ ಟೆಲೆಗ್ರಾಫ್" ಪ್ರತಿನಿಧಿ ಇತ್ತೀಚೆಗೆ ಲಂಡನಿನ ಅಹ್ಮದಿಯಾ ಮಸೀದಿಯಲ್ಲಿ ಪ್ರದರ್ಶಿಸಿದರು.

## ಸ್ಪೈನಿನ ರಾಣಿಯೊಂದಿಗೆ ಸಂದರ್ಶನ

ಸ್ಪೈನಿನ ಅಹ್ಮದಿಯಾ ಮಿಶನರಿ ಮೌಲವಿ ಕರಮ್ ಇಲಾಹಿ ಝಫರ್ ಸಾಹೇಬರು ತನ್ನ ಪತ್ನಿ ರುಖಿಯಾ ಶಮೀಂ ಜೊತೆಯಲ್ಲಿ ಸ್ಪೈನಿನ ರಾಣಿಯಾದ ಡೊನಾ ಸೋಫಿಯಾ (Dona Sofia)ರೊಡನೆ ಝರ್‌ಝುವೆಲ ಅರಮನೆಯಲ್ಲಿ 45 ನಿಮಿಷಗಳ ವರೆಗೆ ಮಾತುಕತೆ ನಡೆಸಿದರು. ಅಹ್ಮದಿಯಾ ಸಂದೇಶವನ್ನೂ ತತ್ವಾದರ್ಶಗಳನ್ನೂ ರಾಣಿಗೆ ವಿವರಿಸಲಾಯಿತು. ಸಂದರ್ಶನದ ಕೊನೆಯಲ್ಲಿ ಪವಿತ್ರ ಖುರ್‌ಆನಿನ ಒಂದು ಪ್ರತಿಯನ್ನು ರಾಣಿಗೆ ಸಮರ್ಪಿಸಲಾಯಿತು.

## ನೈಜೀರಿಯಾದಲ್ಲಿ ಸಮ್ಮೇಳನ

ನೈಜೀರಿಯಾದ ಅಹ್ಮದಿಯಾ ಸಂಘಟನೆಯ 28ನೇ ವಾರ್ಷಿಕ ಸಮ್ಮೇಳನವು ಡಿಸೆಂಬರ್ 26ನೇ ತಾರೀಕಿನಂದು ಜರಗಿತು. ಮುಂದಿನ ವರ್ಷದಲ್ಲಿ 10 ಹೊಸ ಮಸೀದಿಗಳ ನಿರ್ಮಾಣಕ್ಕಾಗಿ ಸಮ್ಮೇಳನದಲ್ಲಿ ತೀರ್ಮಾನವನ್ನು ಕೈಗೊಳ್ಳಲಾಯಿತು.

## ಘಾನಾದಲ್ಲಿ ಸಮ್ಮೇಳನ

ಘಾನಾದ ಅಹ್ಮದಿಯಾ ಸಂಘಟನೆಯ 52ನೇ ವಾರ್ಷಿಕ ಸಮ್ಮೇಳನವು ಇತ್ತೀಚೆಗೆ ನಡೆಯಿತು. ಸಮ್ಮೇಳನದಲ್ಲಿ 15000ಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿದ್ದರು. ಅಮೇರಿಕಾದಿಂದಲೂ ನೈಜೀರಿಯಾದಿಂದಲೂ ಪ್ರತಿನಿಧಿಗಳು ಆಗಮಿಸಿದ್ದರು. ಘಾನಾದ ಅಧ್ಯಕ್ಷ ಮತ್ತು ಕಮಿಷನರ್ ತಮ್ಮ ಭಾಷಣದಲ್ಲಿ ಅಹ್ಮದಿಯಾ ಸಂಘಟನೆಯ ಧಾರ್ಮಿಕತೆ ಮತ್ತು ನೈತಿಕತೆಯ ಕುರಿತು ಹೇಳುತ್ತಾ ಅಹ್ಮದಿಯರ ಸಾಮಾಜಿಕ ಸೇವೆಗಳನ್ನು ಕೊಂಡಾಡಿದರು.

ಸಮ್ಮೇಳನದಲ್ಲಿ 50 ಸಾವಿರ ಪೌಂಡ್ ನಿಧಿಯು ಸಂಗ್ರಹವಾಯಿತು. ಇದು ಕಳೆದ ಬಾರಿಯ ಇಮ್ಮಡಿಯಾಗಿದೆ.

## ವರ್ಕಲ ಸರ್ವಧರ್ಮ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿಗಳು

ಕೇರಳದ ರಾಜಧಾನಿಯಾದ ತಿರುವನಂತಪುರದಿಂದ ಸಾಧಾರಣ 30 ಕಿ. ಮಿ. ದೂರದ ವರ್ಕಲ ಶಿವಗಿರಿಯಲ್ಲಿ ಸೇರಿದ ಶ್ರೀ ನಾರಾಯಣ ಗುರು ಸ್ವಾಮಿಯವರ ಶತಮಾನೋತ್ಸವದಲ್ಲಿ ಕೇರಳ ಅಹ್ಮದಿಯಾ ಸಂಘದ ವತಿಯಿಂದ ಒಂದು ಇಸ್ಲಾಂ ಧರ್ಮ ಪ್ರಬೋಧನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಶಿವಗಿರಿ ಮಠದ ನೇತೃತ್ವದಲ್ಲಿ ಡಿಸೆಂಬರ್ 29 ಮತ್ತು 30ನೇ ದಿನಾಂಕಗಳಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನ (Parliament of Religions) ದಲ್ಲಿ ಇಸ್ಲಾಂ ಧರ್ಮವನ್ನು ಪ್ರತಿನಿಧೀಕರಿಸಿ ಅಹ್ಮದಿಯಾ ಸಂಘಟನೆಯ ಜನಾಬ್ ಕರೀಮುಲ್ಲಾ ನೌಜವಾನ್ ಸಾಹೇಬರು ಭಾಷಣ ಮಾಡಿದರು. ವಿವಿಧ ಮತಸ್ಥರು ಮಾತನಾಡಿದ ಪ್ರಸ್ತುತ ಸಮ್ಮೇಳನದಲ್ಲಿ ಗುರು ಶ್ರೀ ಸ್ವಾಮಿ ನಿತ್ಯ

ಚೈತನ್ಯ ಯತಿಯವರು ಅಧ್ಯಕ್ಷರಾಗಿದ್ದರು. ಶ್ರೀ ನಾರಾಯಣ ಗುರು ಸ್ವಾಮಿಯವರು ಕಲಿಸಿದ "ಒಂದೇ ಜಾತಿ, ಒಂದೇ ಮತ, ಒಂದೇ ದೇವರು" ಎಂಬ ಪಾವನ ವಾದ ತತ್ವವನ್ನು ಎಲ್ಲರೂ ಕಾರ್ಯರೂಪದಲ್ಲಿ ತರಲು ಶ್ರಮಿಸಬೇಕೆಂದು ಭಾಷಣಕಾರರೆಲ್ಲರೂ ಪ್ರಸ್ತಾವಿಸಿದರು.

ಇಸ್ಲಾಂ ಸರ್ವ ಮಾನವ ಕುಲಕ್ಕಾಗಿ ಆವಿರ್ಭವಿಸಿದ ಸಾರ್ವ ಲೌಕಿಕವೂ ಸರ್ವಕಾಲೀನವೂ ಆದ ಧರ್ಮವೆಂದೂ ಸಮಸ್ತ ಪ್ರಪಂಚವನ್ನು ಸೃಷ್ಟಿಸಿ ಪಾಲಿಸುತ್ತಿರುವ ಪರ ಮಾತ್ಮನು ಏಕನೆಂಬ ತತ್ವವನ್ನು ಪ್ರಬೋಧಿಸುವುದರಲ್ಲಿ ಇಸ್ಲಾಂ ಧರ್ಮದ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರು ವಿಜಯಿಯಾಗಿದ್ದಾರೆಂದೂ ನೌಜವಾನ್ ಸಾಹೇಬರು ವಿವರಿಸಿದರು. ಮಾನವರೆಲ್ಲರೂ ಒಂದೇ ಕುಲ ವೆಂದೂ ಸಮಸ್ತ ಬ್ರಹ್ಮಾಂಡಕ್ಕೂ ಒಬ್ಬನೇ ದೇವರೆಂದೂ ಎಲ್ಲರೂ ಬಾಯಿಯಲ್ಲಿ ಹೇಳುವರಾದರೂ ಈ ತತ್ವವನ್ನು ವಿಶ್ವಾಸದ ಭಾಗವಾಗಿ ಅಂಗೀಕರಿಸುತ್ತಾ ಆ ರೀತಿ ಕರ್ಮ ಕಾರ್ಯವನ್ನೆಸಗುವವರು ಬಹಳ ವಿರಳವೆಂದೂ, ನಿಜ ವಾಗಿಯೂ ನಾವು ಏಕ ದೇವರಲ್ಲಿ ವಿಶ್ವಾಸವಿಡುವವರೋ ಅಥವಾ ಬಹುದೈವ ವಿಶ್ವಾಸಿಗಳೋ ಎಂಬುದನ್ನು ಪ್ರತಿ ಯೊಬ್ಬರು ಪರಿಶೋಧಿಸಿಕೊಳ್ಳಬೇಕೆಂದೂ ಜನಾಬ್ ನೌಜವಾನ್ ಸಾಹೇಬರು ಹೇಳಿದರು. ಅವರು ಇಸ್ಲಾಂ ಧರ್ಮದ ತತ್ವೋಪದೇಶಗಳನ್ನು ನೆರೆದ ಸಭಿಕರ ಮುಂದೆ ಸಂಕ್ಷಿಪ್ತವಾಗಿ ವಿವರಿಸಿದರು. ಭಾಷಣದ ಬಳಿಕ ಸ್ವಾಮಿ ನಿತ್ಯಚೈತನ್ಯಯತಿಯವರಿಗೂ ಸಮ್ಮೇಳನದಲ್ಲಿ ಭಾಗವಹಿ ಸಿದ ಇತರ ಧರ್ಮ ಪ್ರತಿನಿಧಿಗಳಿಗೂ ಪವಿತ್ರ ಖುರ್‌ಆನಿನ ಇಂಗ್ಲೀಷ್ ಭಾಷಾಂತರವನ್ನೂ ಇತರ ಇಸ್ಲಾಮಿಕ ಸಾಹಿತ್ಯ ಗಳನ್ನೂ ನೀಡಿ ಸಮ್ಮಾನಿಸಲಾಯಿತು. ಜನಾಬ್ ನೌಜ ವಾನ್ ಸಾಹೇಬರ ಭಾಷಣದಿಂದ ಬಹಳಷ್ಟು ಪ್ರಭಾವಿತ ರಾದ ಸಭಾಧ್ಯಕ್ಷರು ಇಸ್ಲಾಂ ಧರ್ಮದ ಕುರಿತು ಅವರು ಮಾಡಿದ ಭಾಷಣವನ್ನು ಪ್ರಶಂಸಿಸಿದರು. ನೌಜವಾನ್ ಸಾಹೇಬರು ಇಂಗ್ಲೀಷಿನಲ್ಲಿ ಮಾಡಿದ ಭಾಷಣದ ಸಂಕ್ಷಿಪ್ತ ಭಾಷಾಂತರವನ್ನು ಸಭೆಯ ಮುಂದಿಡುತ್ತಾ ಅವರ ಭಾಷಣದಲ್ಲಡಕವಾದ ವಿಷಯಗಳತ್ತ ಪ್ರತಿಯೊಬ್ಬರೂ ಗಮನ ಹರಿಸಬೇಕಾದುದು ಅಗತ್ಯವೆಂದು ಸಭಾಧ್ಯಕ್ಷರು ಅಭಿಪ್ರಾಯಪಟ್ಟರು. ಇಸ್ಲಾಂ ಧರ್ಮದ ಹೊರತಾಗಿ ಕ್ರೈಸ್ತ ಧರ್ಮ, ಹಿಂದೂ ಧರ್ಮ, ಸಿಖ್ ಧರ್ಮ, ಬೌದ್ಧ ಧರ್ಮ ಮೊದಲಾದ ಧರ್ಮಗಳ ಕುರಿತು ಭಾಷಣ ಗಳು ನಡೆದವು. ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿ ಗಳೆಲ್ಲರಿಗೂ ಬೇಕಾದ ಎಲ್ಲಾ ಸೌಕರ್ಯ ಏರ್ಪಾಡಾದಿ ಗಳನ್ನು ಸಂಘಟಕರೇ ಮಾಡಿದ್ದರು. ಸರ್ವರೊಂದಿಗೂ ಸೌಹಾರ್ದದಿಂದ ವರ್ತಿಸಿ ಮತ ಸಹಿಷ್ಣುತೆಯನ್ನು ಪ್ರಕಟಿ ಸಿದ ಸಮ್ಮೇಳನದ ಸಂಘಟಕರು ನಿಜವಾಗಿಯೂ ಪ್ರಶಂಸ ನೆಗೆ ಅರ್ಹರು.

ಶತಮಾನೋತ್ಸವವು ವಿವಿಧ ಕಾರ್ಯಕ್ರಮಗಳೊಂ ದಿಗೆ 6 ದಿನಗಳ ವರೆಗೆ ಜರಗಿತು. ಇದರ ಅಂಗವಾಗಿ ಏರ್ಪಡಿಸಲಾಗಿದ್ದ ವಸ್ತುಪ್ರದರ್ಶನ (Exhibition) ನಲ್ಲಿ ಒಂದು ಅಹ್ಮದಿಯಾ ಬುಕ್ ಸ್ಟಾಲನ್ನೂ ಏರ್ಪಡಿಸ ಲಾಗಿತ್ತು. ಇಸ್ಲಾಂ ಹಾಗೂ ಅಹ್ಮದಿಯಾ ಸಂಘಟನೆಯ ಕುರಿತು ತಿಳಿಯಲಿಚ್ಛಿಸುವ ಅನೇಕ ಸತ್ಯಾನ್ವೇಷಿಗಳು ಅಹ್ಮದಿಯಾ ಪುಸ್ತಕಾಲಯದಿಂದ ಬಹಳಷ್ಟು ಪುಸ್ತಕ ಗಳನ್ನು ಖರೀದಿಸಿದರು.

## ಪೈಗಂಬರರ ದಿನಾಚರಣೆ

### ಕಣ್ಣಾನ್ನೂರಿನಲ್ಲಿ

ಕಣ್ಣಾನ್ನೂರಿನ ಅಹ್ಮದಿಯಾ ಜಮಾಅತಿನ ಆಶ್ರಯದಲ್ಲಿ ಸಿಟಿ ಹೈಸ್ಕೂಲಿನಲ್ಲಿ ಜರಗಿದ ಪೈಗಂಬರರ ದಿನಾಚರಣೆ ಯಲ್ಲಿ ಕೇರಳ ಅಹ್ಮದಿಯಾ ಕೇಂದ್ರ ಸಮಿತಿ ಉಪಾಧ್ಯಕ್ಷ ಎಂ. ಮುಹಮ್ಮದ್ ಎಂ.ಎ. (ಲೆಕ್ಚರರ್, ಎಸ್. ಎನ್. ಕಾಲೇಜ್, ಕಣ್ಣಾನ್ನೂರು) ಅಧ್ಯಕ್ಷತೆ ವಹಿಸಿದ್ದರು. ಡಾ। ಪಿ. ವಿ. ಬಾಲಕೃಷ್ಣನ್ ಎಂ.ಎ.,ಬಿ.ಎಲ್. ಪಿಎಚ್‌ಡಿ. (ಲೆಕ್ಚರರ್, ಟ್ರೈನಿಂಗ್ ಕಾಲೇಜ್, ತಲಚೇರಿ), ಬಿ. ಮಹಮೂದ್ ಅಹ್ಮದ್ ಎಂ.ಎ. (ಲೆಕ್ಚರರ್, ಪಯ್ಯ ನ್ನೂರ್ ಕಾಲೇಜ್) ಮತ್ತು ಕೇರಳ ಅಹ್ಮದಿಯಾ ಮಿಷನರಿ ಮೌಲಾನಾ ಮುಹಮ್ಮದ್ ಅಬುಲ್‌ವಫಾ ಸಾಹೇಬರು ಭಾಷಣಮಾಡಿದರು.

### ಕರುನಾಗಪಳ್ಳಿಯಲ್ಲಿ

ಕರುನಾಗಪಳ್ಳಿ ಅಹ್ಮದಿಯಾ ಜಮಾಅತಿನ ಆಶ್ರಯ ದಲ್ಲಿ ಖುದ್ದಾಮುಲ್ ಅಹ್ಮದಿಯಾ ನೇತೃತ್ವದಲ್ಲಿ ಇಲ್ಲಿಯ ಟ್ರಾನ್ಸ್‌ಪೋರ್ಟ್ ಮೈದಾನದಲ್ಲಿ ಫೆಬ್ರವರಿ 19ನೇ ತಾರೀಕಿ ನಂದು 'ಪೈಗಂಬರರ ದಿನಾಚರಣೆ' ಸಮ್ಮೇಳನವನ್ನು ಫಾತಿಮಾ ಕಾಲೇಜಿನ ಪ್ರೊಫೆಸರ್ ಬಲರಾಂ ಮೂಸ್ಸತ್ ಉದ್ಘಾಟನೆಮಾಡಿದರು. ತಮಿಳ್ನಾಡಿನ ಅಹ್ಮದಿಯಾ ಮಿಷನರಿ ಮೌಲವಿ ಮುಹಮ್ಮದ್ ಉಮರ್ ಸಾಹೇಬ್

ಎಚ್.ಎ. ಅಧ್ಯಕ್ಷತೆ ವಹಿಸಿದರು. ಎಂ. ಷಹೀದ್ ಅಹ್ಮದ್, ಅಡ್ವಕೇಟ್ ವಿ. ಅಹ್ಮದ್ ಕುಟ್ಟಿ ಎಂಬವರು ಭಾಷಣಮಾಡಿದರು. ಇಸ್ಲಾಂ ಧರ್ಮ ಖಡ್ಗದಿಂದ ಪ್ರಚಾರಗೊಂಡದ್ದೆಂಬ ಅಪಾದನೆಗೆ ಅವರು ಉತ್ತರಿಸಿದರು. ಪೈಗಂಬರರಿಗೆ ಸಂಬಂಧಿಸಿದ ಇಂತಹ ತಪ್ಪು ಕಲ್ಪನೆಗಳನ್ನು ನೀಗಿಸಲು ಅಹ್ಮದಿಯಾ ಜಮಾಅತಿನ ಈ ರೀತಿಯ ಸಭೆಗಳು ಸಹಾಯಕವಾಗಿವೆಯೆಂದು ಪ್ರೊಫೆಸರ್ ಮೂಸ್ಸತ್ ಹೇಳಿದರು. ಮೌಲವಿ ಉಮರ್ ಸಾಹೇಬರು ತನ್ನ ಭಾಷಣದಲ್ಲಿ ಇಸ್ಲಾಂ ಧರ್ಮ ಮತ್ತು ಪೈಗಂಬರರ ನೈಜ ಸ್ವರೂಪವನ್ನು ವಿವರಿಸಿದರು. ವಿವಿಧ ಧರ್ಮಸ್ಥರಾದ ಧಾರಾಳ ಜನರು ಸಭೆಯಲ್ಲಿ ಭಾಗವಹಿಸಿದರು.

## ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನ

22ನೇ ಅಖಿಲ ಕೇರಳ ಅಹ್ಮದಿಯಾ ಸಮ್ಮೇಳನವು ಎಪ್ರಿಲ್ ಕೊನೆಯ ವಾರದಲ್ಲಿ ಕಾಸರಗೋಡಿನಲ್ಲಿ ನಡೆಯಲಿದೆ.

ಅಹ್ಮದಿಯಾ ಮುಖ್ಯ ಪ್ರಚರಣಾ ಕಾರ್ಯದರ್ಶಿ ಮೌಲಾನ ಶರೀಫ್ ಅಹ್ಮದ್ ಸಾಹೇಬ್ ಅಮೀನಿ' ಹಾಫಿಝ್ ಸಾಲಿಹ್ ಮುಹಮ್ಮದ್ ಅಲ್ಲಾದಿನ್ (ಹೈದರಬಾದ್), ಜನಾಬ್ ಫಝುಲ್ ಅಹ್ಮದ್ (ಪಾಟ್ನಾ) ಎಂಬಿವರು ಸಮ್ಮೇಳನದಲ್ಲಿ ಭಾಗವಹಿಸುವರು.

**ನಿಧನ ವಾರ್ತೆಗಳು:**

## ಜನಾಬ್ ಕುರೈಷಿ ಅತಾವುರ್ರಹ್‌ಮಾನ್ ಸಾಹೇಬ್

ಜನಾಬ್ ಕುರೈಷಿ ಅತಾವುರ್ರಹ್‌ಮಾನ್ ಸಾಹೇಬ್ (ನಾಝಿರ್ ಬೈತುಲ್ ಮಾಲ್—ಖರ್ಚ್)ರವರು ಕಳೆದ ಜನವರಿ 30ನೇ ತಾರೀಕಿನಂದು ಅಮೃತ್‌ಸರದ ಬಹಾದುರ್ ಆಸ್ಪತ್ರೆಯಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ಮೃತರಿಗೆ 66 ವರ್ಷ ಪ್ರಾಯವಾಗಿತ್ತು.

ಜನಾಬ್ ಅತಾವುರ್ರಹ್‌ಮಾನ್ ಸಾಹೇಬರು ಸುಸ್ವಾಭಾವಿಯೂ ಸರಳ ಜೀವಿಯೂ ಸಂಘಟನೆಯ ಉನ್ನತ ಸೇವಕರೂ ಆಗಿದ್ದರು. ಅವರು ಅಹ್ಮದಿಯಾ ಜಮಾಅತಿನ ಸ್ಥಾಪಕರ ಶಿಷ್ಯರಾದ ಹಝ್‌ರತ್ ಹಾಫಿಝ್ ಮುಹಮ್ಮದ್ ಯಾಮೀನ್‌ರವರ ಹಿರಿಯ ಪುತ್ರರಾಗಿದ್ದರು. ಅವರು ತನ್ನ ಯೌವನ ಕಾಲದಿಂದಲೇ ಖಾದಿಯಾನದ ಅಹ್ಮದಿಯಾ ಕೇಂದ್ರದಲ್ಲಿ ಸೇವೆಗೆ ಸೇರಿದ್ದರು. ಅವರು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಕಾರ್ಯತತ್ಪರರೂ ನಿಷ್ಠಾವಂತರೂ ಆಗಿದ್ದರು.

## ಮೌಲವಿ ಇನಾಯತುಲ್ಲಾ ಖಾನ್ ಸಾಹೇಬ್

ಪೂರ್ವ ಆಫ್ರಿಕದ ಮಾಜಿ ಅಹ್ಮದಿಯಾ ಮಿಷನರಿ ಮೌಲವಿ ಇನಾಯತುಲ್ಲಾ ಸಾಹೇಬರು ಡಿಸೆಂಬ 24ರಂದು ಲಂಡನಿನಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿವೂನ್). ಅವರು 1947ನೇ ಇಸವಿಯಿಂದ ದೀರ್ಘಕಾಲದ ವರೆಗೆ ಪೂರ್ವ ಆಫ್ರಿಕದಲ್ಲಿ ಅಹ್ಮದಿಯಾ ಪ್ರಚಾರಕರಾಗಿದ್ದರು. ನಿವೃತ್ತಿಹೊಂದಿದ ನಂತರವೂ ಅವರು ಅಹ್ಮದಿಯಾ ಸಂಘಟನೆಗಾಗಿ ತನ್ನ ಕೊನೆಯ ದಿನಗಳ ತನಕ ಸೇವೆ ಸಲ್ಲಿಸುತ್ತಾ ಬಂದಿದ್ದರು.

ನಿಧನ ಹೊಂದಿದ ಇಬ್ಬರು ಮಹನೀಯರ ಆತ್ಮಗಳಿಗೂ ಅಲ್ಲಾಹು ಚಿರಶಾಂತಿಯನ್ನೂ ಮೃತರ ಬಂಧು ಮಿತ್ರಾದಿಗಳಿಗೆ ಸಹನೆಯನ್ನೂ ಕರುಣಿಸಲಿಯೆಂದು ಪ್ರಾರ್ಥಿಸುತ್ತೇವೆ.

# ಸಂಪಾದಕರಿಗೆ ಪತ್ರ

. . . . . . . . ಯುಗರಶ್ಮಿಯಲ್ಲಿನ ತಮ್ಮ ಬರೆಹ "ಈದ್ ಆಚರಣೆ" ನನ್ನನ್ನು ಓದಿಸಿತು. ಹಾಗೆಯೇ ಬುದ್ಧ, ಪೈಗಂಬರ, ಯೇಸು ಮಹಾತ್ಮರ ಲೇಖನಗಳೂ ಯುಗರಶ್ಮಿಯಲ್ಲಿವೆ. ಹೀಗೆ ಧರ್ಮ ಯಾವುದೇ ಇರಲಿ, ಅದರಲ್ಲಿನ ತತ್ತ್ವ, ಆದರ್ಶಾದಿ ಮೂಲೋದ್ದೇಶಗಳನ್ನು ಅರ್ಥಮಾಡಿಕೊಂಡಾಗ ನಮ್ಮಲ್ಲಿರಬಹುದಾದ ಸಂಕುಚಿತ ದೃಷ್ಟಿ ದೂರವಾಗುತ್ತದೆ. ನಮ್ಮ ನಂಬಿಕೆಗಳಿಗೆ ಹೆಚ್ಚು ಅರ್ಥ ಬರುತ್ತದೆ.

**ವಾಮನ ನಂದಾವರ.**

ಕೋಟೆಕಾರು.

ಕಾರ್ಯದರ್ಶಿ, ಸಾಹಿತ್ಯ ಸಂಘ.

**

. . . . . . . . . . ತಮ್ಮ ಪತ್ರಿಕೆ ಧರ್ಮಗಳ ತುಲನಾತ್ಮಕ ಅಧ್ಯಯನಕ್ಕೆ ತುಂಬಾ ಅನುಕೂಲವಾಗಿದೆ. ಯೇಸುಕ್ರಿಸ್ತರು ಮೃತರಾದುದು ಎಲ್ಲಿ ? ಎಂಬ ಪುಸ್ತಕ ವಿಭಾಗ ವಿಶೇಷ ಅಧ್ಯಯನಕ್ಕೆ ತೀರ ಅಗತ್ಯವಿದೆ.

**ಜಿ. ಯಂ. ವೇದೇಶ್ವರ**

ಗೋಕರ್ಣ.

Honorary Director & General Secretary,
Study Circle.

**

ನಿಮ್ಮ ಯುಗರಶ್ಮಿ ತ್ರೈಮಾಸಿಕವನ್ನು ಓದಿ ಸಂತೋಷವಾಯಿತು. ನನಗೆ ಮೊದಲಿನಿಂದಲೂ ಇಸ್ಲಾಂ ಧರ್ಮದ ಬಗ್ಗೆ ತಿಳಿಯುವ ಕುತೂಹಲವಿತ್ತು. ಆದರೆ ಉರ್ದುವಿನಲ್ಲಿ ಮಾತ್ರ ಓದಬೇಕೇನೋ ಎಂದುಕೊಂಡಿದ್ದೆ. ನೀವು ನಿಮ್ಮ ಪವಿತ್ರ ಕುರ್‌ಆನಿನ ಭಾಗಗಳನ್ನು ಸರಳವಾದ ಕನ್ನಡದಲ್ಲಿ ತಿಳಿಸುತ್ತಿರುವುದು ಸಂತೋಷ. ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ ಪ್ರಕಟಿಸುತ್ತಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ಇನ್ನೊಬ್ಬರ ಆಸ್ತಿಯನ್ನು ಅನ್ಯಾಯದಿಂದ ಸಂಪಾದಿಸಲು ಅಧಿಕಾರಿಗಳಿಗೆ ಚಿಕ್ಕಾಸು ಲಂಚ ಕೊಡಬಾರದು ಎನ್ನುವುದು ಲಂಚಗುಳಿತನದಿಂದ ತುಂಬಿರುವ ಭಾರತಕ್ಕೆ ಅತ್ಯವಶ್ಯಕವಾದ ತತ್ವ . . . . . . .

ಮುಸ್ಲಿಮರಲ್ಲಿ ಅನೇಕ ಅಂಧಶ್ರದ್ಧೆಗಳಿವೆ. ಅದಕ್ಕೆ ಧರ್ಮದ ಆಧಾರವಿದೆಯೋ ಇಲ್ಲವೋ ತಿಳಿಸಿ . . . . .

**ಪಿ. ದೇವರಾಜು,**

ಮೈಸೂರು.

ಮೈಸೂರು ಜಿಲ್ಲಾ ಡಿ. ಕೆ. ಪ್ರಚಾರಕ.


READ

## MINARET

ENGLISH QUARTERLY JOURNAL

Single Copy: Re. 1/- Annual Subscription: Rs. 4/-

Apply to: The Manager, Minaret Quarterly
Ahmadiyya Building, West Silk Street, CALICUT-673001.

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರಕಾರ: ಅಬೂ ತಾಹಿರ್.

## ಅಧ್ಯಾಯ - 13

## ಯೂಸ್ ಆಸಫ್ ಮತ್ತು ಯೇಸುಕ್ರಿಸ್ತ

ಯೇಸು ಕ್ರಿಸ್ತರು ಭಾರತಕ್ಕೆ ಪ್ರಯಾಣಿಸಿದುದರ ಕುರಿತು ಕೊನೆಯ ಹಾಗೂ ಅತಿ ಪ್ರಾಮುಖ್ಯವಾದ ಪುರಾವೆಯ ಕುರಿತು ನಾನಿಲ್ಲಿ ವಿವರಿಸುವೆನು. ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣ ಹೊಂದಿರಲಿಲ್ಲವೆಂದೂ ಶವ ಕುಟೀರದೊಳಗಿಂದ ಸ್ಥೂಲ ಶರೀರದೊಂದಿಗೆಯೇ ಹೊರಬಂದು ಅವರು ತನ್ನ ಶಿಷ್ಯರನ್ನು ಪಾಲೆಸ್ತೀನದಲ್ಲಿಯೇ ರಹಸ್ಯವಾಗಿ ಭೇಟಿಯಾದರೆಂದೂ ಅನಂತರ ಇಸ್ರಾಯಿಲ್ ಮನೆತನದ ಕಾಣದೆ ಹೋದ ಹತ್ತು ಗೋತ್ರಗಳಿಗೆ ಉಪದೇಶಿಸಲಿಕ್ಕಾಗಿ ನಸಿಬಿನ್ ಎಂಬಲ್ಲಿಗೆ ಹೋಗಿ ಅಲ್ಲಿಂದ ಪರ್ಶಿಯಾ ದೇಶಕ್ಕೂ ಅನಂತರ ಅಫ್‌ಘಾನಿಸ್ಥಾನಕ್ಕೂ ಪ್ರಯಾಣಿಸಿ ಕೊನೆಗೆ ಪಂಜಾಬಿನ ಮೂಲಕ ಕಾಶ್ಮೀರಕ್ಕೆ ತಲುಪಿದ ಸಂಗತಿಗಳನ್ನು ನಾನು ಈ ಮೊದಲೇ ಪ್ರಸ್ತಾಪಿಸಿರುವೆನು.

ವಾಗ್ದತ್ತ ಮಸೀಹರಾದ (Promised Messiah) ಹಝ್ರತ್ ಅಹ್ಮದರಿಗೆ "ಮರಿಯಮರ ಪುತ್ರರಾದ ಯೇಸುಕ್ರಿಸ್ತರು ಮೃತಿಹೊಂದಿರುವರು" ಎಂಬ ವಾಣಿ ದೇವರಿಂದ ಅವತೀರ್ಣವಾಗಿದ್ದಿತು. ಆ ಬಳಿಕ ಹಝ್ರತ್ ಅಹ್ಮದರಿಗೆ ಕಾಶ್ಮೀರದ ನಿವಾಸಿಗಳು ಶ್ರೀನಗರದ ಖಾನ್‌ಯಾರ್ ಬೀದಿಯಲ್ಲಿರುವ ಪ್ರಸಿದ್ಧವಾದ "ನಬಿಯ ಸಮಾಧಿ"ಯ ಕುರಿತು ವಿವರಗಳನ್ನಿತ್ತರು. ನಬಿ (ಪ್ರವಾದಿ) ಎಂಬ ಶಬ್ದ ಅರಬಿ ಮತ್ತು ಹೀಬ್ರೂ ಭಾಷೆಗಳಲ್ಲಿ ಮಾತ್ರ ಉಪಯೋಗಿಸಲ್ಪಡುತ್ತದೆ. ಈ ಕಾರಣದಿಂದ ಹಝ್ರತ್ ಅಹ್ಮದರ ಕುತೂಹಲ ವರ್ಧಿಸಿತು. ಇಸ್ಲಾಮ್ ಧರ್ಮದ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರರ ನಂತರ ಮುಸ್ಲಿಮರಲ್ಲಿ ಯಾರೂ ನಬಿಯಾಗಿ ಬಂದಿರದ ಕಾರಣದಿಂದಲೂ ಪೈಗಂಬರಶ್ರೇಷ್ಠರ ಸಮಾಧಿ ಮದೀನದಲ್ಲಿ ಇರುವುದರಿಂದಲೂ ಮೇಲೆ ವಿವರಿಸಿದ "ನಬಿಯ ಸಮಾಧಿ" ಒಬ್ಬ ಸಾಮ್ ವಂಶಜನಾದ (Semitic) ಹೀಬ್ರೂ ಪ್ರವಾದಿಯದಾಗಿರಲು ಸಾಧ್ಯವೆಂದು ಅವರು ನಿರ್ಣಯಿಸಿದರು. ಅನಂತರ ಕೈಗೊಂಡ ಅನ್ವೇಷಣೆಗಳು ಅವರ ತೀರ್ಮಾನವನ್ನು ದೃಢೀಕರಿಸಿದವು. ಮೇಲೆ ವಿವರಿಸಿದ ಸಮಾಧಿಯಲ್ಲಿ ದಫನು ಮಾಡಲ್ಪಟ್ಟ ಪ್ರವಾದಿಯ ಹೆಸರು ಯೂಸ್ ಆಸಫ್ ಎಂದೂ ಅವರು ಸಾಧಾರಣ 1900 ವರ್ಷಗಳ ಮೊದಲು ಕಾಶ್ಮೀರಕ್ಕೆ ಬಂದಿದ್ದರೆಂದೂ ತಿಳಿಯಿತು. ಈ ಕಾರಣದಿಂದಲೂ ಇನ್ನಿತರ ಕೆಲವು ಕಾರಣಗಳಿಂದಲೂ ಶ್ರೀನಗರದಲ್ಲಿ ದಫನುಗೊಳಿಸಲ್ಪಟ್ಟ ನಬಿ (ಪ್ರವಾದಿ), ನಜರೇತ್‌ನ ಯೇಸುಕ್ರಿಸ್ತರಲ್ಲದೆ ಬೇರಾರೂ ಅಲ್ಲವೆಂದೂ ಅವರು ಭಾರತದ ಉತ್ತರ ವಲಯಗಳಲ್ಲಿ ಆ ಕಾಲದಲ್ಲಿ ವಾಸಿಸುತ್ತಿದ್ದ ಯಹೂದಿ ಗೋತ್ರಗಳನ್ನು ಹುಡುಕುತ್ತಾ ಭಾರತಕ್ಕೆ ಬಂದಿದ್ದರೆಂದೂ ಪುರಾವೆ ಸಹಿತವಾಗಿ ನಂಬಲು ಅವರಿಗೆ ಸಾಧ್ಯವಾಯಿತು.

ಈ ವಿಷಯದಲ್ಲಿ ಇದಕ್ಕೆ ಅನುಕೂಲವಾದ ಕೆಲವು ಪುರಾವೆಗಳನ್ನು ಈ ಕೆಳಗೆ ನಿವೇದಿಸುತ್ತೇನೆ:—

1. ಶ್ರೀನಗರದ ಹಲವಾರು ಪ್ರತಿಷ್ಠಿತ ವ್ಯಕ್ತಿಗಳು ವಾಗ್ಮೂಲಗಳ ಮೂಲಕವಾಗಿಯೂ ಲಿಖಿತ ಪ್ರಮಾಣಗಳ ಮೂಲಕವಾಗಿಯೂ ಶ್ರೀನಗರದಲ್ಲಿರುವ ಸಮಾಧಿ ಸುಮಾರು 1900 ವರ್ಷಗಳ ಮೊದಲು ಕಾಶ್ಮೀರಕ್ಕೆ ಬಂದಿದ್ದ ಒಬ್ಬ ಪ್ರವಾದಿಯದೆಂದೂ ಆ ಪ್ರವಾದಿ "ರಾಜಕುಮಾರ" ಎಂದು ಸಹ ಕರೆಯಲ್ಪಡುತ್ತಿದ್ದರೆಂದೂ ಹೇಳಿರುವರು. ಕ್ರಿ. ಶ. 1902ರಲ್ಲಿ ಹಝ್ರತ್ ಅಹ್ಮದರು ಖಾದಿಯಾನದಲ್ಲಿ ಪ್ರಕಟಿಸಿದ "ಅಲ್‌ಹುದಾ" ಎಂಬ ಅರಬಿ ಭಾಷೆಯ ಗ್ರಂಥದ ಕೊನೆಯ ಅಧ್ಯಾಯದಲ್ಲಿ ಇಂತಹ ಸಾಕ್ಷಿಗಳ ಒಂದು ದೀರ್ಘವಾದ ಪಟ್ಟಿಯನ್ನು ಕಾಣಬಹುದಾಗಿದೆ.

2, ಚರಿತ್ರೆಯ ಗ್ರಂಥಗಳು ಸಹ ಈ ಸಮಾಧಿಯನ್ನು "ಪ್ರವಾದಿ ಯೂಸ್ ಆಸಫರ ಸಮಾಧಿ" ಎಂದು ಕರೆದಿವೆ. "ತಾರೀಖೆ ಆಝುಮಿ" ಎಂಬ ಸುಮಾರು ಇನ್ನೂರು ವರ್ಷಗಳಿಗಿಂತಲೂ ಹಳೆಯದಾದ ಕಾಶ್ಮೀರಿನ ಚರಿತ್ರೆಯಲ್ಲಿ ಅದರ ಲೇಖಕರು ಈ ಸಮಾಧಿಯ ಕುರಿತು 82ನೇ ಪುಟದಲ್ಲಿ ಈ ರೀತಿ ಬರೆದಿರುವರು:

"ಸಯ್ಯಿದ್ ನಸ್ರುದ್ದೀನ್‌ರವರ ಸಮಾಧಿಯ ಸಮೀಪದಲ್ಲಿಯೇ ಕಾಶ್ಮೀರದ ನಿವಾಸಿಗಳಿಗೆ ಕಳುಹಿಸಲ್ಪಟ್ಟ ಒಬ್ಬ ಪ್ರವಾದಿಯ ಸಮಾಧಿಯಿದೆ. ಈ ಸ್ಥಳವು ಪ್ರವಾದಿಯ ಪುಣ್ಯಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಆ ಪ್ರವಾದಿ ವಿದೇಶದಿಂದ ಕಾಶ್ಮೀರಕ್ಕೆ ಬಂದ ಒಬ್ಬ ರಾಜಕುಮಾರರಾಗಿದ್ದರು. ಅವರು ದೈವ ಭಯದಲ್ಲಿಯೂ, ಧರ್ಮಶೀಲತೆಯಲ್ಲಿಯೂ, ಭಕ್ತಿಯಲ್ಲಿಯೂ ಪರಿಪೂರ್ಣರಾಗಿದ್ದರು. ಅವರು ದೇವರಿಂದ ಪ್ರವಾದಿಯಾಗಿ ನಿಯೋಗಿಸಲ್ಪಟ್ಟು ಕಾಶ್ಮೀರದ ನಿವಾಸಿಗಳಿಗೆ ಧರ್ಮಬೋಧನೆ ಮಾಡುವುದರಲ್ಲಿ ತಲ್ಲೀನರಾಗಿದ್ದರು. ಅವರ ಹೆಸರು ಯೂಸ್ ಆಸಫ್ ಎಂದಾಗಿತ್ತು".

3. ವೀಟ್‌ಬ್ರೆಚ್ (Rev. Weitbrecht) ಎಂಬ ಕ್ರೈಸ್ತ ಮಿಷನರಿ ವಾಗ್ದತ್ತ ಮಸೀಹರ ವಿರೋಧಿಯಾಗಿದ್ದರು. ಅವರು ಪಂಜಾಬಿನಲ್ಲಿ ಹಲವಾರು ವರ್ಷ ಕಾರ್ಯೋನ್ಮುಖರಾಗಿದ್ದರು. ಕ್ರಿ. ಶ, 1903ರಲ್ಲಿ ಈ ಸಮಾಧಿಗೆ ಭೇಟಿಕೊಟ್ಟ ನಂತರ ಕ್ರೈಸ್ತ ಪತ್ರಿಕೆಯಾದ "EPIPHANY"ಯಲ್ಲಿ ಒಂದು ಪತ್ರ ಬರೆಯುತ್ತಾ ಅವರು ಈ ರೀತಿ ಹೇಳಿರುವರು: —

"ಇದರೊಳಗೆ ಎರಡು ಸಮಾಧಿ ಕಲ್ಲುಗಳಿವೆ. ಈ ಪುಣ್ಯಕ್ಷೇತ್ರದ ಮೇಲ್ನೋಟಗಾರನಾದ ಮಾನ್ಯನಾದ ವೃದ್ಧನು ಉತ್ತರ ದಿಕ್ಕಿನ ಕೊನೆಯಲ್ಲಿರುವ ದೊಡ್ಡ ಗೋರಿ ಕಲ್ಲನ್ನು ತೋರಿಸುತ್ತಾ ಅದು ಯೂಸ್ ಆಸಫ್‌ರವರದೆಂದೂ ಚಿಕ್ಕ ಕಲ್ಲು, ಸಯ್ಯಿದ್ ನಸ್ರುದ್ದೀನ್‌ರವರ ಸಮಾಧಿಯದೆಂದೂ ಹೇಳಿದನು.*

4. ರಿವ್ಯೂ ಓಫ್ ರಿಲೀಜಿಯನ್ಸ್ (Review of Religions) ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಸಂಪಾದಕರು ಕ್ರಿ. ಶ. 1909ರ ಅಕ್ಟೋಬರ್ ತಿಂಗಳ ಸಂಚಿಕೆಯಲ್ಲಿ ಈ ರೀತಿ ಬರೆದಿರುವರು:—

"ಈ ಸಮಾಧಿ, 'ನಬಿ ಸಾಹೆಬರ ಸಮಾಧಿ' ಎಂದು ಮಾತ್ರವಲ್ಲದೆ ಈಸಾ ಸಾಹೆಬರ (ಯೇಸುಕ್ರಿಸ್ತರ) ಸಮಾಧಿಯೆಂದು ಸಹ ಪ್ರಸಿದ್ಧವಾಗಿರುವುದು ಶ್ರದ್ಧಾರ್ಹವಾಗಿದೆ. ವಾಗ್ದತ್ತ ಮಸೀಹರ ಪುತ್ರರಾದ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೆಬರು ಈ ಸಮಾಧಿಗೆ ಜುಲೈ ತಿಂಗಳಲ್ಲಿ ಭೇಟಿಯಿತ್ತಾಗ ಈ ಸಮಾಧಿಯನ್ನು ಪಾರಂಪರ್ಯದಿಂದ ನೋಡಿಕೊಂಡಿರುವ ಮೇಲ್ನೋಟಗಾರರ ವಂಶದ ವೃದ್ಧ ಮಹಿಳೆಯನ್ನು 'ಈ ಸಮಾಧಿ ಯಾರದ್ದು?' ಎಂದು ವಿಚಾರಿಸಿದಾಗ, 'ಇದು ಈಸಾ ಪ್ರವಾದಿಯ ಸಮಾಧಿ' ಎಂದರು. 'ಮೌಲ್ವಿಗಳು ಈಸಾ ಪ್ರವಾದಿ (ಯೇಸುಕ್ರಿಸ್ತರು) ಆಕಾಶದಲ್ಲಿ ಜೀವಿಸಿರುವರೆಂದು ನಂಬಿರುವಾಗ ನೀವು ಇದನ್ನು ಈಸಾ ಪ್ರವಾದಿಯ ಸಮಾಧಿ ಎಂದು ಹೇಗೆ ಹೇಳುವಿರಿ?' ಎಂದು ಕೇಳಿದಾಗ ಆ ಮಹಿಳೆ ಈ ರೀತಿ ಉತ್ತರಿಸಿದರು: 'ಅವರು ಇಷ್ಟವಿದ್ದ ಹಾಗೆ ನಂಬಲಿ' ಈ ಸಮಾಧಿ ಈಸಾ ನಬಿಯದೆಂದು ನಾವು ನಮ್ಮ ಪೂರ್ವಜರಿಂದ ಆಲಿಸುತ್ತಾ ಬಂದಿದ್ದೇವೆ".

---

*ಪಾದರಿ Weitbrecht ಕೆಲವು ಸಂಗತಿಗಳನ್ನು ತನ್ನ ಪತ್ರದಲ್ಲಿ ತಪ್ಪಾಗಿ ನಿರೂಪಿಸಿದುದರಿಂದ ವಾಗ್ದತ್ತ ಮಸೀಹರ ಶಿಷ್ಯರಾದ ಮೌಲವಿ ಶೇರ್ ಅಲಿ ಸಾಹೆಬರಿಗೂ ಪಾದರಿಯವರಿಗೂ ಒಂದು ವಾದವಿವಾದ ನಡೆಯಿತು. ಹೆಚ್ಚಿನ ವಿವರಕ್ಕೆ Review of Religions Vol. 2, No. 11 & 12, 1903, Vol. 3, No. 5, 1904 ನೋಡಿರಿ.

5. ಸುಮಾರು ಒಂದು ಸಾವಿರ ವರ್ಷ ಹಿಂದೆ ವಿರಚಿತವಾದ "ಇಕ್ಮಾಲುದ್ದೀನ್" ಎಂಬ ಅರಬಿ ಗ್ರಂಥದ 359ನೇ ಪುಟದಲ್ಲಿ ಈ ರೀತಿ ಬರೆಯಲಾಗಿದೆ:—

"ಯೂಸ್ ಆಸಫ್ ಹಲವಾರು ದೇಶಗಳಲ್ಲಿ ಸಂಚರಿಸಿ ಹಲವಾರು ನಗರಗಳನ್ನು ಸಂದರ್ಶಿಸಿ ಕೊನೆಗೆ ಕಾಶ್ಮೀರ್ ಎಂಬ ರಾಜ್ಯಕ್ಕೆ ಬಂದರು. ಆ ರಾಜ್ಯದಲ್ಲಿ ಅವರು ಸಂಚರಿಸುತ್ತಾ ಅಲ್ಲಿಯೇ ಮರಣ ಪರ್ಯಂತ ವಾಸಿಸಿದರು. ಅವರು ತನ್ನ ಸ್ಥೂಲದೇಹವನ್ನು ತೊರೆದು ತನ್ನ ಆತ್ಮವನ್ನು ಪ್ರಕಾಶಕ್ಕೇರಿಸಿದರು. ಅವರು ಕೊನೆ ಯುಸಿರು ಬಿಡುವ ಮೊದಲು ಅವರ ಶಿಷ್ಯನೂ ಅವರ ಸೇವೆಯನ್ನು ಗೈಯ್ಯುತ್ತಾ ಇದ್ದವನೂ ಸುಸ್ವಭಾವಿಯೂ ಆದ ಯಾಬಿದ್ (Yabid) ಎಂಬವನನ್ನು ಸಮೀಪಕ್ಕೆ ಕರೆದು ಈ ರೀತಿ ಹೇಳಿದರು: 'ಈ ಲೋಕದಿಂದ ನನ್ನ ನಿರ್ಗಮನ ಸನ್ನಿಹಿತವಾಗಿದೆ. ನೀನು ನಿನ್ನ ಕರ್ತವ್ಯಗಳನ್ನು ಪಾಲಿಸಬೇಕು. ಸತ್ಯವನ್ನು ಬಿಡದೆ ಎಲ್ಲಾ ಅನುಷ್ಠಾನ ಕರ್ಮಗಳನ್ನು ನಿರ್ವಹಿಸಬೇಕು'. ಅನಂತರ ಆ ಶಿಷ್ಯನೊಡನೆ ಒಂದು ಸಮಾಧಿ ಗೃಹವನ್ನು ನಿರ್ಮಿಸಲು ಆಜ್ಞಾಪಿಸಿ ತನ್ನ ಕಾಲುಗಳನ್ನು ಚಾಚಿ ತನ್ನ ತಲೆಯನ್ನು ಪಶ್ಚಿಮಕ್ಕೂ ಮುಖವನ್ನು ಪೂರ್ವಕ್ಕೂ ಅಭಿಮುಖವಾಗುವಂತೆ ಮಾಡಿ ಮಲಗಿ ಪ್ರಾಣಬಿಟ್ಟರು".

ತನ್ನ ಸಂದೇಶಕ್ಕೆ ಈ ಪ್ರವಾದಿ "ಬುಶ್ರಾ" (ಅರಬಿ ಮತ್ತು ಹೀಬ್ರೂ ಭಾಷೆಗಳಲ್ಲಿ ಸುವಾರ್ತೆ ಎಂಬ ಪದಕ್ಕೆ ಸಮಾನವಾದುದು) ಎಂದು ಹೆಸರಿಸಿದ್ದರೆಂದು ಈ ಗ್ರಂಥದಲ್ಲಿ ಬರೆಯಲಾಗಿದೆ. ಅದರಲ್ಲಿ ಈ ರೀತಿ ಸಹ ಬರೆಯಲಾಗಿದೆ: "ಅವರು ತಾನು ಜನರಿಗೆ ಉಪದೇಶಿಸಿದ ಸುವಾರ್ತೆಯನ್ನು ವೃಕ್ಷಕ್ಕೆ ಹೋಲಿಸಿ ಹೇಳಿದರು. ತಮ್ಮ ಚಾತ್ಮೆಯನ್ನೂ ಜ್ಞಾನವನ್ನೂ ಅವರು ನೀರಿನ ಒರತೆಗೆ ಹೋಲಿಸಿ ಹೇಳಿದರು. ಅವರ ಸುತ್ತಲೂ ಸೇರುತ್ತಾ ಅವರ ಉಪದೇಶಗಳನ್ನು ಆಲಿಸಿ ಅವರನ್ನು ಸ್ವೀಕರಿಸಿದವರನ್ನು ಅವರು ಪಕ್ಷಿಗಳಿಗೂ ಹೋಲಿಸಿ ಹೇಳುತ್ತಿದ್ದರು".

6. ಕಾಶ್ಮೀರದಲ್ಲಿ ಕ್ರಿ. ಶ. 1909ರಿಂದ 1914ರ ವರೆಗೆ ನಿಯುಕ್ತರಾಗಿದ್ದ ಸರ್ ಫ್ರಾನ್ಸಿಸ್ ಯಂಗ್ ಹಸ್ಬೆಂಡ್, ಎಂಬ ಬ್ರಿಟಿಷ್ ರೆಸಿಡೆಂಟರು ಈ ರೀತಿ ಬರೆದಿರುವರು:

"ಕಾಶ್ಮೀರದಲ್ಲಿ ಸುಮಾರು 1900 ವರ್ಷಗಳಷ್ಟು ಹಿಂದೆ ಯೂಸ್ ಆಸಫನೆಂಬ ಒಬ್ಬ ಸಂತರು ಜೀವಿಸಿದ್ದರು. ಅವರು ಯೇಸುಕ್ರಿಸ್ತರ ದೃಷ್ಟಾಂತ ಕಥೆಗಳಂತಹ ಕಥೆಗಳನ್ನು ಹೇಳುತ್ತಾ ಉಪದೇಶಿಸುತ್ತಿದ್ದರು. ಉದಾಹರಣೆಗೆ ಬೀಜ ಬಿತ್ತಿದವನ ಕಥೆಯನ್ನು ಹೇಳಬಹುದು. ಇವರ ಸಮಾಧಿ ಶ್ರೀನಗರದಲ್ಲಿದೆ. ಖಾದಿಯಾನಿ ವಿಭಾಗದ ಸ್ಥಾಪಕರು ಯೂಸ್ ಆಸಫ್ ಮತ್ತು ಯೇಸುಕ್ರಿಸ್ತರು ಒಬ್ಬರೇ ವ್ಯಕ್ತಿಯಾಗಿರುವರೆಂದು ವಾದಿಸಿರುವರು".

(Kashmir — Described by Sir Francis Younghusband, pp 129-130, London 1911).

7. ಡಾಕ್ಟರ್ ಫ್ರಾಂಕೋಯಿಸ್ ಬೆರ್ನಿಯರನು ತನ್ನ ಪ್ರವಾಸ ಕಥನದಲ್ಲಿ ಕಾಶ್ಮೀರದಲ್ಲಿ ಯಹೂದಿಗಳು ವಾಸಿಸಿದ್ದರೆಂಬುದನ್ನು ಸೂಚಿಸಲಿಕ್ಕಾಗಿ ಪ್ರತ್ಯೇಕವಾಗಿ ಬರೆದಿರುವ ಸಂಗತಿ "ಮೂಸಾ (ಮೋಶೆ) ಪ್ರವಾದಿ ಕಾಶ್ಮೀರ ನಗರದಲ್ಲಿ ಮೃತಿ ಹೊಂದಿದ್ದರೆಂದೂ ಅವರ ಸಮಾಧಿ ಹರದಾರಿ ದೂರದೊಳಗಿದೆಯೆಂದೂ ಇರುವ ನಂಬಿಕೆ"ಯಾಗಿದೆ. (Bernier, Travels in Moghul Empire, pp 430, Oxford University Press). ಕಾಶ್ಮೀರದಲ್ಲಿ ಬೆರ್ನಿಯರನ ಕಾಲದಲ್ಲಿದ್ದವರು ಮುಸ್ಲಿಮರಾಗಿದ್ದರೆಂದು ಅವನು ಬರೆದಿರುವನು. ಮುಸ್ಲಿಮರು ಮೂಸಾ ಪ್ರವಾದಿಯ ಕುರಿತು ಅವರು ಕಾಶ್ಮೀರದಲ್ಲಿ ನಿಧನ ಹೊಂದಿದ್ದರೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಮುಹಮ್ಮದ್ ಪೈಗಂಬರರು ತನ್ನ ಶಿಷ್ಯರೊಡನೆ ಮೂಸಾ ಪ್ರವಾದಿಯ ಕುರಿತು ಹೇಳುತ್ತಾ ಅವರ ಸಮಾಧಿ ಪಾಲೆಸ್ತೀನದಲ್ಲಿದೆಯೆಂದು ಸೂಚಿಸಿದ್ದರು. ಬೆರ್ನಿಯರನಿಗೆ ಈಸಾ ಮತ್ತು ಮೂಸಾ ಎಂಬ ಪದ ಪ್ರಯೋಗದಲ್ಲಿ ತಪ್ಪು ಗ್ರಹಿಕೆಯಾಗಿದೆಯೆಂಬುದಾಗಿ ತೋರುತ್ತದೆ. ಅದೇನೇ ಇರಲಿ. ಒಂದು ಸಂಗತಿ ಮಾತ್ರ ಸ್ಪಷ್ಟವಾಗುತ್ತದೆ:— ಹದಿನೇಳನೆಯ ಶತಮಾನದ ಕಾಶ್ಮೀರದ ನಿವಾಸಿಗಳಿಗೆ ಈ ಸಮಾಧಿಯಲ್ಲಿ ಹೂಳಲ್ಪಟ್ಟ ವ್ಯಕ್ತಿ ಒಬ್ಬ ಹೀಬ್ರೂ ನಬಿಯಾಗಿದ್ದರೆಂದೂ ಆ ಪ್ರವಾದಿ ಮೂಸಾ ಪ್ರವಾದಿಯಷ್ಟು ಶ್ರೇಷ್ಠರಾಗಿದ್ದರೆಂಬ ನಂಬಿಕೆ ಇತ್ತೆಂದೂ ಖಚಿತವಾಗುತ್ತದೆ.

8. ಅಹ್ಮದ್ ಇಸ್ಲಾಮ್ ಎಂಬ ಒಬ್ಬ ಮಹನೀಯರು ಕ್ರಿ. ಶ. 1939ರಲ್ಲಿ ಕಾಶ್ಮೀರವನ್ನು ಸಂದರ್ಶಿಸಿದ ನಂತರ ದಿ ಸನ್‌ರೈಸ್ (The Sunrise) ಎಂಬ ಪತ್ರಿಕೆಯ ಸಂಪಾದಕರಿಗೆ ಈ ರೀತಿ ಬರೆದಿರುವರು:

"ನಾನು ನನ್ನ ರೂಮಿನಿಂದ ಬೇಗನೆ ಹೊರಟೆನು. ನಾನು ಟಾಂಗ ಗಾಡಿ ನಡೆಸುವವನೊಡನೆ ಖಾನ್‌ಯಾರ್ ಬೀದಿಯನ್ನು ಸೂಚಿಸಿದೆನು. ಅವನ ಪ್ರತಿಕ್ರಿಯೆ ಬಹಳ ಉತ್ಸಾಹದಿಂದ ಕೂಡಿತ್ತು: 'ನೀವು ನಬಿಯವರ ಸಮಾಧಿಯನ್ನು ನೋಡಲು ಅಪೇಕ್ಷಿಸುತ್ತಿರುವಿರಲ್ಲವೇ?'. ನಾನು 'ಹೌದು' ಎಂದು ಉತ್ತರಿಸಿ ಟಾಂಗ ಹತ್ತಿ ಹೊರಟೆ... ನಾವು ಸಮಾಧಿ ತಲುಪಿದೆವು... ಭಾರತದ ವಿವಿಧ ಭಾಗಗಳಿಂದಲೂ ವಿದೇಶಗಳಿಂದಲೂ ಸಮಾಧಿಯನ್ನು ಸಂದರ್ಶಿಸಲು ಸಂದರ್ಶಕರು ಬರುತ್ತಾ ಇರುವುದಾಗಿ ತಿಳಿಯಿತು. 'ವೈಸ್‌ರೋಯ್ ಪ್ರಭುಗಳೂ ಇಲ್ಲಿಗೆ ಬಂದಿದ್ದರು' ಎಂದು ಕೇಳಿ ನನಗೆ ಕುತೂಹಲವುಂಟಾಯಿತು. 'ಯಾವ ವೈಸ್‌ರೋಯಿ ಪ್ರಭುಗಳು ಇಲ್ಲಿಗೆ ಬಂದದ್ದು ?' ನಾನು ಕೇಳಿದೆ. 'ಹೆಸರು ಗೊತ್ತಿಲ್ಲ. ಆದರೆ ಅವರಿಗೆ ಒಂದು ಕೈ ಇರಲಿಲ್ಲ'. ಎಂಬ ಉತ್ತರ ಸಿಕ್ಕಿತು. ಲಾರ್ಡ್ ಇರ್ವಿನ್ ಪ್ರಭು ಎಂಬ ಬಿರುದಿನಿಂದ ವೈಸ್‌ರೋಯಿ ಆಗಿದ್ದ ಆದರೆ ಈಗ ಲಾರ್ಡ್ ಹ್ಯಾಲಿಫಾಕ್ಸ್ ಎಂಬ ಬಿರುದಿನಿಂದ ಬ್ರಿಟಿಷ್ ವಿದೇಶಾಂಗ ಮಂತ್ರಿಯಾಗಿರುವ ವ್ಯಕ್ತಿಯೇ ಈ ಸಂದರ್ಶಕನೆಂದು ನನಗೆ ಮನವರಿಕೆಯಾಯಿತು. ಲಾರ್ಡ್ ಹ್ಯಾಲಿಫಾಕ್ಸ್‌ರ ಸಂದರ್ಶನ ಪತ್ರಿಕೆಗಳಲ್ಲಿ ವರದಿಯಾಗಿಲ್ಲ. ಅಂತಹ ಒಂದು ವರದಿ ಓದಿದಂತೆ ನನಗೆ ನೆನಪಾಗುವುದಿಲ್ಲ. ಲಾರ್ಡ್ ಹ್ಯಾಲಿಫಾಕ್ಸ್ (Lord Halifax) ತನ್ನ ಉತ್ಸುಕತೆಯನ್ನು ಇಷ್ಟು ನಿಶ್ಶಬ್ದವಾಗಿ ಪರಿಹರಿಸಿಕೊಂಡುದೇಕೆಂಬುದು ಗ್ರಹಿಸಲು ಸಾಧ್ಯವಿದೆ. ವೈಸ್‌ರೋಯಿ ಪ್ರಭುಗಳ ಸಂದರ್ಶನ (ಆ ಸಂದರ್ಶನ ಅಘೋಷಿತವಾಗಿದ್ದರೂ) ಈ ಸಂಗತಿಯ ಮಹತ್ವವನ್ನು ಹೆಚ್ಚಿಸುತ್ತದೆ.

'ಈ ಸಮಾಧಿ ಎಷ್ಟು ಹಳೆಯದಾಗಿರಬಹುದು'. ನಾನು ಕೇಳಿದೆ.

'ಇದು ಬಹಳ ಹಳೆಯದು ಸ್ವಾಮಿ' ನನಗೆ ಉತ್ತರ ದೊರಕಿತು.

'ಆದರೂ ಅಂದಾಜು ಎಷ್ಟು ವರ್ಷ ಹಳೆಯದು?' ನಾನು ಕೇಳಿದೆ.

ಅಲ್ಲಿ ಮೂವರು ಟಾಂಗಾವಾಲರು ಇದ್ದರು. ಅವರು ಒಬ್ಬರಿನ್ನೊಬ್ಬರನ್ನು ನೋಡಿದರು. ಕೊನೆಗೆ ಒಬ್ಬ: 'ಸುಮಾರು ಹತ್ತೊಂಭತ್ತು ನೂರು ವರ್ಷಗಳಷ್ಟು ಈ ಸಮಾಧಿ ಹಳೆಯದಾಗಿದೆ' ಎಂದನಲ್ಲದೆ 'ಆ ಸಮಾಧಿ ವಿದೇಶದಿಂದ ಬಂದ ಒಬ್ಬ ಪ್ರವಾದಿಯದು' ಎಂದು ಹೇಳುತ್ತಾ ಮುಂದುವರಿಸಿದನು: 'ಈ ಸಮಾಧಿ ನೂರಾರು ವರ್ಷಗಳಿಂದ ಜನರ ಆದರಕ್ಕೆ ಪಾತ್ರವಾಗುತ್ತಾ ಬರುತ್ತಾ ಇದೆ. ನಮ್ಮ ಹಿರಿಯರು ಈ ರೀತಿ ನಮ್ಮೊಡನೆ ಹೇಳುತ್ತಿದ್ದರು'."

(The Sunrise; Vol. 10 No. 16 April 22, 1939, Lahore).

ಮೇಲಿನ ಆಧಾರಗಳಿಂದ ಪ್ರಸ್ತುತ ಸಮಾಧಿಯಲ್ಲಿ ಹೂಳಲ್ಪಟ್ಟ ವ್ಯಕ್ತಿಯ ಕುರಿತು ಈ ಕೆಳಗಿನ ಸಂಗತಿಗಳು ವ್ಯಕ್ತವಾಗುತ್ತವೆ.

1. ಅವರು ಒಬ್ಬ ರಾಜಕುಮಾರರಾಗಿದ್ದರು.
2. ಅವರು ಒಬ್ಬ ನಬಿ (ಪ್ರವಾದಿ)ಯಾಗಿ ಕಾಶ್ಮೀರದ ನಿವಾಸಗಳಿಗೆ ಕಳುಹಿಸಲ್ಪಟ್ಟಿದ್ದರು.
3. ಸಾಮ್ಯ ಕಥೆಗಳ ಮೂಲಕ ಉಪದೇಶಿಸುತ್ತಿದ್ದರು.
4. ಅವರು ಪಶ್ಚಿಮದ ಯಾವುದೋ ದೇಶದಿಂದ ಸುಮಾರು 1900 ವರ್ಷಗಳ ಮೊದಲು ಕಾಶ್ಮೀರಕ್ಕೆ ಬಂದಿದ್ದರು.
5. ಅವರ ಹೆಸರು ಯೂಸ್ ಆಸಫ್ ಎಂದೂ ಈಸಾ ಎಂದೂ ಆಗಿತ್ತು.

ಮೇಲಿನ ಸಂಗತಿಗಳು ಸ್ಪಷ್ಟವಾಗಿರುವಾಗ ಈ ಸಮಾಧಿಯಲ್ಲಿ ಹೂಳಲ್ಪಟ್ಟ ವ್ಯಕ್ತಿ ಯಾರೆಂದು ಗುರುತಿಸುವುದು ಕಷ್ಟವಲ್ಲ. ಮೇಲಿನ ಲಕ್ಷಣಗಳನ್ನು ಹೊಂದಿರುವ ರಾಜಕುಮಾರ ದಾವೀದನ ಮಗನಾದ ರಾಜಕುಮಾರ ಯೇಸುವಲ್ಲದೆ ಬೇರೆ ಯಾರೂ ಆಗಲು ಸಾಧ್ಯವಿಲ್ಲ.

1. ಯೇಸುಕ್ರಿಸ್ತರು ಮತ್ತಾಯ 9 : 27, 20 : 30ರ ವಚನಗಳ ಪ್ರಕಾರ "ದಾವೀದ ಕುಮಾರ"ನೆಂದು ಕರೆಯಲ್ಪಡುತ್ತಿದ್ದು, ದೇವರು ಅವರನ್ನು ಇಸ್ರಾಯಿಲರ "ನಾಯಕನೆಂತಲೂ ರಕ್ಷಕನೆಂತಲೂ" (ಅಪೋಸ್ತರ ಕೃತ್ಯಗಳು 5 : 31) ಉನ್ನತ ಸ್ಥಾನಕ್ಕೇರಿಸಲ್ಪಟ್ಟವರೂ 'ಭೂರಾಜರ ಒಡೆಯರೂ' (ಪ್ರಕಟನೆ 1 : 5) ಆಗಿದ್ದರು.

2. ಯೇಸುಕ್ರಿಸ್ತರು ನಬಿಯಾಗಿದ್ದರು. ಅವರು ಇಸ್ರಾಯಿಲ್ ಗೋತ್ರದ ಕಳೆದುಹೋದ ಕುರಿಗಳಿಗೆ ಉಪದೇಶಿಸಲು ಬಂದಿದ್ದ ಪ್ರವಾದಿಯಾಗಿದ್ದರು. ಅವರು ಪಾಲೆಸ್ತೀನ್ ದೇಶದಿಂದ ಹೊರಟು ಅಫ್ಘಾನಿಸ್ಥಾನ ಮತ್ತು ಕಾಶ್ಮೀರದಲ್ಲಿ ವಾಸಿಸುತ್ತಿದ್ದ ಇಸ್ರಾಯಿಲ್ ಗೋತ್ರದವರಿಗೆ ಉಪದೇಶಿಸಿದರು.

3. ಯೇಸುಕ್ರಿಸ್ತರು ಸಾಮ್ಯ ಕಥೆಗಳ ಮೂಲಕ ಉಪದೇಶಿಸುತ್ತಿದ್ದರು. ಅವರು ತಮ್ಮ ಉಪದೇಶಗಳನ್ನು 'ಬುಶ್ರಾ' (ಸುವಾರ್ತೆ) ಎಂದು ಕರೆಯುತ್ತಿದ್ದರು. ತಮ್ಮ ಶಿಷ್ಯರನ್ನು ಪಕ್ಷಿಗಳಿಗೆ ಹೋಲಿಸುತ್ತಿದ್ದರು. ಬಿತ್ತುವವನ ಸಾಮ್ಯ ಕಥೆ ಮತ್ತಾಯ (13 : 3)ದಲ್ಲಿ ವಿವರಿಸಲಾಗಿದೆ. ಅವರು ''ಸಾಮ್ಯವಿಲ್ಲದೆ ಒಂದನ್ನೂ ಹೇಳಲಿಲ್ಲ'' ಮತ್ತಾಯ (13 : 34).

4. ಯೇಸುಕ್ರಿಸ್ತರು ಪಾಲೆಸ್ತೀನ್ ದೇಶದಿಂದ ಕಾಶ್ಮೀರಕ್ಕೆ ಪ್ರಯಾಣ ಮಾಡಿದುದು ಸುಮಾರು 1900 ವರ್ಷಗಳಿಗಿಂತಲೂ ಹಿಂದೆ. ಆದುದರಿಂದ ಇಬ್ಬರ ಕಾಲ ಒಂದೇ ಎಂದು ತಿಳಿಯುತ್ತದೆ.

5. ಪವಿತ್ರ ಖುರ್‌ಆನಿನಲ್ಲಿ ಯೇಸುಕ್ರಿಸ್ತರನ್ನು ಈಸಾ ಎಂದು ಕರೆಯಲಾಗಿದೆ. ಈ ಶಬ್ದ ಈಶು ಎಂಬ ಹೀಬ್ರೂ ಪದದಿಂದ ವ್ಯುತ್ಪನ್ನವಾಗಿದೆ.

## ಯೂಸ್ ಆಸಫ್

ಅವರು ಯೂಸ್ ಆಸಫ್ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದರು. ಯೂಸ್ ಎಂಬ ಪದವು "ಯೂಯು" ಎಂಬ ಹಳೆ ಪಾರ್ಸಿ ಭಾಷೆಯ ಪದವಾಗಿದ್ದು ಇದು ಯೇಸುಕ್ರಿಸ್ತರ ಕುರಿತು ಪ್ರಯೋಗಿಸಲ್ಪಡುತ್ತಿತ್ತು. ಸುವಾರ್ತೆಗಳನ್ನು ಗ್ರೀಕ್ ಭಾಷೆಯಿಂದ ಪಾರ್ಸಿ ಮತ್ತು ಅರಬಿ ಭಾಷೆಗೆ ಭಾಷಾಂತರಿಸುವಾಗ ಯೇಸು ಕ್ರಿಸ್ತರನ್ನು "ಯೂಸು" ಎಂದು ಹೆಸರಿಸಲಾದುದರಿಂದ ಈ ಶಬ್ದದಿಂದಲೂ ಯೂಸ್ ಶಬ್ದ ಉದ್ಭವವಾಗಿರಬಹುದು. ಆದುದರಿಂದ ಯೂಸ್ ಎಂಬುದು ಯೇಸುಕ್ರಿಸ್ತರ ಹೆಸರೆಂಬುದಾಗಿ ತಿಳಿಯಬಹುದು. ಆಸಫ್ ಎಂಬ ಶಬ್ದವು ಸಹ ಬೈಬಲಿನಲ್ಲಿ ಪ್ರಯೋಗಿಸಲ್ಪಟ್ಟಿದ್ದು ಇದರ ಅರ್ಥ 'ಒಟ್ಟುಗೂಡಿಸುವವ' ಅಥವಾ 'ಗುಂಪು ಸೇರಿಸುವವ' ಎಂದಾಗಿದೆ. [Fascimile Series of Bagster's Polyglot Bible) ಎಂಬ ಗ್ರಂಥದ ಅನುಬಂಧ (Appendix) ಪುಟ 33ರಲ್ಲಿ ನಾಮಪದಗಳ ಸೂಚಿ ಮತ್ತು ಅವುಗಳ ಅರ್ಥ" ಎಂಬ ಭಾಗ ನೋಡಿರಿ]. I ಪೂರ್ವಕಾಲ ವೃತ್ತಾಂತ (16 : 4—7)ರಲ್ಲಿ ಆಸಾಫ್ ಎಂಬ ಶಬ್ದ ಒಬ್ಬ ಭಕ್ತನಾದ ಲೇವಿಯನ ಕುರಿತು ಪ್ರಯೋಗಿಸಲ್ಪಟ್ಟಿದ್ದು ಆತನು ದಾವೀದನ ಕೀರ್ತನೆಗಳ ಸಂಗ್ರಹಕರ ಮುಖಂಡನಾಗಿ ನೇಮಿಸಲ್ಪಟ್ಟುದು ಬರೆಯಲಾಗಿದೆ.

ಯೇಸುಕ್ರಿಸ್ತರ ಆಗಮನೋದ್ದೇಶ ಇಸ್ರಾಯಿಲ್ ಮನೆತನದ ಚೆದರಿಹೋದ ಎಲ್ಲಾ ಗೋತ್ರಗಳನ್ನು ಒಟ್ಟಿಗೆ ಸೇರಿಸುವುದಾಗಿತ್ತು. ಅವರು ಹೇಳುವುದನ್ನು ಗಮನಿಸಿರಿ: "ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗಿವೆ. ಅವುಗಳನ್ನು ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವುವು. ಆಗ ಒಂದೇ ಹಿಂಡು ಆಗುವುದು, ಒಬ್ಬನೇ ಕುರುಬನಿರುವನು'' (ಯೋಹಾನ, 10 : 16)

ಈ ಕಾರಣದಿಂದ ಯೇಸುಕ್ರಿಸ್ತರು ಆಸಫ್ ಎಂದು ಕರೆಯಲ್ಪಟ್ಟರು. ಅವರು ಇಸ್ರಾಯಿಲ್ ಮನೆತನದ ಕಳೆದುಹೋದ ಹತ್ತು ಗೋತ್ರಗಳಿಗೆ ಉಪದೇಶಿಸಲಿಕ್ಕಾಗಿ ಪರ್ಶಿಯಾ, ಅಫ್‌ಘಾನಿಸ್ಥಾನ ಮತ್ತು ಕಾಶ್ಮೀರಕ್ಕೆ ಬಂದಾಗ ಅವರು "ಯೂಸ್ ಆಸಫ್" ಅಥವಾ "ಯೇಸು ಆಸಫ್" ಎಂದು ಕರೆಯಲ್ಪಟ್ಟುದು ಸಮುಚಿತವಾಗಿದೆ.

ಈ ಕಾಲದ ಪ್ರವಾದಿಯಾದ ಹಝ್ರತ್ ಅಹ್ಮದರು ಯೇಸುಕ್ರಿಸ್ತರ ಸಮಾಧಿಯನ್ನು ಗುರುತಿಸಿದ ವಿಷಯ ತಿಳಿಯದ ಕೆಲವು ಐರೋಪ್ಯ ಲೇಖಕರು "ಬರ್‌ಲಾಮ್ ಮತ್ತು ಜೋಸೆಫತ್' ಕಥೆಯನ್ನು ಆಧರಿಸಿಯೂ, ಕ್ರೈಸ್ತ ಮಿಷನರಿಗಳು ಯೇಸುಕ್ರಿಸ್ತರನ್ನು ಇತರ ಪ್ರವಾದಿಗಳಂತೆ ಸಮಾಧಿ ಹೊಂದಲು ಬಿಡದೆ ಅವರನ್ನು 'ರಕ್ಷಿಸ'ಲಿಕ್ಕಾಗಿಯೂ ನಾವು ಚರ್ಚಿಸುತ್ತಿರುವ ಸಮಾಧಿ ಶ್ರೀಬುದ್ಧರದ್ದೆಂದು ಹೇಳಿರುವರು.

ಉದಾಹರಣೆಗಾಗಿ : Rev. Weitbrecht (ರೆವೆರೆಂಡ್ ವೀಟ್‌ಬ್ರಿಟ್) ಮೇಲೆ ಉಲ್ಲೇಖಿಸಿದ ತನ್ನ ಪತ್ರದಲ್ಲಿ, 'ಬರಲಾಮ್ ಮತ್ತು ಜೋಸೆಫತ್' ಕಥೆಯಲ್ಲಿ ಬರುವ ಯೂಸ್ ಆಸಫ್‌ನ ಜೀವಿತ ಘಟನೆಗಳು ಬುದ್ಧನ ಜೀವಿತ ಸಂಭವಗಳಿಗೆ ಹೋಲಿಕೆಯನ್ನು ಹೊಂದಿರುವ ಕಾರಣ ಯೂಸ್ ಆಸಫ್ ಎಂಬ ಹೆಸರು ವ್ಯಾಖ್ಯಾನ ಯೋಗ್ಯವಾಗಿದ್ದು ಅದು ಬೋಧಿಸತ್ವನ ಇನ್ನೊಂದು ರೂಪವಾಗಿರಲೂ ಬಹುದೆಂದು ವಾದಿಸಿರುವರು.

ಇದೇ ರೀತಿ ಡಾಕ್ಟರ್ ಮೆಕ್ ಡೊನಾಲ್ಡ್ ಈ ರೀತಿ ಬರೆದಿರುವರು: "ನಮ್ಮ ಕಥೆಯಲ್ಲಿ ಉಲ್ಲೇಖಿತವಾದ ಜೋಸೆಫ್ ಅಥವಾ ಜೋಸೆಫತ್ ಬುದ್ಧನಲ್ಲದೆ ಬೇರೆ ಯಾರೂ ಅಲ್ಲವೆಂಬ ಸಂಗತಿ ಒಂದೇ ಸಮಯದಲ್ಲಿ ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ವಿದ್ವಾಂಸರು ಸ್ವತಂತ್ರವಾಗಿ ಒಬ್ಬರಿಂದೊಬ್ಬರು ಪ್ರಭಾವಿತರಾಗದೆ

ಕಂಡುಹಿಡಿದಿರುವರು. ಇದರ ಲೇಖಕ ಸಹ ಈ ಕಥೆ ಭಾರತದಿಂದ ಬಂದುದಾಗಿ ಬರೆದಿರುವನು. ಈ ಕಥೆ ಬುದ್ಧನಿಗೆ ಸಂಬಂಧಿಸಿದುದೆಂಬ ಸಂಗತಿ ಯಾರೇ ಆಗಲಿ ಗುರುತಿಸಬಹುದು.

(Mac Donald: The story of Barlaam and Joasaph, Introduction page lii, Calcutta 1895).

ಮತ್ತೊಂದು ಅಭಿಪ್ರಾಯ ಹೀಗಿದೆ: "ವಾಸ್ತವದಲ್ಲಿ ಬರ್‌ಲಾಮ್ ಎಂಬುದು ಬುದ್ಧನ ರೂಪಾಂತರವಾದುದರಿಂದ ಅದು ಜೋಸೆಫತ್‌ನ ಅವಳಿ ಹೆಸರಾಗಿದೆ" (Barlam and Joseph at Joseph Jacobs Introduction, P. xlix, London 1895)

ಹರ್ಝ್‌ರತ್ ಅಹ್ಮದರಿಗೆ ಸಮಾಧಿಯ ಕುರಿತು ದೊರಕಿದ ವಾರ್ತೆಯ ಮೂಲ "ಬರ್‌ಲಾಮ್ ಮತ್ತು ಜೋಸೆಫತ್" ಕಥೆಯಾಗಿರಲಿಲ್ಲ. ಆದರೆ ಐರೋಪ್ಯ ಲೇಖಕರು ಜೋಸೆಫತ್‌ನನ್ನು ಬುದ್ಧನೆಂದು ಸೂಚಿಸುವುದು ನ್ಯಾಯೀಕರಿಸಬಹುದಾದರೆ ಆತ ಬುದ್ಧನಲ್ಲ ಯೇಸುಕ್ರಿಸ್ತನೆಂದು ನಾವು ಸಹ ನ್ಯಾಯೀಕರಿಸಬಹುದು. ಶ್ರೀನಗರದಲ್ಲಿ ಸಮಾಧಿ ಹೊಂದಿದ ಯೂಸ್ ಆಸಫ್ ದೇವರ ಪ್ರವಾದಿಯಾಗಿದ್ದರು. ಅವರು ಬರೇ ಒಬ್ಬ ಸಂತರಾಗಿರಲಿಲ್ಲ. (ಎಲ್ಲಾ ಪ್ರವಾದಿಗಳೂ ಸಂತರಾಗಿರುವರು. ಆದರೆ ಎಲ್ಲಾ ಸಂತರೂ ಪ್ರವಾದಿಗಳಲ್ಲ). ಆ ಸಮಾಧಿಯಲ್ಲಿ ಹೂಳಲ್ಪಟ್ಟ ಮಹಾತ್ಮ ಒಬ್ಬ ಪ್ರವಾದಿಯ ಶಿಷ್ಯನಾಗಿರದೆ ಸ್ವತಃ ಪ್ರವಾದಿಯಾಗಿದ್ದರು. ಆದುದರಿಂದ ನಿರ್ಣೈಸಬೇಕಾದ ಪ್ರಧಾನ ವಿಷಯ ಇದಾಗಿದೆ:

"ಶ್ರೀನಗರದ ಯೂಸ್ ಆಸಫ್ ಒಂದೋ ಬುದ್ಧ ಅಥವಾ ಯೇಸುಕ್ರಿಸ್ತ ಆಗಿರಬೇಕು."

ಶ್ರೀನಗರದಲ್ಲಿ ಸಮಾಧಿ ಹೊಂದಿದ ಯೂಸ್ ಆಸಫ್ ಶ್ರೀ ಬುದ್ಧನಾಗಿರಲು ಸಾಧ್ಯವಿಲ್ಲವೆಂದು ಈ ಕೆಳಗಿನ ಕಾರಣಗಳಿಂದ ವ್ಯಕ್ತವಾಗುತ್ತದೆ:

1. ಶ್ರೀ ಬುದ್ಧ ಶ್ರೀನಗರದಲ್ಲಿ ನಿಧನ ಹೊಂದಿರಲಿಲ್ಲ. ಆತನ ಶರೀರ ಹೂಳಲ್ಪಡಲಿಲ್ಲ. ಅದು ದಹನಗೊಳಿಸಲ್ಪಟ್ಟಿತ್ತು. ಆಧುನಿಕ ಸಂಶೋಧಕರು ಶ್ರೀ ಬುದ್ಧ ಮೃತಿ ಹೊಂದಿದ ಸ್ಥಳವನ್ನು ಕಂಡುಹಿಡಿದಿರುವರು.

ಚೇಂಬರ್ಸ್ ಎನ್‌ಸೈಕ್ಲೋಪೀಡಿಯಾ ಈ ರೀತಿ ಹೇಳುತ್ತದೆ:—

"ಬುದ್ಧ ತನ್ನ 80ನೇ ವಯಸ್ಸಿನಲ್ಲಿ ಕುಶಿನಗರದಲ್ಲಿ (ಔಧ್ ಪ್ರಾಂತ್ಯ) ಕಿ. ಪೂ. 543ರಲ್ಲಿ ನಿಧನ ಹೊಂದಿದಾಗ ಆತನ ಶವವು ದಹನಗೊಳಿಸಲ್ಪಟ್ಟಿತ್ತು. ಮತ್ತು ಆತನ ಸ್ಮಾರಕಾವಶೇಷಗಳು ಪ್ರತಿಸ್ಪರ್ಧಿ ಅನುಯಾಯಿಗಳೆಡೆಯಲ್ಲಿ ಹಂಚಲಾಯಿತು ಮತ್ತು ಅವುಗಳನ್ನು ಸಂರಕ್ಷಿಸಲಿಕ್ಕಾಗಿ ಸ್ಮಾರಕ ಸಮಾಧಿಗಳು ನಿರ್ಮಿತವಾದುವು" Chambers Excyc. Revised Edition "Buddism" London 1880)

ಡಾಕ್ಟರ್ T. W. ಡೇವಿಡ್ ಈ ರೀತಿ ಬರೆದಿರುವರು:

"ಮಿಸ್ಟರ್ ವಿಲಿಯಂ ಪೆಪ್ ನಡೆಸಿದ ಸಂಶೋಧನೆಗಳಲ್ಲಿ ಪ್ರಧಾನವಾದುದು ನೇಪಾಳಿ ಗಡಿಯಲ್ಲಿರುವ ಬರ್ಡ್‌ಪುರ ಎಸ್ಟೇಟಿನಲ್ಲಿ ಕಂಡುಹಿಡಿದುದಾಗಿತ್ತು. ಅಲ್ಲಿ ಶಾಕ್ಯ ವಂಶಜರು ಬುದ್ಧನ ಚಿತೆಯಿಂದ ತಮ್ಮ ಪಾಲಿಗೆ ದೊರೆತ ಚಿತಾಭಸ್ಮ ಕಲಶದ ಮೇಲೆ ನಿರ್ಮಿಸಿದ ಸ್ತೂಪವನ್ನು ಕಂಡುಹಿಡಿಯಲಾಯಿತು."

(Encyclopaedia Brittannica Ed. II Buddhism) X

ಡಾಕ್ಟರ್ ಹರ್ಮನ್ ಓಲ್ಡನ್‌ಬರ್ಗ್ ಈ ರೀತಿ ಬರೆದಿರುವರು:

"ಬುದ್ಧ ಕುಶಿನಾರದಲ್ಲಿ ಮೃತನಾದನು. ಸೂರ್ಯೋದಯ ಕಾಲದಲ್ಲಿ ಕುಶಿನಾರದ ಪ್ರತಿಷ್ಠಿತರು ಪುರದ್ವಾರಗಳ ಸಮೀಪ ಸಕಲ ರಾಜ ಮರ್ಯಾದೆಗಳೊಂದಿಗೆ ಆತನ ಶವ ದಹನ ಮಾಡಿದರು". (Oldenberg: Buddha Page 203)

ಮೇಲಿನ ಆಧಾರಗಳಿಂದ ಒಂದು ಸಂಗತಿ ಸ್ವತಃ ಸಿದ್ಧವಾಗುತ್ತದೆ. ಕುಶಿನಗರ ಅಥವಾ ಕುಶಿನಾರದಲ್ಲಿ ಮೃತನಾಗಿ ಶವದಹನಗೊಳಿಸಲ್ಪಟ್ಟ ಶ್ರೀ ಬುದ್ಧ ಮೇಲಿನ ಸಮಾಧಿಯಲ್ಲಿ ಹೂಳಲ್ಪಡುವುದು ಅಸಂಭಾವ್ಯ.

2. ಮೇಲಿನ ಸಮಾಧಿ ಶ್ರೀ ಬುದ್ಧನಾಗಿದ್ದರೆ ಅಥವಾ ಬೇರೆ ಯಾವುದೇ ಹಿಂದೂ ರಾಜ, ರಾಜಕುಮಾರ ಅಥವಾ ಸಂತನದಾಗಿದ್ದರೆ ಆ ಸಮಾಧಿ ಬೌದ್ಧರ ಅಥವಾ ಹಿಂದುಗಳ ವಶವಾಗಿರುತಿತ್ತು ಮತ್ತು ಅವರಿಂದಲೇ ಸಂದರ್ಶಿಸಲ್ಪಡುತಿತ್ತು. ಆದರೆ ಸಮಾಧಿ ಇರುವುದು ಮುಸ್ಲಿಮರ ವಶದಲ್ಲಾಗಿದೆ.

3. ನಾನು ಮೇಲೆ ವಿವರಿಸಿದಂತೆ ಯೂಸ್ ಆಸಫ್ ಎಂಬ ಹೆಸರು ಹೀಬ್ರೂ ಭಾಷೆಯದಾಗಿದೆ. ಅದು "ಬೋಧಿಸತ್ವ"ದ ಇನ್ನೊಂದು ರೂಪವೆಂದು ಹೇಳುವುದು ಅಪಹಾಸ್ಯಕರವಾಗಿವೆ. ಬೋಧಿಸತ್ವದ ರೂಪಾಂತರವಾಗಿ ಹೇಳುವುದಕ್ಕಿಂತ ಯಸೂ ಆಸಾಫ್ (Yasu Asaph) ನ ರೂಪಾಂತರವೆಂದು ಹೇಳುವುದಲ್ಲವೆ ಹೆಚ್ಚು ಸ್ವೀಕಾರ್ಯರ್ಹ? ಕಾಶ್ಮೀರದ ಯೂಸ್ ಆಸಫ್ ಗೌತಮ ಬುದ್ಧನಲ್ಲವೆಂಬುದು ಸಮರ್ಥಿಸಲ್ಪಟ್ಟಿರುವಾಗ, ಈ ವ್ಯಕ್ತಿ ಯೇಸುಕ್ರಿಸ್ತರಲ್ಲದೆ ಇನ್ನಾರೂ ಆಗಿರಲಿಲ್ಲವೆಂದು ನಾವು ಧೈರ್ಯದಿಂದ ಹೇಳುವುದರಲ್ಲಿ ನ್ಯಾಯವಿದೆ.

ಶ್ರೀನಗರದಲ್ಲಿ ಸಮಾಧಿ ಹೊಂದಿದ ಯೂಸ್ ಆಸಫ್ ಯೇಸುಕ್ರಿಸ್ತರಲ್ಲದೆ ಬೇರೆ ಯಾರೂ ಅಲ್ಲವೆಂದು, ಅಂತಹ ಪೂರ್ವಕಾಲ ಸಂಭವಗಳನ್ನು ರುಜುಗೊಳಿಸುವ ರೀತಿಯಲ್ಲಿ ಲಭ್ಯವಿರುವ ಸಕಲ ಸಾಕ್ಷ್ಯಾಧಾರಗಳ ಸಹಾಯದಿಂದ ಹಝ್ರತ್ ಅಹ್ಮದರು ವ್ಯಕ್ತಗೊಳಿಸಿದಾಗ, ಅವರ ವಿರೋಧಿಯಾಗಿದ್ದ ಈಜಿಪ್ಟ್ ದೇಶದ ಕೈರೋ ನಗರದ ವಿದ್ವಾಂಸರಾಗಿದ್ದ ಶೇಖ್ ರಶೀದ್ ರಿಝಾರವರು ಹಝ್ರತ್ ಅಹ್ಮದರ "ಅಲ್‌ಹುದಾ" ಎಂಬ ಅರಬಿ ಗ್ರಂಥವನ್ನು ಉದ್ಧರಿಸುತ್ತಾ ತಮ್ಮ "ತಫ್ಸೀರುಲ್ ಮನಾರ್" ಎಂಬ ಗ್ರಂಥದ 6ನೇ ಸಂಪುಟದಲ್ಲಿ "ಭಾರತಕ್ಕೆ ಯೇಸುವಿನ ಪಲಾಯನ ಮತ್ತು ಕಾಶ್ಮೀರದಲ್ಲಿ ಮರಣ" ಎಂಬ ಶೀರ್ಷಿಕೆಯಲ್ಲಿ ಈ ರೀತಿ ಬರೆಯಲು ನಿರ್ಬಂಧಿತರಾದರು:

"ಯೇಸುಕ್ರಿಸ್ತರು ಭಾರತಕ್ಕೆ ಪಲಾಯನ ಗೈದುದು ಮತ್ತು ಶ್ರೀನಗರದಲ್ಲಿ ಮೃತರಾದುದು ವೈಚಾರಿಕ ಅಥವಾ ಚಾರಿತ್ರಿಕ ಸತ್ಯಗಳಿಗೆ ವಿರುದ್ಧವಾಗಿಲ್ಲ".

ಜಡ್ಜ್ ಡೋಕರ್ ಈ ರೀತಿ ಬರೆದಿರುವರು:—

"ನಾನು ಇದರ ಮೊದಲೇ ಸೂಚಿಸಿದ ಹಳೆಯ ಕಥೆಗೆ ಪುನಃ ಗಮನಹರಿಸಲು ಇಚ್ಛಿಸುತ್ತೇನೆ. ಅದರ ಹೊಸ ರೂಪ The East & West 'ದಿ ಈಸ್ಟ್ ಎಂಡ್ ವೆಸ್ಟ್' ಎಂಬ ನಿಯತಕಾಲಿಕ ಪತ್ರಿಕೆಯಲ್ಲಿ ಕೆಲವು ವರ್ಷಗಳ ಹಿಂದೆ ಪ್ರಸಿದ್ಧವಾಗಿತ್ತು. ಅದರ ವಿವರ ಸಂಕ್ಷಿಪ್ತವಾಗಿ ಹೀಗಿದೆ: ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ. ಅವರ ಗಾಯಗಳಿಗೆ ಲೇಪಿಸಲ್ಪಟ್ಟ ಅದ್ಭುತ ಲೇಪನದಿಂದಾಗಿ ಅವರು ನಲ್ವತ್ತು ದಿವಸಗಳೊಳಗೆ ಆರೋಗ್ಯಹೊಂದಿ, ಇಸ್ರಾಯಿಲ್ ವಂಶದ ಕಳೆದುಹೋದ ಗೋತ್ರಗಳಿಗೆ ಉಪದೇಶಿಸಲಿಕ್ಕಾಗಿ ಭಾರತಕ್ಕೆ ಹೋಗಿ ಕೊನೆಗೆ ಶ್ರೀನಗರದಲ್ಲಿ ನಿಧನ ಹೊಂದಿದರು. ಅಲ್ಲಿ ಒಂದು ಸಮಾಧಿ ಇಂದಿಗೂ ಅವರದೆಂದೂ ಹೇಳಲ್ಪಡುತ್ತಿದೆ.

"ಈ ವಿಷಯವನ್ನು ಸುಸ್ಪಷ್ಟಗೊಳಿಸುವ ಸಾಕ್ಷ್ಯಗಳು ಯಾವುದೆಂದು ನನಗೆ ತಿಳಿಯದಿದ್ದರೂ ಒಂದು ಸಂಗತಿ ನಾನು ಸ್ಪಷ್ಟಗೊಳಿಸಲು ಅಪೇಕ್ಷಿಸುತ್ತೇನೆ: ಮೇಲಿನ ಸಂಗತಿ ಬುದ್ಧಿಶೂನ್ಯವೂ ಅಸಂಭಾವ್ಯವೂ ಆಗಿಲ್ಲ. ಅಫ್‌ಘಾನಿಸ್ಥಾನ ಮತ್ತು ಬೆಕ್ಟ್ರಿಯಾ ಪ್ರದೇಶಗಳಲ್ಲಿ ಇಂದಿಗೂ ಸುಲಭವಾಗಿ ಗುರುತಿಸಬಹುದಾದ ಹೀಬ್ರೂ ವಂಶಜರನ್ನು ಕಾಣಬಹುದೆಂದು ಇನ್ನಿತರ ಮೂಲಗಳಿಂದಲೂ ತಿಳಿದುಬಂದಿದೆ. ಸುವಾರ್ತೆಗಳ ಹಲವಾರು ವಚನಗಳು ಮೇಲಿನ ಕಥೆಯನ್ನು ಬಲಗೊಳಿಸುವುದಿಲ್ಲವಾದರೂ ಅದಕ್ಕೆ ಅನುಯೋಜ್ಯವಾಗಿವೆ ಎಂಬುದು ಆಶ್ಚರ್ಯಕರ. ದೇವರ ಸಾಮ್ರಾಜ್ಯದ ಕುರಿತು ಜುಡಿಯಾ ಅಥವಾ ಗಲಿಲಾಯದಲ್ಲಿ ನಲ್ವತ್ತು ದಿವಸಗಳ ವರೆಗೆ ಶಿಷ್ಯರನ್ನು ಉಪದೇಶಿಸಿ (ಅಪೋಸ್ತಲರ ಕೃತ್ಯಗಳು 1 : 3) ಅನಂತರ ಅಲ್ಲಿರುವುದು ಅಪಾಯಕರವೆಂದು ಗ್ರಹಿಸಿದ ಕಾರಣ ತನ್ನ ಉಪದೇಶಗಳನ್ನು ಇಸ್ರಾಯೆಲ್ ಮನೆತನದ ಕಳೆದುಹೋದ ಗೋತ್ರಗಳಿಗೆ ತಲುಪಿಸಲಿಕ್ಕಾಗಿ ಅಲ್ಲಿಂದ ಯೇಸುಕ್ರಿಸ್ತರು ಹೊರಟರೆಂದು ಹೇಳುವುದು ಸಯುಕ್ತಿಕವಲ್ಲವೇ?"

(Docker:- If Jesus Did Not Die upon the Cross? Page 71)

ಪುನಃ 77ನೇ ಪುಟದಲ್ಲಿ ಡೋಕರ್ ಅವರು ಈ ರೀತಿ ಬರೆದಿರುವರು:

"ನಮಗೆ ಸರಿಯಾಗಿ ಗೊತ್ತಿಲ್ಲವೆಂದು ನಾನು ಪುನರಾವರ್ತಿಸಲಿಚ್ಛಿಸುತ್ತೇನೆ. ಆದರೆ ಆ ದೂರ ಪ್ರದೇಶಗಳಲ್ಲಿ 'ಕಳೆದುಹೋದ ಹತ್ತು ಗೋತ್ರ'ಗಳಿಗೆ ಉಪದೇಶಿಸಿದ ನಂತರ ಯೇಸುಕ್ರಿಸ್ತರು ಶ್ರೀನಗರದಲ್ಲಿ ಮೃತರಾಗಿ ಅಲ್ಲಿ ಅವರ ಹೆಸರು ಹೊಂದಿರುವ ಸಮಾಧಿಯಲ್ಲಿ ಹೂಳಲ್ಪಟ್ಟುದು ಯಥಾರ್ಥವಾಗಿರಬಹುದು".

ಜಾನ್ ನೋಯೆಲ್ [John Noel] 'ಆಸ್ಯಾ' ಮೆಗಸಿನ್‌ನ ಕ್ರಿ. ಶ. 1930ರ ಅಕ್ಟೋಬರ್ ಸಂಚಿಕೆಯಲ್ಲಿ ಬರೆದ 'The Heavenly High Snow Peaks of Kashmir' ಎಂಬ ಲೇಖನದಲ್ಲಿ ಹೀಗೆಂದಿದ್ದಾರೆ:

"ಅಗಲವಾದ ಭುಜಗಳನ್ನು ಹೊಂದಿದ ಈ ಕಾಶ್ಮೀರಿ ಕೃಷಿಕರು ಬಲಶಾಲಿಗಳೂ ಆಕರ್ಷಕರೂ ಆಗಿದ್ದರೂ ಬಹಳ ಸೌಮ್ಯ ಭಾವ ಹೊಂದಿರುವರು. ಒಂದು ವಿಷಯ ನಿಮ್ಮನ್ನು ಪ್ರಧಾನವಾಗಿ ಅವರೆಡೆಗೆ ಗಮನ ಹರಿಸುವಂತೆ ಮಾಡುತ್ತದೆ. ಅವರು ಪೂರ್ಣವಾಗಿ ಯಹೂದಿಗಳಂತೆ ಕಾಣುತ್ತಾರೆ – ಅದು ಅವರು ಬೈಬಲಿನ ಕಾಲದ ಉದ್ದವಾದ ನಿಲುವಂಗಿಯನ್ನು ಧರಿಸುವ ಕಾರಣದಿಂದ ಹಾಗೆ ತೋರುವುದಲ್ಲ. ಅವರ ಮುಖಚರ್ಯೆ ಯಹೂದಿಗಳನ್ನು ಹೋಲುವುದರಿಂದಲೇ ಆ ರೀತಿ ತೋರುತ್ತದೆ.

"ಯಹೂದಿಗಳಿಗೂ ಕಾಶ್ಮೀರಕ್ಕೂ ಸಂಬಂಧ ಕಲ್ಪಿಸುವ ಬಲವತ್ತಾದ ಪಾರಂಪರ್ಯ ವಿಶ್ವಾಸ ನೆಲೆಗೊಂಡಿರುವುದು ಒಂದು ಯೋಗಾಯೋಗವೋ? ಯೇಸುಕ್ರಿಸ್ತರ್ರು ಶಿಲುಬೆಯಲ್ಲಿ ಮೃತರಾಗಲಿಲ್ಲವೆಂದೂ, ಆ ಶಿಕ್ಷೆಯಿಂದ ರಕ್ಷೆಯನ್ನು ಹೊಂದಿ, ಅನಂತರ ಮೈಮರೆಸಿ ಕಳೆದುಹೋದ ಗೋತ್ರಗಳನ್ನು ಹುಡುಕುತ್ತಾ ಕಾಶ್ಮೀರ, ಲಡಾಖ್ ಮತ್ತು ಟಿಬೇಟ್ ಪ್ರದೇಶಗಳನ್ನು ಸಂದರ್ಶಿಸಿ ಕೊನೆಗೆ ಶ್ರೀನಗರದಲ್ಲಿ ಮೃತರಾಗಿ ಸಮಾಧಿಗೊಳಿಸಲ್ಪಟ್ಟರೆಂಬ ಒಂದು ವದಂತಿ ಇಲ್ಲಿ ಹಲವಾರು ವರ್ಷಗಳಿಂದ ಹಬ್ಬುತ್ತಾ ಇದೆ. ಕಾಶ್ಮೀರದ ಕಥೆ ಒಬ್ಬ ಪ್ರವಾದಿಯ ಕುರಿತು ವಿವರಿಸುತ್ತದೆಯೆಂದೂ ಆ ಪ್ರವಾದಿ ಇಲ್ಲಿ ಜೀವಿಸಿ ಯೇಸುಕ್ರಿಸ್ತರ ಹಾಗೆಯೇ ದೃಷ್ಟಾಂತ ಕಥೆಗಳನ್ನು ಹೇಳುತ್ತಾ ಉಪದೇಶಿಸಿದರೆಂದೂ ಆ ಕಥೆಗಳು ಇಂದಿಗೂ ಕಾಶ್ಮೀರದಲ್ಲಿ ಪ್ರಚಲಿತವಿದೆಯೆಂದೂ ನನ್ನೊಡನೆ ಹೇಳಲಾಯಿತು". [ASIA — October 1930, U.S.A.]

ಭಾರತದ ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರು ತನ್ನ "ಗ್ಲಿಂಪ್‌ಸೆಸ್ ಓಫ್ ವರ್ಲ್ಡ್ ಹಿಸ್ಟರಿ" ಯಲ್ಲಿ ಈ ರೀತಿ ಬರೆದಿರುವರು:—

"ಮಧ್ಯ ಆಸ್ಯಾ, ಕಾಶ್ಮೀರ, ಲಡಾಖ್, ಟಿಬೇಟ್ ಮತ್ತು ಅದಕ್ಕಿಂತ ಉತ್ತರಕ್ಕಿರುವ ಪ್ರದೇಶಗಳಲ್ಲಿ ಯೇಸು ಕ್ರಿಸ್ತ ಅಥವಾ ಈಸಾ ಸಂಚರಿಸಿದ್ದರೆಂಬ ಒಂದು ದೃಢ ನಂಬಿಕೆ ಇಂದಿಗೂ ಇದೆ".

[Glimpses of World History—Page 84].

ಯೇಸುಕ್ರಿಸ್ತರು ತನ್ನ ಗಾಯಗೊಂಡ ಸ್ಥೂಲ ಶರೀರದೊಂದಿಗೆ ಜೀವ ಸಹಿತರಾಗಿ ಶವವಿಟ್ಟ ಗುಹೆಯಿಂದ ಹೊರಗೆ ಬಂದರೆಂಬ ಹಾಗೂ ಅವರು ಆಕಾಶಾರೋಹಣ ಗೈಯ್ಯದೆ ಭೂಮಿಯಲ್ಲಿಯೇ ಜೀವಿಸಿದ್ದರೆಂಬ ಸಂಗತಿಯನ್ನು ಗಮನದಲ್ಲಿರಿಸಿ ನಿಷ್ಕಳಂಕ ಮನೋಭಾವದಿಂದ ಆಲೋಚಿಸುವ ಚಿಂತಾಶೀಲ ಬುದ್ಧಿವಂತ ಜನರು ಶ್ರೀನಗರದ ಖಾನ್‌ಯಾರ್ ಬೀದಿಯಲ್ಲಿ ಸಮಾಧಿಗೊಳಿಸಲ್ಪಟ್ಟ ವ್ಯಕ್ತಿ ಮರ್‌ಯಮರ ಮಗನಾದ ಯೇಸುಕ್ರಿಸ್ತರಲ್ಲದೆ ಬೇರೆ ಯಾರೂ ಅಲ್ಲವೆಂಬ ತೀರ್ಮಾನಕ್ಕೆ ತಲುಪುವರೆಂದು ನನಗೆ ದೃಢ ವಿಶ್ವಾಸವಿದೆ.

ಯೇಸು ಕ್ರಿಸ್ತರು ಶಿಲುಬೆಯ ಮೇಲೆ ಮೃತರಾಗದಿದ್ದರೆ ಬೇರೆ ಎಲ್ಲಿಗೆ ಹೋದರು ? ಎಲ್ಲಿ ಮೃತರಾದರು ? ಎಂಬ ಪ್ರಶ್ನೆಗಳಿಗೆ ನಮ್ಮ ಉತ್ತರ ಇದೇ ಆಗಿದೆ.

ಯೇಸು ಕ್ರಿಸ್ತರ ಅಜ್ಞಾತ ಜೀವಿತದ ಕುರಿತಾಗಿರುವ ಸಂದಿಗ್ಧ ಪ್ರಶ್ನೆಗೆ ಇದರಲ್ಲಿ ಪರಿಹಾರವಿದೆ. ಇದಕ್ಕಿಂತ ಹೆಚ್ಚು ವಿಶ್ವಾಸನೀಯವೂ ಸಯುಕ್ತಿಕವೂ ಆದ ಪರಿಹಾರ ಬೇರೆ ಯಾರಾದರೂ ಸೂಚಿಸಬಲ್ಲರಾದರೆ ಅವರು ಮುಂದಕ್ಕೆ ಬಂದು ಅದನ್ನು ತೋರಿಸಲಿ. ಪ್ರಪಂಚವು ಅದರ ಕುರಿತು ತೀರ್ಮಾನಿಸುವುದು.

ಕೊನೆಯದಾಗಿ ಒಂದು ಸಂಗತಿ ಹೇಳಲು ನಾನು ಇಚ್ಛಿಸುತ್ತೇನೆ. ಪ್ರಾಚ್ಯ ಶಾಸ್ತ್ರಜ್ಞರು ಈ ಸಮಾಧಿಯನ್ನು ತೆರೆದು ಪರಿಶೋಧಿಸಿದರೆ ಅವರಿಗೆ ಮೇಲಿನ ವಾದವನ್ನು ಪುರಸ್ಕರಿಸುವ ಶಿಲಾ ಶಾಸನ ಅಥವಾ ಬೇರೆ ಯಾವುದಾದರೂ ಚಿಹ್ನೆಗಳು ದೊರೆತು, ಏಕದೇವರನ್ನು ಪೂಜಿಸಲು ಜನರಿಗೆ ಕರೆಯನ್ನೀಯಲು ನಿಯುಕ್ತನಾದ ವ್ಯಕ್ತಿಯನ್ನೇ ದೇವರನ್ನಾಗಿ ಮಾಡಿ ಪೂಜಿಸುತ್ತಿರುವ ನೂರಾರು ಮಿಲಿಯ ಜನರು ತಮ್ಮ ಅಸಂಗತ ವಿಶ್ವಾಸದಿಂದ ಮುಕ್ತರಾಗುವಂತೆ ಮಾಡಲು ಅವರು ಸಹಕಾರಿಯಾಗುವರು.

(ಮುಂದುವರಿಯುವುದು)

# BOOKS ON ISLAM AND CONTEMPORARY RELIGIONS

| | | |
|---|---|---|
| 1. | Holy Quran with Arabic Text and English Translation | 12-00 |
| 2. | Ahmadiyyat or The True Islam<br>By Hazrat Mirza Bashiruddin Mahmud Ahmad | 8-00 |
| 3. | New World Order<br>By Hazrat Mirza Bashiruddin Mahmud Ahmad | 2-25 |
| 4. | The Teachings of Islam<br>By Hazrat Mirza Ghu'am Ahmad | 6-00 |
| 5. | Characteristics of the Quranic Teachings<br>By Hazrat Mirza Bashiruddin Mahmud Ahmad | 2-25 |
| 6 | Where did Jesus Die?<br>By J D. Shams, Ex-Imam, London Mosque | 2-25 |
| 7. | The Tomb of Jesus<br>By Sufi M. R. Bengali | 0-75 |
| 8. | Jesus in India<br>By Hazrat Mirza Ghulam Ahmad | 2-25 |
| 9. | The Christian Doctrine of Atonement<br>By Dr. Mufti Muhammad Sadiq, D.D., LL.D , S.S P. (Lond) | 1-50 |
| 10. | An Interpretation of Islam<br>By Prof. Dr. Laura Veccia Vaglieri | 1-50 |

Write to

**NAZIR DAWAT-O-TABLIGH**

P. O. QADIAN - 143516. (Punjab)

Regd. with the Registar of Newspapers for India, Regd. No. R.N. 27354/75
YUGARASHMI Kanada Quarterly, January-March 1978/Sulh-Aman 1356.

*AN INTERNATIONAL SYMPOSIUM ON*

# THE DELIVERANCE OF JESUS FROM THE CROSS

**Will be held by the U. K. Mission of Ahmadiyya Movement in Islam on 2nd, 3rd and 4th June 1978.**

- Papers to be read by scholars of International repute
- An Exhibition of literature produced by eminent historians and writers on the subject.
- A questions and answers session.
- Maps, Photographs and pictures of Holy Shroud and the Tomb of Jesus in Kashmir.

*Subject on which papers will be read:*

- JESUS DID NOT DIE ON THE CROSS (Scriptural evidence)
- JESUS DIED A NATURAL DEATH (Quranic evidence)
- THE HOLY SHROUD OF TURIN (Scientific evidence
- TRAVEL OF JESUS AFTER THE INCIDENTS OF CRUCIFIXION (Historical evidence)
- AUTHENTICITY OF THE TOMB OF JESUS IN KASHMIR (Historical & Geological evidence)

This conference on the Deliverance of Jesus from the Cross is a step further in the direction that Jesus escaped death on the Cross.

*The Secretary,*

**The International Symposium**
**The London Mosque**
**16, Gressenhall Road,**
**Southfields, S. W.18**

Printed by: B. Madhava Kulal, at Chandra Printers, Lower Car Street, Mangalore
Edited and Published by Muhammad Yusuf on behalf of Jamath Ahamadiyya
Mangalore at 23/1008 Ansari Road, Bunder, Mangalore-575001.